ಲಂಕೇಶ್

ಫೆಬ್ರವರಿ 22, 2012 ಪುಟ 20 ರೂ. 14/-



ನಮ್ಮ ಕರಿಬಸಣ್ಣ



ಅಯ್ಯೋ ರಾಮ....

ಇದು ಕಾಮ ಕಮಲ

ಚಿತ್ರದುರ್ಗ: ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಎಂಬ ಪುಂಡರ ನಾಯಕ

ಮೈಸೂರು ಜೈಲಿನಲ್ಲಿ ಅಧಿಕಾರಿಗಳ ಲೂಟಿ

ರೇವ್ ಪಾರ್ಟಿ ಭಟ್ಟನ ಬೆತ್ತಲೆ ಬ್ಯುಸಿನೆಸ್!!






ಗುಲಬರ್ಗಾ: ಮಂಗನ ಮಾಣಿಕ್ಯ ದರ್ಶನ


ಪಠ್ಯಪುಸ್ತಕದಲ್ಲಿ ಬಿಜೆಪಿ ಸರ್ಕಾರ ತರುತ್ತಿರುವ ಬದಲಾವಣೆಗಳ ಸ್ವರೂಪವನ್ನು ನಾಡಿನ ಜನತೆ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಿದೆ. ತಾವು ನೇಮಕ ಮಾಡಿದ ಆರೆಸ್ಸೆಸ್ ವಟುಗಳು ರಚಿಸಿದ ಕರಡನ್ನೇ ಯಾವುದೇ ಚರ್ಚೆಯಿಲ್ಲದೆ ಕ್ಯಾಬಿನೆಟ್ಟಿನಲ್ಲಿ ಅನುಮೋದಿಸಿ ಮುದ್ರಿಸಲು ಹೊರಟಿದೆ. ಆ ಪುಸ್ತಕದ ಪಠ್ಯವನ್ನು ಒಂದು ರಹಸ್ಯ ಬಾಂಬ್ ರೀತಿಯಲ್ಲಿ ಜನರ ಮೇಲೆ ಪ್ರಯೋಗಿಸಲು ಹೊರಟಿರುವಾಗ ಅದೇನೆಂದು ಅರ್ಥಮಾಡಿಕೊಂಡು ಅದರ ಫ್ಯೂಸ್ ಕಿತ್ತೊಗೆಯುವ ಅಗತ್ಯವಿದೆ.

ಪಠ್ಯಪುಸ್ತಕಗಳ ಕೇಸರೀಕರಣ

5 ಮತ್ತು 8 ನೇ ತರಗತಿಯ ಮಕ್ಕಳಿಗೆ ವಿಷಪ್ರಾಶನ



ಶಿವಸುಂದರ್ ಚಾರ್ವಾಕ



ಬಿಜೆಪಿ ಸರ್ಕಾರದೊಳಗಡೆ ಏನೇ ಮತಭೇದಗಳಿದ್ದರೂ ಹಿಂದೂತ್ವದ ಅಜೆಂಡಾವನ್ನು ಆಚರಣೆಗೆ ತರುವಲ್ಲಿ ಮಾತ್ರ ಯಡ್ಡಿ-ರೆಡ್ಡಿ, ಯಡ್ಡಿ-ಈಶ್ವರಪ್ಪ ಎಲ್ಲರೂ ಒಂದಾಗಿಬಿಡುತ್ತಾರೆ. ಕೆಲವೊಮ್ಮೆ ಅದಕ್ಕೆ ಕಾಂಗ್ರೆಸ್ ಒಳಗೂ ಮಿತ್ರರು ಸಿಕ್ಕಿಬಿಡುವುದು ಅಪರೂಪವೇನಲ್ಲ. (ಇತ್ತೀಚೆಗೆ ದೆಹಲಿ ಯೂನಿವರ್ಸಿಟಿಯಲ್ಲಿ ಎ.ಕೆ.ರಾಮಾನುಜನ್ ಅವರ 'ಮುನ್ನೂರು ರಾಮಾಯಣಗಳು' ಎಂಬ ಪುಸ್ತಕವನ್ನು ಎಬಿವಿಪಿ ಅಪಪ್ರಚಾರದಿಂದ ಹಿಂತೆಗೆದುಕೊಳ್ಳಲಾಯಿತು. ತನ್ನದಲ್ಲದ ಕ್ಷೇತ್ರದಲ್ಲೂ ಕಾರಣವಿಲ್ಲದೆ ಮೂಗುತೂರಿಸುವ ಕಾಂಗ್ರೆಸ್‌ನ ಶಿಕ್ಷಣ ಮಂತ್ರಿ ಕಪಿಲ್ ಸಿಬಲ್ ತಾನು ಇದರಲ್ಲಿ ಮಾತ್ರ ಮೂಗುತೂರಿಸುವುದಿಲ್ಲ ಎಂದು ಸುಮ್ಮನೆ ಕೂತಿದ್ದು ಇದಕ್ಕೆ ತಾಜಾ ಉದಾಹರಣೆ.) ಅದೇನೇ ಇರಲಿ, ಬಿಜೆಪಿಯೊಳಗಿನ ಭಿನ್ನಾಭಿಪ್ರಾಯಗಳನ್ನು ಸೆಕ್ಯುಲಾರ್ ಕಾರಣಗಳಿಗೆ ಬಳಸಿಕೊಳ್ಳಬಹುದೆಂಬ ಭ್ರಾಂತಿ ನೀಗುವಂತೆ ಈಗ ಬಿಜೆಪಿ ಸರ್ಕಾರ ಶಿಕ್ಷಣದಲ್ಲಿ ತನ್ನ ಹಿಂದೂತ್ವ ಅಜೆಂಡಾವನ್ನು ದೊಡ್ಡ ಮಟ್ಟದಲ್ಲಿ ಜಾರಿಗೆ ತರಲು ಹೊರಟಿದೆ. ಸದ್ದುಗದ್ದಲವಿಲ್ಲದಂತೆ 5 ಮತ್ತು 8 ನೇ ತರಗತಿಯ ಪಠ್ಯಪುಸ್ತಗಳನ್ನು ದೊಡ್ಡ ಮಟ್ಟದಲ್ಲಿ ಕೇಸರೀಕರಣ ಮಾಡಲು ಹೊರಟಿದೆ. ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಇದರ ಬಗ್ಗೆ ಸಿ.ಎಸ್. ದ್ವಾರಕಾನಾಥ್ ಅವರು ಒಂದು ಲೇಖನ ಬರೆದು ರಾಜ್ಯದ ಜನತೆಯ ಗಮನ ಸೆಳೆಯದಿದ್ದರೆ, ನಂತರದಲ್ಲಿ 'ಪ್ರಜಾವಾಣಿ', 'ದಿ ಹಿಂದೂ' ಇನ್ನಿತರ ಪತ್ರಿಕೆಗಳು ಅದರ ಬಗ್ಗೆ ವಿಶೇಷವಾಗಿ ಬರೆದು ಜನರ ಗಮನಕ್ಕೆ ತರದಿದ್ದರೆ, ನಾಡಿನ ಮಕ್ಕಳ ಮೆದುಳಲ್ಲಿ ಮೌಢ್ಯ ಮತ್ತು ಕೋಮುವಾದಿ ವಿಷವನ್ನು ತಣ್ಣಗೆ ಬೆರೆಸುವ ಕೆಲಸ ಮುಗಿದೇ ಹೋಗುತ್ತಿತ್ತು. ಈಗಲೂ ಅದು ನಿಂತಿದೆಯಂತಲ್ಲ, ಕೋಮು ಸೌಹಾರ್ದ ವೇದಿಕೆಯೂ ಸೇರಿದಂತೆ ದಲಿತ ಸಂಘರ್ಷ ಸಮಿತಿಗಳು, ಎಡಪಕ್ಷಗಳು ಇದರ ಬಗ್ಗೆ ಪ್ರತಿರೋಧವನ್ನು ವ್ಯಕ್ತ ಪಡಿಸುತ್ತಿದ್ದರೂ ಶಿಕ್ಷಣ ಕ್ಷೇತ್ರದ ಮೇಲೆ ಕಾಗೆ ಹಾರಿಸಲು ಹೊರಟಿರುವ ಕಾಗೇರಿ ಈ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡಲು ಈಗಾಗಲೇ 14 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿಕೆ ಇತ್ತಿದ್ದಾನೆ. ಹೀಗಾಗಿ ನಾಡಿನ ಮಕ್ಕಳ ತಲೆಯಲ್ಲಿ ವಿಷ ತುಂಬಲು ಬಿಜೆಪಿ ಸರ್ಕಾರ ದೃಢ ನಿರ್ಧಾರ ಮಾಡಿ ಹೊರಟಿದೆ. ಆದ್ದರಿಂದಲೇ ಇದನ್ನು ತಡೆಯಬೇಕೆಂದರೆ ನಾಡಿನ ಜನರೂ ದೃಢ ನಿರ್ಧಾರದಿಂದ ದೊಡ್ಡ ಹೋರಾಟಕ್ಕೆ ಅಣಿಯಾಗಬೇಕಿದೆ.

ಅದಕ್ಕೆ ಮುಂಚೆ ಈ ಪಠ್ಯಪುಸ್ತಕದಲ್ಲಿ ಬಿಜೆಪಿ ಸರ್ಕಾರ ತರುತ್ತಿರುವ ಬದಲಾವಣೆಗಳ ಸ್ವರೂಪವನ್ನು ನಾಡಿನ ಜನತೆ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಿದೆ. ಏಕೆಂದರೆ ಬಿಜೆಪಿ ಸರ್ಕಾರ ಈ ಪಠ್ಯಗಳನ್ನು ಪಠ್ಯಪುಸ್ತಕ ರಚನಾ ಮಂಡಳಿಯ - ಅದರಲ್ಲೂ ಸಮಾಜ ವಿಜ್ಞಾನ ಪಠ್ಯಮಂಡಳಿಯ - ಅಧ್ಯಕ್ಷರ ಗಮನಕ್ಕೆ ಎಲ್ಲವನ್ನೂ ತರದೆ ಮುದ್ರಿಸಲು ಹೊರಟಿದೆ. ತಾವು ನೇಮಕ ಮಾಡಿದ ಆರೆಸ್ಸೆಸ್ ವಟುಗಳು ರಚಿಸಿದ ಕರಡನ್ನೇ ಯಾವುದೇ ಚರ್ಚೆಯಿಲ್ಲದೆ ಕ್ಯಾಬಿನೆಟ್ಟಿನಲ್ಲಿ ಅನುಮೋದಿಸಿ ಮುದ್ರಿಸಲು ಹೊರಟಿದೆ. ಆ ಪುಸ್ತಕದ ಪಠ್ಯವನ್ನು ಒಂದು ರಹಸ್ಯ ಬಾಂಬ್ ರೀತಿಯಲ್ಲಿ ಜನರ ಮೇಲೆ ಪ್ರಯೋಗಿಸಲು ಹೊರಟಿರುವಾಗ ಅದೇನೆಂದು ಅರ್ಥಮಾಡಿಕೊಂಡು ಅದರ ಫ್ಯೂಸ್ ಕಿತ್ತೊಗೆಯುವ ಅಗತ್ಯವಿದೆ.

2005ರಲ್ಲಿ ಕೇಂದ್ರದ ಎನ್.ಸಿ.ಇ.ಆರ್.ಟಿ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ದೇಶಾದ್ಯಂತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಪಠ್ಯಗಳನ್ನು ಪುನರ್ ರಚಿಸಲು ಒಂದು ಮಾರ್ಗದರ್ಶಿ ನಿಯಮಾವಳಿಗಳನ್ನು ರೂಪಿಸಿತು. ಅದರಂತೆ ದೇಶದ ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಈ ಮಾರ್ಗದರ್ಶಿ ಸೂತ್ರಕ್ಕನುಗುಣವಾಗಿ ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯವನ್ನು ಪುನರ್ ರಚಿಸಬೇಕಿತ್ತು. ಈ ಮಾರ್ಗದರ್ಶಿ ಸೂತ್ರದ ಪ್ರಧಾನ ಆಶಯಗಳು:

1. ಮಕ್ಕಳ ವಿಶ್ಲೇಷಣಾ ಮತ್ತು ಸೃಜನಶೀಲ ಸಾಮರ್ಥ್ಯಕ್ಕೆ ಬೇಕಾದ ಮನೋಭೂಮಿಕೆಯನ್ನು ಸಿದ್ಧಪಡಿಸುವುದು. ವಿವಿಧ ಬಗೆಯ ವ್ಯಾಖ್ಯಾನಗಳಿರುವಾಗ ಒಂದು ವೈಜ್ಞಾನಿಕ ಪದ್ಧತಿಯ ಪ್ರಕಾರ ಹೆಚ್ಚು ವಸ್ತುನಿಷ್ಠ ನಿರ್ಣಯಗಳಿಗೆ ತಲುಪಲು ಬೇಕಾದ ವೈಜ್ಞಾನಿಕ ವಿಶ್ಲೇಷಣಾ ಸಾಮರ್ಥ್ಯವನ್ನು ಪೊರೆ ಯುವುದು.
2. ಸಮಾಜ ವಿಜ್ಞಾನವು ಸ್ವಾತಂತ್ರ್ಯ, ಪರಸ್ಪರ ವಿಶ್ವಾಸ, ಪರಸ್ಪರ ಗೌರವ, ಸಮಾಜದಲ್ಲಿರುವ ವಿವಿಧತೆಗಳ ಬಗ್ಗೆ ಅಸಹನೆಗಿಂತ ಗೌರವಗಳಂಥ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ಬೇಕಾದ ತಳಹದಿಯನ್ನು ರೂಪಿಸುವುದನ್ನೂ ಸಹ ತನ್ನ ಗುರಿಯಾಗಿಟ್ಟು ಕೊಂಡಿರಬೇಕು. ಹೀಗಾಗಿ ಸಮಾಜ ವಿಜ್ಞಾನದ ಬೋಧನೆಯ ಗುರಿಯು ಮಕ್ಕಳಲ್ಲಿ ಮೇಲೆ ಹೇಳಲಾದ ಮೌಲ್ಯಗಳನ್ನು ಹಾಳು ಮಾಡಲು ನಿರತರಾದ ಶಕ್ತಿಗಳನ್ನು ಸ್ವತಂತ್ರವಾಗಿ ಪ್ರತಿರೋಧಿಸಲು ಬೇಕಾದ ಮಾನಸಿಕ ಮತ್ತು ನೈತಿಕ ಶಕ್ತಿಯನ್ನು ಒದಗಿಸುವುದೇ ಆಗಿದೆ.

ಈ ಗುರಿಗಳನ್ನು ಈಡೇರಿಸಿಕೊಳ್ಳಲು ಪಠ್ಯಬೋಧನಾ ಚೌಕಟ್ಟಿನಲ್ಲಿ:

1. ಪ್ರಾದೇಶಿಕ ಗ್ರಹಿಕೆಗಳಲ್ಲಿ ರಾಷ್ಟ್ರ ಮತ್ತು ರಾಷ್ಟ್ರೀಯ ಐಕ್ಯತೆಯ ಗ್ರಹಿಕೆಗಳು ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದಕ್ಕೆ ಒತ್ತುಕೊಡುವುದು. ಆ ನಿಟ್ಟಿನಲ್ಲಿ ಇಡೀ ಪಠ್ಯಗಳನ್ನು ಪ್ರಾದೇಶಿಕಗೊಳಿಸುವುದು.
2. ಪಠ್ಯಪುಸ್ತಕವನ್ನು ಕೇವಲ ಒಂದು ಏಕೈಕ ನಿರ್ದೇಶನಾ ಪಠ್ಯವನ್ನಾಗಿ ಮಾಡದೆ ಅದನ್ನು ಕೇವಲ ವಿಷಯ ಪರಿಚಯ ಪಠ್ಯವನ್ನಾಗಿ ಮಾತ್ರ ಬಳಸಿ, ವಿದ್ಯಾರ್ಥಿಗಳು ಪಠ್ಯದಾಚೆಗೂ ಜ್ಞಾನಸಂಗ್ರಹಕ್ಕೆ ಅನ್ವೇಷಿಸುವಂತೆ ಪ್ರಚೋದಿಸುವುದು.
3. ಸಮಾಜ ವಿಜ್ಞಾನ ಪಠ್ಯಗಳನ್ನಂತೂ ಕೇವಲ ವ್ಯಾವಹಾರಿಕ ಬಳಕೆಯ ಜ್ಞಾನವನ್ನಷ್ಟೆ ಬೋಧಿಸುವಂತಾಗಿದೆ. ಆದ್ದರಿಂದ ಆ ಇಡಿ ಜ್ಞಾನಶಿಸ್ತಿನ ಪಠ್ಯವನ್ನು ಸಾಮಾಜಿಕ ರಾಜಕೀಯದಲ್ಲಿ ಸಮಾನತೆ, ನ್ಯಾಯಪ್ರಜ್ಞೆಗಳಂತಹ ಆದರ್ಶಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವ ಆದರ್ಶವಾದಿ ಪಠ್ಯವನ್ನಾಗಿ ಪುನರ್ ರಚಿಸುವ ಅಗತ್ಯವಿದೆ.
4. ಅಲ್ಲದೆ ಸಮಾಜ-ವಿಜ್ಞಾನ ಬೋಧನೆಗಳಲ್ಲಿ ಲಿಂಗ ತಾರತಮ್ಯವನ್ನು ಹೊಡೆದೋಡಿಸುವ ಉದ್ದೇಶದಿಂದ ಸ್ತ್ರೀ ದೃಷ್ಟಿಕೋನವನ್ನು ಇತಿಹಾಸ ಪಠ್ಯ ಬೋಧನೆಯಲ್ಲಿ ಆಂತರಿಕವಾಗಿಯೇ ಅಡಕಗೊಳಿಸಬೇಕು.
5. ಅದೇರೀತಿ ಪೌರನೀತಿ-ಸಿವಿಕ್ಸ್ ಎಂಬ ಪರಿಕಲ್ಪನೆಯೇ ಮಾಹತುಶಾಹಿ ದೃಷ್ಟಿಕೋನದಲ್ಲಿ ಹುಟ್ಟಿದ್ದು ಅದನ್ನು ರಾಜನೀತಿ ಎಂದು ಬದಲಿಸಬೇಕು ಮತ್ತು ಅದರಲ್ಲಿ ಸಮಾಜದಲ್ಲಿ ಯಾವ ಪ್ರಕ್ರಿಯೆಯುಗಳು ಶೋಷಕ ಶಕ್ತಿಗಳನ್ನು ಮತ್ತು ಅದರ ವಿರುದ್ಧ ಪ್ರತಿರೋಧಗಳನ್ನು ಹುಟ್ಟುಹಾಕುತ್ತವೆ ಎಂದು ಕಾಣಿಸಬೇಕು.

ಇವೇ ಇನ್ನಿತ್ಯಾದಿ ಸಲಹೆಗಳನ್ನು ನೀಡಿತ್ತು. ಎಲ್ಲಕ್ಕಿಂತ ಹೆಚ್ಚಾಗಿ :

-ಸಮಾಜ ವಿಜ್ಞಾನವನ್ನು ಅಧ್ಯಯನ ಮಾಡುವಾಗ ಸಮಾಜದ ಸಮಸ್ಯೆಗಳತ್ತ ಅದರಲ್ಲೂ ಬಡತನ, ಜಾತಿಪದ್ಧತಿ, ಅನಕ್ಷರತೆ, ಲಿಂಗ ತಾರತಮ್ಯ ಇನ್ನಿತ್ಯಾದಿ ಸಮಸ್ಯೆಗಳತ್ತ ವಿದ್ಯಾರ್ಥಿಗಳ ಗಮನ ಹರಿಯುವಂತೆ ಮಾಡುವುದು ಸಮಾಜ ವಿಜ್ಞಾನಗಳ ಬೋಧನೆಯ ಪ್ರಮುಖ ವಸ್ತು ಮತ್ತು ಉದ್ದೇಶವಾಗಬೇಕು ಎಂಬುದು ಎನ್‌ಸಿಇಆರ್‌ಟಿ ಮಾರ್ಗದರ್ಶಿ ಸೂತ್ರಗಳ ಪ್ರಮುಖ ನಿರ್ದೇಶನವಾಗಿತ್ತು.

-ಅದರಲ್ಲೂ ವಿವಿಧ ಜನಸಮುದಾಯಗಳ ಹಿನ್ನೆಲೆಯುಳ್ಳ ಭಾರತೀಯ ಸಮಾಜವನ್ನು ಸ್ತ್ರೀಯರ, ಆದಿವಾಸಿಗಳ, ದಲಿತರ ಇನ್ನಿತ್ಯಾದಿ ವಿಭಿನ್ನ ಹಿನ್ನೆಲೆಯಿಂದ ಅರ್ಥಮಾಡಿಕೊಳ್ಳುವುದು ಎಂಬ ನಿರ್ದೇಶನವನ್ನೂ ಆ ಸೂತ್ರ ನೀಡುತ್ತದೆ.

-ವಿಭಿನ್ನ ಸಂಸ್ಕೃತಿ, ಭಾಷೆ ಮತ್ತು ಬದುಕುಗಳ ಬಗ್ಗೆ ಗೌರವವನ್ನು ರೂಢಿಸಿಕೊಳ್ಳುವುದು ಮತ್ತು ಸಂವಿಧಾನದಲ್ಲಿ ಘೋಷಿತವಾದ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳನ್ನು ರೂಢಿಸಿಕೊಳ್ಳುವುದು,

-ರಾಜನೀತಿಯಲ್ಲಿ ಸಂವಿಧಾನದಲ್ಲಿ ಘೋಷಿತವಾದ ಸಮಾಜವಾದಿ, ಜಾತ್ಯತೀತ ಭಾರತವನ್ನು ಕಟ್ಟುವುದು ಹೇಗೆ ಎಂಬ ದಿಕ್ಕಿನೆಡೆಗೆ ಕೇಂದ್ರೀಕೃತವಾಗಬೇಕು ಎಂದೂ ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ.

ಮೇಲ್ನೋಟಕ್ಕೆ ಭಾರತವನ್ನು ನಿಜವಾದ ಸೆಕ್ಯುಲಾರ್, ಸಮಾಜವಾದಿ ಗಣರಾಜ್ಯವನ್ನಾಗಿ ಕಟ್ಟಲು, ಪೌರರನ್ನು ರೂಪಿಸಲು ಬೇಕಾದ ಪಠ್ಯ- ಮತ್ತು ಬೋಧನಾ ಪದ್ಧತಿಗಳನ್ನು ಕೇಂದ್ರದ ಎನ್‌ಸಿಇಆರ್‌ಟಿ ನಿರ್ದೇಶನಗಳು ಒಳಗೊಂಡಿತ್ತು.

(<http://www.ncert.nic.in/new_ncert/ncert/rightside/links/pdf/focus_group/social_sciencel.pdf>)

2005ರ ಎನ್‌ಸಿಇಆರ್‌ಟಿ ನಿರ್ದೇಶನದನ್ವಯ ಕರ್ನಾಟಕ ದಲ್ಲೂ ಆಗಿನ ಜೆಡಿಎಸ್-ಬಿಜೆಪಿ ಸರ್ಕಾರ ಪಠ್ಯಪುನರ್ ರಚನಾ ಸಮಿತಿಗಳನ್ನು ನೇಮಿಸಿತು. ಯಥಾಸರ್ಕಾರ ತಥಾ ಸಮಿತಿ ಎಂಬಂತೆ ಕೋಮುವಾದಿ ಮತ್ತು ಪ್ರಗತಿಪರರು ಎರಡು ಬಗೆಯ ಚಿಂತನೆಯುಳ್ಳ 'ತಜ್ಞರು' ಸಮಿತಿಗಳಲ್ಲಿ ನೇಮಕಗೊಂಡರು. ಆದರೆ 2008ರಲ್ಲಿ ಬಿಜೆಪಿ ಸರ್ಕಾರವೇ ಸಂಪೂರ್ಣವಾಗಿ ಅಧಿಕಾರಕ್ಕೆ ಬಂದಮೇಲೆ ಈ ಸಮಿತಿಗಳಲ್ಲಿ ಅಧ್ಯಕ್ಷರ ಮತ್ತು ಪ್ರಗತಿಪರ ಸದಸ್ಯರುಗಳ ಗಮನಕ್ಕೇ ಬರದಂತೆ ಆರೆಸ್ಸೆಸ್ ಹಿನ್ನೆಲೆಯುಳ್ಳ ಪರಮ ಕೋಮುವಾದಿ ಗಳು ಪಠ್ಯರಚನಾ ಸಮಿತಿಯನ್ನು ಸೇರಿಕೊಂಡರು. ಹಲವು ಪ್ರಗತಿಪರ ಸದಸ್ಯರನ್ನು ಏಕಾಏಕಿ ಕಿತ್ತುಹಾಕಲಾಯಿತು. ಉಳಿದವರು ಈ ಹುನ್ನಾರವನ್ನು ಮೊದಲೇ ಅರ್ಥಮಾಡಿ ಕೊಂಡು ಹೊರಬಂದಿದ್ದರೆ ಬಿಜೆಪಿ ಸರ್ಕಾರ ಇನ್ನಷ್ಟು ಬಯಲಾಗುತ್ತಿತ್ತು. ಆದರೆ ಅವರು "ಇದ್ದಿದ್ದರಲ್ಲಿ ಏನಾದರೂ ಒಳ್ಳೇದು ಮಾಡಬಹುದು" ಎಂದು ಅಲ್ಲೇ ಉಳಿದು ಕೊಂಡರು. ಆದರೆ ಬಿಜೆಪಿ ಸರ್ಕಾರ ಅವರ ನೆರಳಲ್ಲೇ ಕೋಮುವಾದಿ ಪಠ್ಯಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಉಣಬಡಿಸಲು ಹೊರಟಿದೆ.

ಬಿಜೆಪಿ ಸರ್ಕಾರ ಈ ಸಮಿತಿಗಳನ್ನು ಹೇಗೆ ತನ್ನ ಪ್ರಚಾರ ಕಚೇರಿ ಮಾಡಿಕೊಂಡಿದೆಯೆಂದರೆ ಇಡೀ ಪಠ್ಯ ಸಂಯೋಜನೆಗೆ ಮುಡಿಬಡಿತ್ತಾಯ ಎನ್ನುವ ಆರೆಸ್ಸೆಸ್‌ನ ನಿಷ್ಠಾವಂತ ಸದಸ್ಯ ಮತ್ತು ಶಿಕ್ಷಣ ಇಲಾಖೆಯಲ್ಲಿ ಗುಮಾಸ್ತಗಿರಿಗೆ ಸಂಬಂಧಪಟ್ಟ ಕೆಲಸ ಮಾಡುವ ಅರ್ಹತೆಯನ್ನು ಬಿಟ್ಟರೆ ಬೇರೇನೂ ಶೈಕ್ಷಣಿಕ ಅಥವಾ ಅಕೆಡೆಮಿಕ್ ಅರ್ಹತೆಯಿಲ್ಲದ ವ್ಯಕ್ತಿಯನ್ನೂ ಸಂಯೋಜಕನನ್ನಾಗಿ ನೇಮಿಸಿದೆ. 9 ಮತ್ತು 10 ನೇ ತರಗತಿಯ ಪಠ್ಯ ರಚನೆಗೆ ಕೊಟ್ರೇಶ್ ಎಂಬ ಆರೆಸ್ಸೆಸ್ ವ್ಯಕ್ತಿಯನ್ನು ಮತ್ತು ಈಗ ಪ್ರಕಟವಾಗಿರುವ 5 ಮತ್ತು ಮುಂದೆ ಬರಲಿರುವ 6 ಮತ್ತು 7 ನೇ ತರಗತಿಯ ಇತಿಹಾಸ ಪಠ್ಯಕ್ಕೆ ರಾಜಶೇಖರ್ ಎಂಬ ಮತ್ತೊಬ್ಬ ಆರೆಸ್ಸೆಸ್ ಹಾಗು ಮಂಗಳೂರಿನ ಪಿಯು ಕಾಲೇಜಿನ ಪ್ರಿನ್ಸಿಪಾಲೊಬ್ಬರನ್ನು ನೇಮಕ ಮಾಡಲಾಗಿದೆ. 8 ನೇ ತರಗತಿಯ ಪಠ್ಯರಚನೆಯಲ್ಲಿ ವೈದಿಕ ಇತಿಹಾಸದ ಪಠ್ಯವನ್ನು ಸೇರಿಸಲು ಶೃಂಗೇರಿ ಮಠ ತನ್ನ ಉಪನ್ಯಾಸಕ ಭಕ್ತನೊಬ್ಬನನ್ನು ಅಟ್ಟಿತ್ತೆನ್ನುವ ಸುದ್ದಿಯೂ ಇದೆ. ಹಾಗೂ ಮಠದಿಂದ ಬಂದ ಬರಹವನ್ನೇ ಇತಿಹಾಸವೆಂದು ಸೇರಿಸಲು ಒತ್ತಾಯವನ್ನೂ ಹೇರಲಾಗಿತ್ತೆಂಬ ಸುದ್ದಿಯನ್ನು ಆ ಮಹಾಶಯರೇ ಅಲ್ಲಲ್ಲಿ ಹೇಳಿಕೊಂಡದ್ದಿದೆ...

ಅದೇನೇ ಇರಲಿ ಬಿಜೆಪಿ ಸರ್ಕಾರ ಹೇಗೆ ಪಠ್ಯ ಪುನರ್‌ರಚನೆಯ ಮೊದಲಿಗೆ ಪಠ್ಯ ಸಮಿತಿಯನ್ನೇ ತನ್ನ ಗುಪ್ತ ಹಿಂದೂತ್ವದ ಅಜೆಂಡಾಗಳಿಗೆ ಪೂರಕವಾಗಿ ಬಳಸಿಕೊಂಡಿದೆ ಎಂಬುದಕ್ಕೆ ಇವು ಉದಾಹರಣೆಗಳಷ್ಟೆ.

ಇತಿಹಾಸ ಪಠ್ಯಕ್ಕೆ ಇಷ್ಟೆಲ್ಲಾ 'ಕರಸೇವೆ' ಮಾಡಿದ ನಂತರ ಬಿಜೆಪಿ ಸರ್ಕಾರ ಈಗ ಹೊರತಂದಿರುವ 5 ಮತ್ತು 8 ನೇ ತರಗತಿಯ ಪಠ್ಯಗಳು ಗಾಬರಿಗೊಳಿಸುವಷ್ಟು ಹಿಂದೂತ್ವ ರಾಷ್ಟ್ರ ನಿರ್ಮಾಣದ ಉದ್ದೇಶವನ್ನು ಹೊಂದಿರುವುದು ಎದ್ದು ಕಾಣುತ್ತದೆ. ಭಾರತವನ್ನು ಸಂವಿಧಾನಬದ್ಧವಾಗಿಯಲ್ಲದೆ ಗುಪ್ತ ಹಿಂದೂತ್ವವಾದಿ ಅಜೆಂಡಾಗೆ ತಕ್ಕಂತೆ ಪ್ರತಿಗಾಮಿ ಬ್ರಾಹ್ಮಣಶಾಹಿ ಸ್ವಾರ್ಥ, ಮೇಲರಿಮೆಯುಳ್ಳ; ದಲಿತ, ಸ್ತ್ರೀ ಆದಿವಾಸಿ, ಅಲ್ಪಸಂಖ್ಯಾತರನ್ನು ಕೀಳಾಗಿ ಅಥವಾ ಶತ್ರುಗಳನ್ನಾಗಿ ಕಾಣುವ; ಮೇಲ್ಜಾತಿ ಮತ್ತು ಮೇಲ್ವರ್ಗದವರನ್ನು ಸರ್ವಗುಣ ಸಂಪನ್ನರಾಗಿ ಕಾಣುವಂತೆ ಮಾಡುವ ಪಠ್ಯಗಳನ್ನು ಬಹಳ ಜಾಣತನದಿಂದ ಸೇರಿಸಿದೆ.

ಮುಂದಿನ ಸಂಚಿಕೆಯಲ್ಲಿ ಹೇಗೆ 5 ಮತ್ತು 8 ನೇ ತರಗತಿಯ ಪಠ್ಯದಲ್ಲಿ ಸಂವಿಧಾನ ವಿರೋಧಿ ಅಂಶಗಳಿವೆ ಎಂಬುದನ್ನು ಕೂಲಂಕಷವಾಗಿ ಗಮನಿಸೋಣ. ಈಗ ಒಂದೇ ಒಂದು ಉದಾಹರಣೆಯನ್ನು ಗಮನಿಸಬಹುದು.

ಸಂಘಪರಿವಾರ ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡಲು ಆಯ್ಕೆ ಮಾಡಿಕೊಂಡಿರುವ ಇಷೂ ಬಾಬಾಬುಡನ್ ಗಿರಿಯದ್ದು. ಅಲ್ಲಿ ಕಳೆದ 400 ವರ್ಷಗಳಿಂದ ದಾದಾ ಹಯಾತ್ ಮೀರ್ ಖಲಂದರ್ ಅವರ ದರ್ಗ ಇದ್ದು ಅದೇ ಸೂಫಿ ಸಂತನನ್ನು ಮುಸ್ಲಿಮರು ದಾದಾ ಎಂದೂ ಬಡ ಮತ್ತು ದಲಿತ-ಶೂದ್ರ ಹಿನ್ನೆಲೆಯ ಭಕ್ತರು ದತ್ತಾತ್ರೇಯನೆಂದೂ ಶತಮಾನಗಳಿಂದ ನಡೆದುಕೊಂಡು ಬರುತ್ತಿದ್ದಾರೆ. ಆದರೆ ಬಾಬ್ರೀ ಮಸೀದಿ ನಾಶದ ನಂತರ ಎಲ್ಲಾ ಮಸೀದಿ ಮತ್ತು ದರ್ಗಾಗಳನ್ನು ಕೆಡವಿ ದೇವಸ್ಥಾನ ಮಾಡಲು ಹೊರಟಿರುವ ಸಂಘಪರಿವಾರ ಬಾಬಾಬುಡನ್ ಗಿರಿಯಲ್ಲಿ ಇರುವುದು ದರ್ಗಾ ಅಲ್ಲವೆಂದೂ, ಅಲ್ಲಿರುವುದು ದತ್ತಾತ್ರೇಯ ಪೀಠವೆಂದೂ 1992ರ ನಂತರ ಸತತ ಅಪಪ್ರಚಾರ ಮಾಡುತ್ತಿದೆ. ಈ ನಾಡಿನಲ್ಲಿ ಸೂಫಿ, ಬಾಬಾ ಮತ್ತು ಅವಧೂತ ಸಂಪ್ರದಾಯಗಳು ಸಂಗಮಿಸಿ ಸೃಷ್ಟಿಗೊಂಡ ದರ್ಗಾ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳದೆ ಉದ್ದೇಶಪೂರ್ವಕವಾಗಿ ಅದನ್ನು ಹಿಂದೂ ದೇವಸ್ಥಾನದ ಮೇಲೆ ಮುಸ್ಲಿಮ ಆಕ್ರಮಣದಿಂದ ಉಂಟಾದ ಅವಮಾನವೆಂದೂ ಅದನ್ನು 'ವಿಮೋಚನೆ' ಮಾಡುವುದೇ ಹಿಂದೂಗಳ ಪರಮ ಕರ್ತವ್ಯವೆಂದೂ 'ಚಳವಳಿ' ಕಟ್ಟಲು ಪ್ರಯತ್ನಿಸುತ್ತಿದೆ. ಆದರೆ ಕರ್ನಾಟಕದ ಜಾತ್ಯತೀತ ಶಕ್ತಿಗಳು ಸರಿಯಾದ ಸಮಯದಲ್ಲಿ ಸೂಕ್ತವಾಗಿ ಮಧ್ಯಪ್ರವೇಶ ಮಾಡಿದ್ದರಿಂದಾಗಿ ಈ ಪ್ರಯತ್ನಕ್ಕೆ ತಡೆಯುಂಟಾಗಿ ಅದು ದತ್ತಪೀಠವೋ ಅಥವಾ ದರ್ಗಾವೋ ಎಂಬ ದಾವೆ ಸುಪ್ರೀಂಕೋರ್ಟಿನಲ್ಲಿದೆ. ತಾನು ಅಂತಿಮ ತೀರ್ಪು ಕೊಡುವತನಕ ಯಥಾಸ್ಥಿತಿಯನ್ನು ಅಂದರೆ ಅದರ ದರ್ಗಾ ಸ್ವರೂಪವನ್ನು ಉಳಿಸಿಕೊಳ್ಳಬೇಕೆಂದು ಆದೇಶ ನೀಡಿದೆ.

ಆದರೆ ಮೈಸೂರು ವಿಭಾಗದ ಇತಿಹಾಸವನ್ನು ಬರೆಯುವಾಗ ಅಲ್ಲಿನ ಪ್ರವಾಸಿ ತಾಣಗಳನ್ನು ಪರಿಚಯಿಸುವ ವಿಭಾಗದಲ್ಲಿ ಚಿಕ್ಕಮಗಳೂರಿನ ಬಾಬಾಬುಡನ್ ಗಿರಿಯ ಬಗ್ಗೆ ವಿವರಣೆಯನ್ನು 5 ನೇ ತರಗತಿಯ ಪಠ್ಯದ ಪು. 49ರಲ್ಲಿ ಹೀಗೆ ಬರೆಯಲಾಗಿದೆ:

"ಬಾಬಾಬುಡನ್ ಗಿರಿ: ಇದು ಪಶ್ಚಿಮ ಘಟ್ಟದ ಒಂದು ಭಾಗ. ಇದನ್ನು ಚಂದ್ರದ್ರೋಣ ಪರ್ವತ ಎಂದು ಕರೆಯುತ್ತಾರೆ. ಇಲ್ಲಿ ಅನೇಕ ಗಿಡಮೂಲಿಕೆಗಳು ದೊರೆಯುತ್ತದೆ. ಇದರ ನೆತ್ತಿಯಲ್ಲಿರುವ ಗುಹೆಯಲ್ಲಿ ದತ್ತಾತ್ರೇಯ ಪೀಠವಿದೆ. ಇಲ್ಲಿಗೆ ಸಹಸ್ರಾರು ಮಂದಿ ಭಕ್ತರು ಬರುತ್ತಾರೆ.."

ಇದು ಉದ್ದೇಶಪೂರ್ವಕವಾಗಿ ಮಕ್ಕಳಲ್ಲಿ ಹಿಂದೂತ್ವವಾದಿ ಇತಿಹಾಸವನ್ನು ಬಿತ್ತುವುದಲ್ಲದೇ ಬೇರೇನು? ಅಲ್ಲದೇ ಇದು ಕೋರ್ಟು ಆದೇಶದ ಉಲ್ಲಂಘನೆಯೂ ಆಗಿದೆ. ಇಂಥಾ ಹಲವು ಹತ್ತು ಹಿಂದೂತ್ವವಾದಿ ಧೋರಣೆಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ 5 ನೇ ತರಗತಿಯ ಪಠ್ಯದಲ್ಲಿ ಹೇರಳವಾಗಿ ತೂರಿಕೊಂಡಿವೆ. ಅವೆಲ್ಲವನ್ನೂ ಮುಂದಿನ ಸಂಚಿಕೆಯಲ್ಲಿ ವಿವರವಾಗಿ ಪರಿಶೀಲಿಸೋಣ.

ಮಹಿಳಾ ವಿರೋಧಿ ಆರೆಸ್ಸೆಸ್ ಸಿದ್ಧಾಂತ



• ಗೌರಿ ಲಂಕೇಶ್
editorlankesh@gmail.com

ಕರ್ನಾಟಕದ ಬಗ್ಗೆ, ಕನ್ನಡಿಗರ ಬಗ್ಗೆ ಈಗ ಇಡೀ ಜಗತ್ತು ಹಾಸ್ಯ ಮಾಡುವಂತೆ, ಅಸಹ್ಯ ಪಡುವಂತೆ ಲಕ್ಷ್ಮಣ್ ಸವದಿ, ..ಪಾಟೀಲ ಮತ್ತು ಕೃಷ್ಣ ಪಾಲೇಮಾರ್ ಎಂಬ ಸಚಿವರು ..ತ್ರ ನಡೆದುಕೊಂಡಿಲ್ಲ. ಜೊತೆಗೆ ಈ ಮೂವರು ..ಮುಕರನ್ನು ಬೆಳೆಸಿದ ಮತ್ತು ಬೆಂಬಲಿಸಿದ ಬಿಜೆಪಿ ಮತ್ತು ..ರ ಪಿತೃಸಂಘಟನೆಯಾದ ಆರೆಸ್ಸೆಸ್ ಕೂಡ ಇವತ್ತು ..ಡಿಗರು ತಲೆ ತಗ್ಗಿಸುವಂತೆ ಮಾಡಿವೆ.

ಈ ಮಾತನ್ನು ಸುಮ್ಮನೆ ಹೇಳುತ್ತಿಲ್ಲ. ಆರೆಸ್ಸೆಸ್ ನೇತೃತ್ವದ ..ಘಪರಿವಾರ ಮಹಿಳೆಯರ ಬಗ್ಗೆ ಸದಾ ಮಾತೆ, ದೇವಿ ..ದೆಲ್ಲ ಪುಂಖಾನುಪುಂಖವಾಗಿ ಹೇಳಬಹುದು. ಆದರೆ ..ಸ್ಸೆಸ್ ತನ್ನ ಅಂತರಾಳದಲ್ಲಿ ಪುರುಷರ ಪ್ರಾಧಾನ್ಯವನ್ನೇ ..ಬಲಿಸುತ್ತದೆ ಮತ್ತು ಮಹಿಳೆಯರನ್ನು ದೇವತೆಯರಂತಲ್ಲ ..ಲಾಗಿ ದಾಸಿಯರಂತೆಯೇ ಪರಿಗಣಿಸುತ್ತದೆ. ಇದಕ್ಕೆ ..ವಾರು ಉದಾಹರಣೆಗಳನ್ನು ಕೊಡಬಹುದು. ..ದಲನೆಯದಾಗಿ ವಿಧವಾ ವಿವಾಹವನ್ನು ವಿರೋಧಿಸುವ ..ಸ್ಸೆಸ್ ಸತಿಪದ್ಧತಿಯನ್ನು ವೈಭವೀಕರಿಸುವ ಮೂಲಕ ..ಹಿಳಾವಿರೋಧಿ ಆಗಿದೆ. ಇನ್ನೂ ಸ್ಪಷ್ಟವಾಗಿ ಹೇಳ ..ಕೆಂದರೆ, ಈ ಹಿಂದೆ ಆರೆಸ್ಸೆಸ್‌ನ ಸರಸಂಘಚಾಲಕನಾಗಿದ್ದ ..ದರ್ಶನ್ ಎಂಬಾತ ಸಂದರ್ಶನವೊಂದರಲ್ಲಿ "ಭಾರತೀಯ ..ಹಿಳೆಯರಿಗೆ ಉನ್ನತ ಶಿಕ್ಷಣದ ಅಗತ್ಯತೆ ಇಲ್ಲ, ಅವರು ..ದುವೆಗೆ ಮುನ್ನ ತಮ್ಮ ತಂದೆತಾಯಂದಿರನ್ನು ..ೋಡಿಕೊಂಡು, ಮದುವೆಯ ನಂತರ ಗಂಡ, ಮಕ್ಕಳು ಮತ್ತು ..ನೆಯನ್ನು ನೋಡಿಕೊಂಡರೆ ಸಾಕು. ಇಂತಹ ..ಜವಾಬ್ದಾರಿಗಳನ್ನು ನಿಭಾಯಿಸಲು ಮಹಿಳೆಯರಿಗೆ ವಿದ್ಯೆ ..ಟ್ಟರೆ ಸಾಕು" ಎಂದಿದ್ದ. ಅಂದರೆ ಹೆಣ್ಣುಮಕ್ಕಳು ಎಂದೂ ..ತನವನ್ನು ಕಂಡುಕೊಳ್ಳದೆ ತಮ್ಮ ಇಡೀ ಜೀವನವನ್ನು ..ರರ ಸೇವೆಯಲ್ಲಿ ಕಳೆಯಬೇಕು, ಆ ಮೂಲಕ ಪುರುಷರಿಗೆ ..ಯರಾಗಿರಬೇಕು ಎಂಬುದೇ ಸುದರ್ಶನ್ ಮತ್ತು ಆತನ ..ಸ್ಸೆಸ್ಸಿನ ಸಿದ್ಧಾಂತವಾಗಿದೆ.

.. ದಾಸಿಯರು ಎಂದಮೇಲೆ ಮಹಿಳೆಯರು ಪುರುಷರ ..ರೀತಿಯ 'ಸೇವೆ'ಗಳಿಗೂ ಸಿದ್ಧರಿರಬೇಕು ಎಂದೇ ಅರ್ಥ. ..ತಹ ಸೇವೆಯಲ್ಲಿ ಸವದಿ, ಪಾಟೀಲ್ ಮತ್ತು ಪಾಲೇಮಾರ್ ..ಹದ ವಿಕೃತರ ಮೊಬೈಲ್‌ಗಳಲ್ಲಿ ಬಟ್ಟೆ ಬಿಚ್ಚುವ ಸೇವೆಯೂ ..ದಾಗಿರುತ್ತದೆ. ಇಂತಹ ಅಭಿಪ್ರಾಯ ವನ್ನು ಆರೆಸ್ಸೆಸ್ ತನ್ನ ..ಘಗಳಲ್ಲಿ ಮೂಡಿಸುವುದರಿಂದಲೇ ಈ ತ್ರಿಮೂರ್ತಿಗಳು ..ತಹ ಸೇವೆಯನ್ನು ಸದನದಂತಹ ಸ್ಥಳದಲ್ಲೂ ..ತೆಯುವಷ್ಟು' ನೀಚತನ ತೋರುತ್ತಾರೆ.

.. ರಾಜಕೀಯ ಕಾರಣಕ್ಕೆ ಆರೆಸ್ಸೆಸಿನ ಅಂಗ ಸಂಘಟನೆ ..ದ ಬಿಜೆಪಿ ಇವತ್ತು ಮಹಿಳೆಯರಿಗೆ ಚುನಾವಣೆಗಳಲ್ಲಿ ..ಸಲು ಟಿಕೆಟ್‌ಗಳನ್ನು ಕೊಡುತ್ತದೆ. ಆದರೆ ನಿಜವಾಗಲೂ ..ಜೆಪಿ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳುತ್ತದೆ? ಇದಕ್ಕೆ ..ಮ್ಮ ರಾಜ್ಯದ ಸಚಿವ ಸಂಪುಟವನ್ನು ನೋಡಿದರೆ ಉತ್ತರ ..ತ್ತದೆ. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಓರ್ವ ಶೋಭಾ ಕರಂದ್ಲಾಜೆಯನ್ನು ಹೊರತುಪಡಿಸಿದರೆ ಮತ್ತೊಬ್ಬ ಮಹಿಳೆಗೆ ಸಚಿವ ಸ್ಥಾನವನ್ನು ನೀಡಿಲ್ಲ. ಬಿಜೆಪಿಯಲ್ಲಿ ಶೋಭಾ ಕರಂದ್ಲಾಜೆಗಿಂತ ಹೆಚ್ಚು ವರ್ಷಗಳನ್ನು ಸವೆಸಿರುವ ಇತರೆ ಮಹಿಳೆಯರಿದ್ದರೂ ಅವರ್‍ಯಾರಿಗೂ ಇರದ ಅದೃಷ್ಟ ಶೋಭಾಗೆ ಮಾತ್ರ ಒಲಿಯುತ್ತದೆ. ಅಂದಹಾಗೆ, ಶೋಭಾ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಆಪ್ತತೆಯಿಂದಾಗಿಯೇ ಆಕೆ ಸಚಿವೆ ಆಗಿರುವುದು ಎಂದು ಎಲ್ಲರೂ ಬಲ್ಲ ಸತ್ಯ. ಇದೆಲ್ಲದರ ಅರ್ಥವೇನು? ಬಿಜೆಪಿಯಲ್ಲಿ ಶೋಭಾಳಂತೆ ಪಕ್ಷದ ಪುರುಷ ಮುಖಂಡರಿಗೆ ಸೂಕ್ತವಾದ 'ಸೇವೆ' ಸಲ್ಲಿಸಿದರೆ ಮಾತ್ರ ಸ್ಥಾನಮಾನ ಪ್ರಾಪ್ತಿ ಆಗುತ್ತದೆ ಎಂದಲ್ಲವೆ? ಇದು ಕೂಡ ಆರೆಸ್ಸೆಸ್ ತಮ್ಮ ಸಂಘ ಪರಿವಾರದಲ್ಲಿ ಬಿತ್ತಿರುವ ಮಹಿಳಾ ಶೋಷಣೆಯ ಸಿದ್ಧಾಂತದ ಪ್ರತಿಫಲವಲ್ಲದೆ ಇನ್ನೇನು?

ಕರ್ನಾಟಕದ ಹಾಲಿ ಸಚಿವ ಸಂಪುಟದಲ್ಲೇ ಸಂಘ ಪರಿವಾರದ ಮಹಿಳಾ ವಿರೋಧಿ ನಿಲುವಿಗೆ ಮತ್ತೊಂದು ಉದಾಹರಣೆಯೂ ರೇಣುಕಾಚಾರ್ಯ ಎಂಬ ಸೋಗಲಾಡಿಯ ರೂಪದಲ್ಲಿ ನಮಗೆ ಸಿಗುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಈ ರೇಣುಕಾಚಾರ್ಯ ಶಾಸಕನಾಗಿದ್ದಾಗ ಜಯಲಕ್ಷ್ಮಿ ಎಂಬ ನರ್ಸ್‌ಳೊಂದಿಗೆ ಜಿಂಗ್‌ಚಕ ಎಂದು ಚಕ್ಕಂದ ಆಡಿ ಸಾಕ್ಷ್ಯಾಧಾರ ಸಮೇತ ಸಿಕ್ಕಿಬಿದ್ದಿದ್ದ. ವಿವಾಹಿತನಾಗಿರುವ, ತಂದೆಯೂ ಆಗಿರುವ ಈ ರೇಣುಕಾಚಾರ್ಯ ಮತ್ತೋರ್ವ ಸ್ತ್ರೀಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದಲ್ಲದೆ, ಆಕೆಯ ಆಸ್ತಿಯನ್ನೂ ಲಪಟಾಯಿಸಲು ಹೊಂಚುಹಾಕಿ ಅವಳಿಂದ ಕಪಾಳಮೋಕ್ಷ ಮಾಡಿಸಿಕೊಂಡು ಹೊರದೂಡಲ್ಪಟ್ಟಿದ್ದ.

ಇಂತಹ ಸಂಗತಿಗಳೆಲ್ಲ ಬಹಿರಂಗಗೊಂಡ ನಂತರ ಬೇರೆ ಯಾರೇ ಆಗಿದ್ದರೆ ಸಮಾಜದಲ್ಲಿ ತಮ್ಮ ಮುಖ ತೋರಿಸಲು ನಾಚಿ ಮನೆ-ಸೇರುತ್ತಿದ್ದರು. ಆದರೆ ಬಿಜೆಪಿ ಎಂಥ ದರಿದ್ರ ಪಕ್ಷವೆಂದರೆ ಈ ರೇಣುಕಾಚಾರ್ಯ ಮನೆ ಸೇರುವ ಬದಲು ರೆಸಾರ್ಟ್ ಸೇರಿದ. ಗಣಿ ರೆಡ್ಡಿಗಳು ಕೊಟ್ಟ ಅಮೇಧ್ಯ ತಿಂದು ಯಡ್ಡಿಯ ಸರ್ಕಾರವನ್ನೇ ಬೀಳಿಸಲು ಯತ್ನಿಸಿದ. ಈ ಕಚ್ಚೆಹರುಕ ಶಾಸಕನ ಇಂತಹ ಅಟ್ಟಹಾಸಗಳಿಗೆ ಹೆದರಿದ ಬಿಜೆಪಿ ಆತನಿಗೆ ಸಚಿವ ಸ್ಥಾನವನ್ನು ದಯಪಾಲಿಸಿತು. ಇದರ ಅರ್ಥವೇನು? ಸ್ತ್ರೀಲಂಪಟನಿಗೆ ಬಿಜೆಪಿಯಲ್ಲಿ ಸ್ಥಾನಮಾನ ಸಿಗುತ್ತದೆ ಎಂದಲ್ಲವೇ?

ಮುರುಗೇಶ್ ನಿರಾಣಿ ಎಂಬ ಮತ್ತೋರ್ವ ಮಹಿಳಾ ಉದ್ಧಾರಕ ಸಚಿವನ ಪುರಾಣಗಳೂ ಭಿನ್ನವಾಗಿಲ್ಲ. ಈಗ ಮಾಲೀಕನಾಗಿರುವ ಟಿವಿ ಚಾನೆಲ್‌ನಲ್ಲಿ ಕೆಲಸ ಕೇಳಿಬಂದ ಯುವತಿಯ ಮೊಬೈಲ್ ನಂಬರ್‌ಗೆ ಲೈಂಗಿಕ ಕಿರುಕುಳಕ್ಕೆ ಸಮನಾದ ಎಸ್‌ಎಂಎಸ್‌ಗಳನ್ನು ಕಳುಹಿಸಿದ. ಬೇರೆಯವರಾಗಿದ್ದರೆ ಇಂತಹ ವ್ಯಕ್ತಿಯನ್ನು ದೋರವಿಡುತ್ತಿದ್ದರು. ಆದರೆ ಈ ನಿರಾಣಿ ಕೂಡ ರೇಣುಕಾಚಾರ್ಯನಂತೆ ಯಡ್ಡಿಯ ಕಟ್ಟಾ ಬೆಂಬಲಿಗ. ಆ ಕಾರಣಕ್ಕೇ ಆತನಿಗೆ ಮಂತ್ರಿ ಪದವಿಯೂ ಸಿಗುತ್ತದೆ, ಖೊಟ್ಟಿ ಕಂಪನಿಗಳ ಹೆಸರಲ್ಲಿ ಸರ್ಕಾರಿ ಭೂಮಿಯನ್ನು ನುಂಗುವ ಅವಕಾಶವೂ ಲಭಿಸುತ್ತದೆ, ಯುವತಿಯೊಬ್ಬಳಿಗೆ ಅಸಹ್ಯ ಎಸ್‌ಎಂಎಸ್‌ಗಳನ್ನು ಕಳುಹಿಸಿದರೂ ರಕ್ಷಣೆ ಇದ್ದೇಇರುತ್ತದೆ.

ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಈ ಮೂರು ವರ್ಷಗಳಲ್ಲಿ ಬಿಜೆಪಿ ಸಾಧಿಸಿದ್ದೇನೆಂದು ನೋಡಿದರೆ ಈ ಪಕ್ಷದ ದುಷ್ಟತನ ಅರ್ಥವಾಗುತ್ತದೆ. ಯಡ್ಡಿಯಿಂದ ಸಿ.ಟಿ.ರವಿ ತನಕ ಎಲ್ಲರೂ ರಾಜ್ಯವನ್ನು ಲೂಟಿ ಮಾಡಿದರು. ಭ್ರಷ್ಟಾಚಾರದಲ್ಲಿ ಇನ್ನಿಲ್ಲದಂತೆ ತೊಡಗಿದರು. ಒಂದೆಡೆ ಬ್ರಾಹ್ಮಣ ಮತ್ತು ಲಿಂಗಾಯತ ಮಠಗಳಿಗೆ ಸರ್ಕಾರಿ ಖಜಾನೆಯಿಂದ ಕೋಟಿಕೋಟಿ ರೂಪಾಯಿಗಳನ್ನು ಕೊಟ್ಟರೆ, ಇನ್ನೊಂದೆಡೆ ಇದೇ ಚೆಡ್ಡಿಗಳ ಪುಂಡರು ಕ್ರಿಶ್ಚಿಯನ್ನರ ಚರ್ಚ್‌ಗಳ ಮೇಲೆ ದಾಳಿಗಳನ್ನು ಮಾಡಿದರು, ಮುಸಲ್ಮಾನರನ್ನು ಚಚ್ಚಿದರು. ಮತ್ತೊಂದೆಡೆ ಮುಜರಾಯಿ ದೇಗುಲಗಳನ್ನೇ ಹಲವು ಮಠಗಳಿಗೆ ಅಕ್ರಮವಾಗಿ ಧಾರೆ ಎರೆದು ಆ ದೇಗುಲಗಳ ಭಕ್ತರನ್ನು ವಂಚಿಸಿದರು.

ಪಬ್‌ಗಳ ಮೇಲೆ ದಾಳಿ ಮಾಡಿ ಯುವತಿಯರನ್ನು ಥಳಿಸಿದರು. ಪರ ಧರ್ಮೀಯರನ್ನು ಮಾತನಾಡಿಸಿದ್ದಕ್ಕೆ ಯುವಕಯುವತಿಯರನ್ನು ಬಡಿದರು. ಇಂತಹ ಅನೈತಿಕ ಪೊಲೀಸ್‌ಗಿರಿಯಿಂದಾಗಿ ಓರ್ವ ಅಮಾಯಕ ಹಿಂದೂ ಹುಡುಗಿ ಆತ್ಮಹತ್ಯೆಗೆ ಶರಣಾಗುವುದಕ್ಕೆ ಕಾರಣೀಭೂತರಾದರು. ಲವ್ ಜಿಹಾದ್ ಎಂಬ ಕಪೋಲಕಲ್ಪಿತ ಯೋಜನೆಯನ್ನೇ ನೆಪವಾಗಿಟ್ಟುಕೊಂಡು ಮುಸಲ್ಮಾನ ಯುವಕರನ್ನು ತದುಕಿದರು.

ಗೋವು ರಕ್ಷಣೆ ನೆಪದಲ್ಲಿ ರಾಜ್ಯದ ದಲಿತರಿಗೆ, ರೈತರಿಗೆ, ಅಲ್ಪಸಂಖ್ಯಾತರಿಗೆ ಕಾಟಕೊಟ್ಟರು. ಈ ಪ್ರಕ್ರಿಯೆಲ್ಲಿಯೇ ಈಗಾಗಲೇ ರಾಜ್ಯಾದ್ಯಂತ ಹತ್ತಾರ ಜನರ ಸಾವಿಗೆ, ನೂರಾರು ಜನರ ನೋವು-ನಷ್ಟಗಳಿಗೆ ಈಡಾಗಿದ್ದಾರೆ. ಇದು ಸಾಲದೆಂಬಂತೆ ಜಾನುವಾರು ಹತ್ಯಾ ತಡೆ ಕಾಯಿದೆಯನ್ನು ಜಾರಿ ಮಾಡಲು ಸಜ್ಜಾಗಿರುವ ಈ ಕಿರಾತಕರು ಬರುವ ದಿನಗಳಲ್ಲಿ ನಮ್ಮ ಅನ್ನದಾತರನ್ನೇ ಆತ್ಮಹತ್ಯೆಯತ್ತ ದೂಡಲು ಷಡ್ಯಂತ್ರ ರೂಪಿಸಿದ್ದಾರೆ.

'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂದು ಹೇಳುತ್ತಲೇ ನಮ್ಮ ನಾಡಿದ ದಲಿತರು ಅಸಹಾಯಕತೆಯಿಂದ ತಮ್ಮ ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟಿಸುವಂತೆ ಮಾಡಿದ ಸರ್ಕಾರ ಬಿಜೆಪಿಗಳದ್ದು.

ಕಳೆದ ಮೂರು ವರ್ಷಗಳಲ್ಲಿ ಈ ಬಿಜೆಪಿಗಳು ಮಾಡಿದ ಲೂಟಿ, ಭ್ರಷ್ಟಾಚಾರ, ಶೋಷಣೆ, ದಬ್ಬಾಳಿಕೆ, ಅವ್ಯವಹಾರ, ದಾಳಿ ಇತ್ಯಾದಿಗಳೆಲ್ಲ ಆರೆಸ್ಸೆಸ್, ಬಿಜೆಪಿ ಮತ್ತು ಸಂಘಪರಿವಾದರ ನೀಚತನವನ್ನು, ಜನವಿರೋಧಿ ನಿಲುವನ್ನು, ಸಂವಿಧಾನಬಾಹಿರ ಸಿದ್ಧಾಂತವನ್ನು ಬಟಾಬಯಲಾಗಿಸಿವೆ. ಈಗ ಪ್ರಜಾಪ್ರಭುತ್ವದ ಸಂಕೇತವಾಗಿರುವ ಸದನದಲ್ಲೇ ಸವದಿ, ಪಾಟೀಲ್ ಮತ್ತು ಪಾಲೇಮಾರ್ ತರಹದ ಸಚಿವರು ಮಹಿಳೆಯರನ್ನು ಕಾಮದ ಸರಕುಗಳಂತೆ ನೋಡುತ್ತಾ ಕುಳಿತದ್ದು ಇವರ ಮಹಿಳಾ ವಿರೋಧಿ ಧೋರಣೆಯನ್ನು ಜನರಿಗೆ ಸಾಬೀತುಪಡಿಸಿದೆ.

ಕನ್ನಡಿಗರು ಸಭ್ಯ ಜನರೆಂದು ಈ ಹಿಂದೆ ಬೇರೆ ರಾಜ್ಯಗಳ ಜನರು ನಮಗೆ ಪ್ರೀತಿ ತೋರುತ್ತಿದ್ದರು. ಕರ್ನಾಟಕವೆಂದರೆ ನೆಮ್ಮದಿಯ, ಶಾಂತಿಯ ರಾಜ್ಯವೆಂದು ನಮ್ಮ ರಾಜ್ಯದ ಜನರಿಗೆ ಇತರರು ಮರ್ಯಾದೆ ಕೊಡುತ್ತಿದ್ದರು. ಆದರೀಗ ಕನ್ನಡಿಗರು, ಕರ್ನಾಟಕವೆಂದರೆ ಭ್ರಷ್ಟಾಚಾರಕ್ಕೆ, ದಬ್ಬಾಳಿಕೆಗೆ, ಬ್ಲೂ ಫಿಲಂ ವೀಕ್ಷಣೆಗೆ ಸಮಾ ಎಂಬಂತೆ ಇತರರು ಪರಿಗಣಿಸುವಂತೆ ಈ ಚೆಡ್ಡಿಗಳು ಮಾಡಿದ್ದಾರೆ. ಕನ್ನಡಿಗರೆಂದರೆ ಎಲ್ಲರೂ ಅಪಹಾಸ್ಯಮಾಡುವಂತೆ ಇವರು ವರ್ತಿಸಿದ್ದಾರೆ.

ಈ ನೀಚರನ್ನು ಆದಷ್ಟು ಬೇಗ ಅಧಿಕಾರದಿಂದ, ನಮ್ಮ ರಾಜ್ಯದಿಂದ ಒದ್ದೋಡಿಸಿದರೆ ಕನ್ನಡಿಗರಿಗೆ, ಕರ್ನಾಟಕಕ್ಕೆ ಒಳ್ಳೆಯದು.



ಜಗತ್ತಿನೆಲ್ಲೆಡೆ ಬಿಜೆಪಿಗಳ ಕಾಮಾಯಣ

"ಇಂಡಿಯಾದ ರಾಮಾಯಣದ ಕತೆಯನ್ನು ಜಗತ್ತಿನೆಲ್ಲೆಡೆ ಹರಡ ಬಯಸಿದ್ದ ಚೆಡ್ಡಿಗಳಿಗೆ ಈಗ ಇಡೀ ವಿಶ್ವದೆದುರು ಚೆಡ್ಡಿ ಕಳಚಿ ಬಿದ್ದಂತಾಗಿದೆ. ಏಕೆಂದರೆ ಅವರ ಕಾಮಾಯಣದ ರಾಮಾಯಣವೇ ಈಗ ಜಾಸ್ತಿ ಸುದ್ದಿ ಮಾಡಿದೆ.

ಅವರ ಕಾಮಾಯಣ ಈಗ ವಿಶ್ವಾದ್ಯಂತ ರೇಡಿಯೊ-ಪತ್ರಿಕೆ-ಟಿವಿ ಹಾಗೂ ಇಂಟರ್‌ನೆಟ್‌ನಲ್ಲಿ ಭರ್ಜರಿಯಾಗಿ ಪ್ರಚಾರ ಪಡೆಯುತ್ತಿದೆ.

ಹಾಗೆ ನೋಡಿದರೆ ಈ ತರದ ಲೋಫರ್ ಕೆಲಸಗಳು ಈಗಾಗಲೇ ಸಾಕಷ್ಟು ನಡೆದಿವೆ. ಅವೆಲ್ಲಾ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಪ್ರಚಾರ ಪಡೆದಿದ್ದವು. ಆದರೀಗ ಈ ಕಚ್ಚೆಹರುಕರು ಇಡೀ ಲೋಕಕ್ಕೆ ಗೊತ್ತಾಗುವಂತಾ ಸಾಧನೆ ಮಾಡಿದ್ದಾರೆ.

ಅಮೆರಿಕಾದ ವಾಷಿಂಗ್ಟನ್ ಪೋಸ್ಟ್ ದಿನಪತ್ರಿಕೆಯು **"3 Ministers resign in South India after being accused of watching porn in State Assembly"** ಎಂದು ವರದಿ ಮಾಡಿದೆ.

ಅರಬ್ ನ್ಯೂಸ್‌ನಲ್ಲಿ, ಫ್ರಾನ್ಸ್‌ನ **JSS News** ಹಾಗೂ ಇಂಡೋನೇಷಿಯಾದ **Jakarta Globe** ದಿನಪತ್ರಿಕೆಗಳಲ್ಲಿ ರಷ್ಯಾ, ಈಜಿಪ್ಟ್‌ನ ಪತ್ರಿಕೆ-ಟಿವಿಗಳಲ್ಲೂ ಬಿಜೆಪಿ ಲೀಡರ್‌ಗಳ ಮುಖವೇ ರಾರಾಜಿಸುತ್ತಿವೆ. ದೂರದ ಜರ್ಮನಿಯಲ್ಲೂ ಹೆಚ್ಚು ಪ್ರಸಾರವಿರುವ ದಿನಪತ್ರಿಕೆಗಳು **`Politiker gucken pornos"** (ಸಿಕ್ಕಿಬಿದ್ದ ಹೊಲಸು ಪೋಲಿ ರಾಜಕಾರಣಿಗಳು) ಎಂಬ ಸುದ್ದಿ ಮಾಡಿವೆ.

ಅಂದಹಾಗೆ **RSS** ಹಾಗೂ ಬಿಜೆಪಿಗಳಿಗೆ ಗಾಳಿ ಸುದ್ದಿ, ಸುಳ್ಳು ರೂಮರ್ ಹಬ್ಬಿಸುವ ಚಟ ಮೊದಲಿಂದಲೂ ಇದೆ. ಪ್ರಳಯದ ಸುದ್ದಿ, ಗಣೇಶ ಹಾಲು ಕುಡಿದ ಸುದ್ದಿ... ಹೀಗೆ ತರಹೇವಾರಿ ಕಟ್ಟುಕತೆಗಳನ್ನು ದಿನಬೆಳಗಾಗುವುದರೊಳಗೆ ಜಗತ್ತಿನಲ್ಲೆಲ್ಲಾ ಹಬ್ಬಿಸುತ್ತಿದ್ದರು ಇವರು.

ಆದರೆ ಈಗ ನೋಡಿ. ಈ ಹಿಂದಿನ ಅಂತಹ ಎಲ್ಲಾ ನ್ಯೂಸ್‌ಗಳನ್ನು ಮೀರಿಸುವಂತೆ ಬಿಜೆಪಿಗಳ ಕಾಮಾಯಣದ ಸುದ್ದಿ ಪ್ರಪಂಚದ ಮೂಲೆಮೂಲೆಗೂ ಹರಡುತ್ತಿವೆ.

ಕೊನೆಯದಾಗಿ ಇನ್ನೊಂದು ಮಾತು. ಈ ಲಕ್ಷ್ಮಣ ಸವದಿ ಅದಿನ್ನೆಂತಾ ತಿಕ್ಕಲನಿರಬಹುದು....?

ತನ್ನ ಕಾಮಲೀಲೆ ಅಥಣಿಯ ಸ್ವಕ್ಷೇತ್ರದ ಜನರಿಗೆ ಗೊತ್ತಾಗಬಾರದು ಎಂದು ಕರೆಂಟು ತೆಗೆಸಿ ಕೇಬಲ್ ಟಿವಿ ಬಂದ್ ಮಾಡಿಸಿದನಲ್ಲದೆ, ಅದರ ಮಾರನೇ ದಿನ ಪ್ರಜಾವಾಣಿ ಮತ್ತಿತರ ದಿನಪತ್ರಿಕೆಗಳೂ ಕೂಡ ಅಥಣಿಗೆ ಬರದಂತೆ, ಜನರಿಗೆ ಸಿಗದಂತೆ ಮಾಡಿದ್ದ.

ಆದರೆ ಈಗ ಏನಾಗಿದೆ ನೋಡಿ.

ಸವದಿ, ಪಾಟೀಲ ಹಾಗೂ ಪಾಲೇಮಾರ್ ಈಗ ಅಮೆರಿಕ, ಈಜಿಪ್ಟ್, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಂಡೋನೇಷಿಯಾ .... ಹೀಗೆ ಎಲ್ಲಾ ಕಡೆ ರಾರಾಜಿಸುತ್ತಿದ್ದಾರೆ.

ಜಗತ್ತಿನೆಲ್ಲೆಡೇ ಹೋದ ಮಾನ ಅಥಣಿಯ ಬಸ್‌ಸ್ಟ್ಯಾಂಡಲ್ಲಿ ಸಿಗುತ್ತೇನೋ ಸವದಿ

ವಂದೇ ಮಾತರಂ

ಬೋಲೋ ಭಾರತ್ ಮಾತಾ ಕಿ ಜೈ

-ಪಾರ್ವತೀಶ



ನಿಜವಾಗ್ಲು ನಿಮ್ದು ಬ್ಲೂಫಿಲಂ ಪಾರ್ಟಿ ಸಾರ್!

ನಿನ್ನೆ ತಾನೇ ಸಚಿವನಾಗಿ ಸದನದಲ್ಲಿ ಕುಳಿತಿದ್ದ ಸವದಿ ಇಂದು ಸಂಗ್ಯಾನಂತೆ ಹ್ಯಾಪುಮೋರೆ ಹಾಕಿಕೊಂಡು ತಲೆದಂಡವೊಪ್ಪಿಸಿದ್ದನ್ನು ಕೇಳಿ ಆತನನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಬಂಗಾರಿ ಯಾರೇ ನೀ ಬುಲ್ ಬುಲ್, ಸಿಂಗಾರಿ ಯಾರೇ ನೀ....."

"ಹಲೋ ಯಾರು?"

"ನಾನು ಸಾರ್ ಯಾಹೂ, ಪತ್ರಕರ್ತ."

"ಏನು ಪತ್ರಕರ್ತರದೀರಿ ನೀವು. ಇಲಿ ಹೋತಪ ಅಂದ್ರ ಹುಲಿನೇ ಹೋತು ಅಂತೀರಲ್ರೀ."

"ಏನೊ ಒಂದು ಹೋಗಿದ್ವಂತೂ ನಿಜ ಅಲ್ಲವಾ ಸಾರ್?"

"ಅಲ್ರೀ, ಉಡುಪಿ ಸನೇಕ ನಡೆದ ರೇವ್ ಪಾರ್ಟಿ ಬಗ್ಗೆ ಮಂದಿ ಭಾಳ ಹೇಳತರಲ್ಲಾ, ಅವುನವುನ ಆದರಾಗೇನೈತಿ ಅಂತ ನೋಡತಿದ್ನಿ, ಅದೂ ಕೂಡ ನಮ್ಮ ಪಾಲೇಮಾರ್ ಮೊಬೈಲ್‌ದಿಂದ ಡೌನ್ ಮಾಡಿಕೊಂಡು ನೋಡತಿದ್ನಿ. ಅಷ್ಟ ಅಂತ ನೋಡತಿದ್ನಿ, ಅದೂ ಕೂಡ ನಮ್ಮ ಪಾಲೇಮಾರ್ ಮೊಬೈಲ್‌ದಿಂದ ಡೌನ್ ಮಾಡಿಕೊಂಡು ನೋಡತಿದ್ನಿ. ಅಷ್ಟ ನೋಡ್ರಿ. ಅದಕ ಟಿವಿಯವರು, ಪೇಪರ್‌ನವರು ಏನೊ ಆಗಬಾರದ ಅನಾಹುತ ಆಗೇತಿ ಅನ್ನಂಗ ಮಾಡಿ ರಾಜೀನಾಮಿ ಕೊಡುಮಟ ಬಿಡಲಿಲ್ಲ ನೋಡ್ರಿ."

"ನಿಜವಾಗ್ಲು ಅನ್ಯಾಯ ಸಾರ್ ಇದು. ನೀವು ಯಾರೂ ಮಾಡಬಾರ್ದ ಕೆಲಸ ಮಾಡಿಲ್ಲ, ಅಂಗೇ ನೋಡಿದ್ರೆ ಈ ಬಿಜೆಪಿಲಿ ಬ್ಲೂಫಿಲಂ ನೋಡದೋರೆ ಇಲ್ಲ, ನಿಜಕ್ಕೂ ಇದೊಂದು ಬ್ಲೂಫಿಲಂ ಪಾರ್ಟಿ. ಅಂಗಿರುವಾಗ ನಿಮ್ಮ ರಾಜೀನಾಮೆ ತಗೊಂಡಿದ್ದು ತುಂಬ ಅನ್ಯಾಯ ಸಾರ್."

"ಖರೆ ಹೌದಲ್ರಿ. ನಾನು ಖೂನಿ ಏನು ಮಾಡಿನೇನು, ತುಡುಗು ಮಾಡಿನೇನು ಕೈಯಾಗಿದ್ದ ಮೊಬೈಲದಾಗ ಒಂದೆರಡು ಚಿತ್ರ ನೋಡಿದ್ನಿ ಅಷ್ಟ. ಒಂದು ರವೊಟು ನಮ್ಮ ಸಿ.ಸಿ. ಪಾಟೀಲ ಅಣುಕಿ ನೋಡಿದ. ಅಷ್ಟ ನೋಡ್ರಿ."

ಥೂತ್ತೇರಿ • ಯಾಹೂ

"ಆದ್ರು ಅದು ಸದನ ಅಲ್ಲವ ಸಾರ್?"

"ಸದನಾ ಸರಿರಿ. ವಿಧಾನಸೌಧದ ಒಳಗೆ.... ನಡೆದೈತಿ ಗೊತ್ತೇನ. ರಾಜ್ಯದ ನಾಯಕರೊಬ್ಬರು ಅಂತ ಕೆಲಸ ಮಾಡ್ಯಾರ. ಅದರ ಮುಂದ ನಮ್ಮದು ಯಾವ ಅಪರಾಧನ್ರಿ?"

"ಖಂಡಿತ ಅಪರಾಧ ಅಲ್ಲ ಸಾರ್. ನಿಮ್ಮ ಕೈಲಿದ್ದ ಬ್ಲೂಫಿಲಂ ದೃಶ್ಯ ನೋಡಿದಾಗ ನನಿಗೇ ಪದೇಪದೇ ನೋಡಬೇಕು ಅನ್ನಸ್ತು. ಅದರಲ್ಲೂ ಆ ಸಂಭೋಗದ ಸೀನಂತೂ ನನಿಗೇ ಒಂಥರಾ ಅನ್ನಸ್ತು. ಇನ್ನ ನೀವು ಪದೇಪದೇ ನೋಡಿದ್ರಲ್ಲಿ ಆಶ್ಚರ್ಯ ಇಲ್ಲ, ಇವತ್ತು ಬ್ಲೂಫಿಲಂ ಯಾರು ನೋಡಲ್ಲ ಸಾರ್? ನಾನೂ ಕೂಡ ನೋಡಿದ್ದಿನಿ. ಅದೊಂದು ಅಪರಾಧ ಅಲ್ಲ, ಆದರೆ ಸದನದಲ್ಲಿ ನೋಡಬಾರದಿತ್ತು."

"ಅದ ನಾನೂ ಒಪ್ಪತೇನ್ರಿ. ಆದ್ರ ನೋಡಾಕ ನಮಗೆ ಬಿಡುವಾರ ಎಲ್ಲಿ ಸಿಕ್ಕತೈತಿ? ಅದೇ ವಿಧಾನಸೌಧದಾಗೆ ಆ ಸಿದ್ದರಾಮಯ್ಯ ಏನೋ ಬೈಕೊಂತಿರತಾನೆ. ಸದಾನಂದಗೌಡ ಅದೇನೋ ಹೇಳ್ತನ. ಸುಮಾರು ಮಂದಿ ನಿದ್ದಿ ಮಾಡ್ತರ. ನಿದ್ದಿ ಬರಬಾರ್ದು ಅಂತ್ಹೇಳಿ ನಾ ಅವಾಯ್ಡ್ ಮಾಡಕತ್ತಿದ್ರೆ ಅದೇ ಒಂದು ಘೋರ ಅಪರಾಧೇನ್ರಿ?"

"ಅಪರಾಧ ಅಲ್ಲ ಸಾರ್. ನಿಮ್ಮ ನೋಡಿದಾಗ ಚಂದ್ರಶೇಖರ ಕಂಬಾರರ ಸಂಗ್ಯಾ ಬಾಳ್ಯ ನಾಟಕದ ಸಂಗ್ಯನ್ನ ನೋಡಿದಂಗಾಯ್ತು, ಆದ್ರೆ ನಿಮ್ಮಿಂದ ಇಬ್ರು ಬಾಳ್ಯಾಗಳು ಬಲಿಯಾದರಲ್ಲ ಸಾರ್."

"ಅದೇರಿ ನನಿಗೂ ಬೇಸರಾದದ್ದು, ಮುಂದೆ ಮಂದಿ ಯದಕಪ್ಪ ರಾಜೀನಾಮೆ ಕೊಟ್ರಿ ಅಂತ ಕೇಳಿದ್ರ ಏನೇಳಬೇಕ್ರಿ ನಾವು?"

"ನೆನೆಸಿಕೊಂಡರೆ ಹೆದ್ರಿಕಾಯ್ತದಲ್ಲಾ ಸಾರ್. ನಿಮ್ಮ ಇಡೀ ಜೀವನದಲ್ಲಿ ವಿಧಾನಸಭೇಲಿ ಬ್ಲೂಫಿಲಂ ನೋಡಿದ್ದೆ ರಾಜೀನಾಮೆ ಕೊಟ್ಟೆ ಅನ್ನೋ ಕಳಂಕ ಶಾಶ್ವತವಾಗಿ ಉಳಿತದಲ್ಲ ಸಾರ್."

"ಅಂಗೇನಿಲ್ರಿ. ತನಿಖೆಯಾದ್ರೆ ನಾವು ಬಚಾವಾಕ್ತಿವಿ."

"ಯಂಗೆ ಸಾರ್?"

"ಯಂಗೆ ಅಂದ್ರೆ ನಮ್ಮ ಬೋಪಣ್ಣ ಇದಾರಲ್ರಿ, ಅವರ ತನಿಖೆಗೆ ಶಿಫಾರಸ್ಸು ಮಾಡಬೇಕು. ನಾನೀಗಾಗ್ಲೆ ನನ್ನ ಮೊಬೈಲದಾಗ ಬ್ಲೂಫಿಲಂ ಅಳಿಸೀನಿ. ಅಂಗಾಗಿ ನಾವು ನಿರ್ದೋಷಿಗಳು ಅಂತ ತೀರ್ಮಾನಾಕ್ಕೆತಿ."

"ನಿಜ ಸಾರ್. ಈ ಬ್ಲೂಫಿಲಂ ಸರಕಾರದಲ್ಲಿ ಯಾರೂ ಕೂಡ ಅಪರಾಧಿಗಳಾಗಿ ಶಿಕ್ಷೆ ಅನುಭವಿಸಿಲ್ಲ, ಪಾಪ ಎಡೂರಪ್ಪ ಮಾತ್ರ ಲೋಕಾಯುಕ್ತ ಸಂತೋಷ್ ಹೆಗಡೆ ಕೈಗೆ ಸಿಕ್ಕಿ ಇಪ್ಪತ್ತು ದಿವಸ ಜೈಲಿಗೋಗಿದ್ದು ಬಿಟ್ರೆ ಇನ್ನಾರೂ ಕೂಡ ಸಿಗಾಯ್ಕಂಡಿಲ್ಲ."

"ಸಿಕ್ಕಿಲ್ಲ ಸರಿರಿ, ಆದ್ರ ಮಂತ್ರಿಗಿರಿ ಕಳಕೊಂಡಾರಲ್ಲ."

"ಅದು ನಿಜ. ಆದ್ರು ಹರತಾಳು ಹಾಲಪ್ಪನಂಥ ಅಪರಾಧಿ ನೀವಲ್ಲ ಸಾರ್."

"ಖರೆ ಹೌದಿಲ್ಲೊ, ಅಲ್ರಿ ನಾವು ಬರಿ ಬ್ಲೂಫಿಲಂ ನೋಡೇವಿ. ಆದ್ರೆ ರೇವು ಪಾರ್ಟಿಲಿ ಪ್ರಾಕ್ಟಿಕಲ್ಲಾಗೆ ನಡೆದದ್ದ ನೋಡಿ ಬಂದಾರಲ್ಲ ಹೇಳಿ. ನಮ್ಮ ಆಚಾರ್ಯ, ಉಡುಪಿ, ಡಿ.ಸಿ. ಇನ್ನ ಯಾರ್‍ಯಾರೊ ನೋಡ್ಯಾರ, ಅದು ಅಪರಾಧಲ್ಲೇನ?"

"ನಿಮ್ಮ ತರ್ಕ ನಿಜ ಸಾರ್. ನೋಡದು ಅಪರಾಧ ಆದ್ರೆ ಮಾಡದೂ ಅಪರಾಧವೇ. ನನಿಗೊಂದು ಅನುಮಾನ ಏನು ಅಂದ್ರೆ ಬ್ಲೂಫಿಲಂ ನೋಡಿದ್ರೆ ಏನಾರ ಬೇಕು ಅನ್ನುತ್ತೆ, ಆದ್ರೆ ವಿಧಾನಸೌಧದ ಒಳಗಡೆ ನೀವು ನೋಡಿದಾಗ ಏನೂ ಅನ್ನಸಲಿಲ್ವೆ?"

"ಅನ್ನಿಸಿತ್ತು ರೀ ಸದನ ಮುಗದ ನಂತರ ಎಲ್ಯಾರ ಹೋಗೂನು, ಇಲ್ಲಂದ್ರ ಯಾರನಾದ್ರು ಕರಸೂನು ಅಂತ ಯೋಚನೆ ಮಾಡಿದ್ನಿ. ಆದ್ರ ಹಿಂಗಾತಲ್ಲ ಹೇಳಿ."

"ನೀವು ಬುದ್ಧಿ ಓಡಿಸಿ ಒಂದು ಕೆಲಸ ಮಾಡಬವುದಿತ್ತು."

"ಏನು ಮಾಡಬೇಕಿತ್ರಿ?"

"ಸದನದಲ್ಲಿ ಯಾರೋ ಮೊಬೈಲ್ ಕಳಕೊಂಡಿದ್ರು. ಅದ ತಗೊಂಡು ನಾನು ನೋಡಿದೆ ಅಷ್ಟೇ. ಅಂತ ಹೇಳಬೇಕಾಗಿತ್ತು ಸಾರ್. ಆಗ ಅಂತ ಮೊಬೈಲು ರೇಣುಕಾಚಾರಿದೊ, ಇಲ್ಲ ಸಿ.ಟಿ.ರವಿದೊ ಅಥವಾ ಹರತಾಳು ಹಾಲಪ್ಪಂದೊ ಅಂತೇಳಿ ಬ್ಲೂಫಿಲಂ ಪ್ರಕರಣ ಬೇರೆಯವರ ಮೇಲೆ ಹೋಗಿಬುತ್ತಿತ್ತು."

"ಅಲ್ರಿ, ಏನ ಬೆರಕೆ ಮಾತ ಹೇಳಕತ್ತಿರಿ ನೀವು. ಮೊಬೈಲದಾಗ ನನ್ನ ನಂಬರ್‍ರು, ನಮ್ಮ ಶಾಸಕರು ಮಿನಿಷ್ಟ್ರು ನಂಬರ್‍ರು ದಾಖಲಾಗಿರುದಿಲ್ಲೇನ. ಈಗಾಗ್ಲೆ ಪಾಲೇಮಾರನೂ ಸಿಗಿಸಿನಿ ಗೊತ್ತೇನು."

"ಸಾರಿ ಸಾರ್. ನಿಮ್ಮನ್ನ ಯಾರೂ ಬಚಾವು ಮಾಡಲಾಗದ ಅಪರಾಧ ಮಾಡಿ ಸಿಕ್ಕಿಬಿದ್ದಿದ್ದಿರಿ."

"ಅದಕರಿ ಬಿಜೆಪಿ ಸಭಿಯೊಳಗ ಅಳಕತ್ತಿದ್ದಿನಿ. ಆಗ ನಮ್ಮ ಎಡೂರಪ್ಪನೋರು ದಳವೊಬ್ಬರೂ ನಮಗೆ ಸಪೋರ್ಟು ಮಾಡಿ ಅಂದರ್‍ರಿ. ಅದಕ ನಮ್ಮ ಪಾರ್ಟಿ ಜನ ವಿರೋಧ ಪಕ್ಷದವ್ರರು ಸದನದೊಳಗೆ ಬಾಯಿ ಬಿಡದಂಗೆ ಗದ್ಲ ಎಬಿಸಿದರ್‍ರಿ"


"ವಿರೋಧ ಪಕ್ಷದೋರು ಮಾತಾಡದಂಗೆ ಬಾಯಿಮುಚ್ಚಿಸಿದ್ರಿ ಸರಿ. ಆದ್ರೆ ನಿಮ್ಮ ಹೆಂಡತಿ, ಮಕ್ಕಳು, ಸಮಂಧಿಕರು ಇವುರಿಗೆಲ್ಲ ಮುಖ ಯಂಗೆ ತೋರತಿರಿ? ಬ್ಲೂಫಿಲಂ ನೋಡಿ ಅಧಿಕಾರ ಕಳಕೊಂಡು ಮನಿಗೆ ಬಂದಾ ಅಂತ ಅವುರೆಲ್ಲ ಅವುಮಾನ ಅನುಭವುಸದಿಲ್ಲವಾ? ಆದ್ರೆ, ನಾನೊಂದು ಪ್ಲಾನೇಳ್ತೀನಿ ಮಾಡ್ತೀರಾ?"


"ಏನ್ಹೇಳಿ?"

"ವಿಧಾನಸೌಧದ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ್ರೆಂಗೇ?"

"ನಾನು ತಪ್ಪನ್ನೇ ಮಾಡಿಲ್ಲ ಅಂದ್ರ ಸಾಯುದರ ಯಾಕ್ರಿ?"

"ಥೂತ್ತೇರಿ!!!"





ಮಣಪ್ಪುರಂ

ಹುಷಾರು, ಹುಷಾರೂ.....!

ಇತ್ತೀಚಿನ ವರ್ಷಗಳಲ್ಲಿ ಎಲ್ಲೆಂದರಲ್ಲಿ ನಾಯಿ ಕೊಡೆಗಳಂತೆ ತಲೆಯೆತ್ತಿರುವ ಮಣಪ್ಪುರಂ ಫೈನಾನ್ಸ್ ಕಂಪನಿಯ ಬಗ್ಗೆ ಜಾಗ್ರತೆ ವಹಿಸುವಂತೆ ರಿಸರ್ವ್ ಬ್ಯಾಂಕ್ ಸಾರ್ವಜನಿಕರನ್ನು ಎಚ್ಚರಿಸಿದೆ.

ಈ ಎಚ್ಚರಿಕೆಯನ್ನು ಕಡೆಗಣಿಸಿ ಯಾರಾದರೂ ಟೋಪಿ ಹಾಕಿಸಿಕೊಂಡರೆ ಅಂಥವರನ್ನು ಬಹುಶಃ ಅವರ ಮನೆ ದೇವರೂ ಕಾಪಾಡಲಾರ!

ಹಣಕಾಸು ವ್ಯವಹಾರದಲ್ಲಿ ತೊಡಗಿರುವ ಕಂಪನಿಗಳು ಮೊದಮೊದಲು ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಕ್ರಮೇಣ ತಮ್ಮ ಚಟುವಟಿಕೆಗಳನ್ನು ನಾನಾ ರೀತಿಯ "ಸೇವೆ"ಗಳಿಗೆ ವಿಸ್ತರಿಸುತ್ತವೆ. ಇಂಥ ಹಲವು ಕಂಪನಿಗಳು ಸಾವಿರಾರು ಕೋಟಿಗಳನ್ನು ಗುಳುಂ ಮಾಡಿ, ಬಡಪಾಯಿ ಹೂಡಿಕೆದಾರರಿಗೆ ಪಂಗನಾಮ ಹಾಕಿದ ಹತ್ತಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿರುವ ಈ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕ್‌ನ ಎಚ್ಚರಿಕೆಯನ್ನು ನಾವು ಯಾವ ಕಾರಣಕ್ಕೂ ಕಡೆಗಣಿಸುವಂತಿಲ್ಲ.

ಈ ಗೋಲ್ಡ್ ಲೋನ್ ಕಂಪನಿಯ ವಹಿವಾಟು ಯಾರನ್ನು ಆಧರಿಸಿದೆ? ಸಾಮಾನ್ಯವಾಗಿ ಬಡ ಹಾಗೂ ಕೆಳ ಮಧ್ಯಮ ವರ್ಗದ ಜನಸಂದಣಿ ಹೆಚ್ಚಾಗಿರುವ ಏರಿಯಾಗಳಲ್ಲೇ ಈ ಕಂಪನಿಯ ಶಾಖೆಗಳು ತಲೆ ಎತ್ತಿರುವುದು. ದೇಶಾದ್ಯಂತ ಬಡ್ಡಿ ಮಾರ್ವಾಡಿಗಳು ಇದುವರೆಗೂ ಇಂಥ ಬಡಪಾಯಿ ಜನತೆಯ ಸಂಕಷ್ಟವನ್ನು ದುರ್ಬಳಕೆ ಮಾಡಿಕೊಂಡು ಕೊಬ್ಬಿ ಮೆರೆಯುತ್ತಿದ್ದಾರೆ. ಈ ಮಾರ್ವಾಡಿಗಳ ಬಡ್ಡಿ ಚಕ್ರಬಡ್ಡಿ ಲೂಟಿಯಿಂದ ರೋಸಿಹೋಗಿದ್ದ ಜನರಿಗೆ ಈ ಹೊಸ ಕಂಪನಿಗಳು ಆಕರ್ಷಕವಾಗಿ ಕಾಣುತ್ತಿರುವುದು ಸುಳ್ಳೇನಲ್ಲ. ಚಿನ್ನದ ಸಾಲದ ವ್ಯವಹಾರದಲ್ಲಿ ಇಡೀ ದೇಶದಲ್ಲಿ ಮುತ್ತೂಟ್ ಫೈನಾನ್ಸ್ ಮೊದಲನೇ ಸ್ಥಾನದಲ್ಲಿದ್ದು ಮಣಪ್ಪುರಂ ಫೈನಾನ್ಸ್ ಎರಡನೇ ಸ್ಥಾನದಲ್ಲಿದೆ.

ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ ಕಂಪನಿ ನಮಗೆಲ್ಲಾ ತಿಳಿದಿರುವಂತೆ ನಮ್ಮ ಬಳಿಯಿರುವ ಚಿನ್ನವನ್ನು ಅಡ ಇಟ್ಟುಕೊಂಡು ಬಡ್ಡಿಸಾಲ ಕೊಡುವ ವ್ಯವಹಾರದಿಂದ ಭಾರೀ ಲಾಭ ಗಳಿಸುತ್ತಿರುವ ಕಂಪನಿಯೂ ಹೌದು. ಹೀಗೆ ಲಾಭದ ಆಸೆಯ ಬೆನ್ನುಹತ್ತಿರುವ ಕಂಪನಿ ಹಾಗೂ ಇದೇ ಸಮೂಹದ ಅಂಗಸಂಸ್ಥೆಯಾಗಿರುವ ಮಣಪ್ಪುರಂ ಆಗ್ರೋ ಫಾರ್ಮ್ ಸಂಸ್ಥೆಗಳು ಇತ್ತೀಚಿನ ದಿನಗಳಲ್ಲಿ ತನ್ನ ವರಸೆ ಬದಲಾಯಿಸಿ ಜನರಿಂದಲೇ ಬಂಡವಾಳ ಕ್ರೋಢೀಕರಿಸುವ ಕಾಯಕ ಶುರು ಮಾಡಿದ್ದಾರೆ. ಸಾರ್ವಜನಿಕರಿಗೆ ಹೆಚ್ಚಿನ ಬಡ್ಡಿ ನೀಡುವ ಆಮಿಷ ಒಡ್ಡಿ ಸುಮಾರು 400 ಕೋಟಿ ಬಂಡವಾಳ ಶೇಖರಿಸುವ ಹುನ್ನಾರ ಅವರದು. ಈ ದಿಸೆಯಲ್ಲಿ ಈಗಾಗಲೇ ಸಾರ್ವಜನಿಕರಿಂದ ಕೋಟಿಗಟ್ಟಲೆ ಹಣ ಎತ್ತಲಾಗಿದೆ.

ಆದರೆ ಒಂದು ವಿಷಯ ನೆನಪಿನಲ್ಲಿಡಿ! ಈ ರೀತಿ ಸಾರ್ವಜನಿಕರಿಂದ ಹಣ ಸಂಗ್ರಹಿಸಲು ಅವರಿಗೆ ಯಾವುದೇ ಲೈಸೆನ್ಸ್ ಅಥವಾ ಅಧಿಕೃತ ಮಾನ್ಯತೆ ಇಲ್ಲ. ಇದು ರಿಸರ್ವ್ ಬ್ಯಾಂಕ್ ನಿಯಮಾವಳಿಯ ಪ್ರಕಾರ ಕಾನೂನುಬಾಹಿರ. ಈ ಹಿನ್ನೆಲೆಯಲ್ಲಿ ಎಚ್ಚರಿಕೆ ನೀಡಿರುವ ರಿಸರ್ವ್ ಬ್ಯಾಂಕ್ "ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ ಅಥವಾ ಇದೇ ಸಮೂಹದ ಮಣಪ್ಪುರಂ ಆಗ್ರೋ ಫಾರ್ಮ್‌ಗಳಲ್ಲಿ ಠೇವಣಿ ಇಟ್ಟರೆ ಅದಕ್ಕೆ ಸಾರ್ವಜನಿಕರೇ ಹೊಣೆಗಾರರು" ಎಂದು ತಿಳಿಸಿದೆ. ಕೇರಳದ ತ್ರಿಶ್ಯೂರು ಮೂಲದ ಈ ಕಂಪನಿಗೆ ಆರ್‌ಬಿಐ ಕಾಯ್ದೆ-1934 ರ ಅನ್ವಯ ಠೇವಣಿಗಳನ್ನು ಸ್ವೀಕರಿಸಲು ಅಥವ ಈಗಾಗಲೇ ಸ್ವೀಕರಿಸಿರುವ ಠೇವಣಿಗಳನ್ನು ನವೀಕರಿಸಲು ಅವಕಾಶವಿಲ್ಲ. ಒಂದು ವೇಳೆ ಹಾಗೇನಾದರೂ ಮಾಡಿದಲ್ಲಿ ಅದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ.

ಈ ಕಂಪನಿಯ ಚೇರ್ಮನ್ ನಂದಕುಮಾರ್ ಹಾಗೂ ಎಂ.ಡಿ. ಉನ್ನಿಕೃಷ್ಣನ್ ಈ ಬಗ್ಗೆ ಏನೇನೋ ಸಬೂಬು ಹೇಳಿ ಜನರನ್ನು ನಂಬಿಸುವಲ್ಲಿ ಮಗ್ನರಾಗಿದ್ದಾರೆ. ಈ ವಿಷಯವನ್ನು ಚರ್ಚಿಸಲು ಫೆಬ್ರವರಿ 10 ನೇ ತಾರೀಕು ಆಡಳಿತ ಮಂಡಳಿ ಸಭೆ ಕರೆದಿದ್ದಾರೆ. ಯಾಕೆಂದರೆ ರಿಸರ್ವ್‌ಬ್ಯಾಂಕ್‌ನ ಈ ನಿಯಮವನ್ನು ಮೀರಿದರೆ ಕಾರಾಗೃಹ ಶಿಕ್ಷೆ ವಿಧಿಸುವ ಅವಕಾಶವೂ ಇದೆ.

ಅದು ಏನೇ ಆಗಲಿ, ಯಾರಾದರೂ ಜೈಲು ಪಾಲಾಗಲಿ, ನಮಗೆ ನಷ್ಟವೇನೂ ಇಲ್ಲ. ಆದರೆ ಬೆವರು ಸುರಿಸಿ ಗಳಿಸಿದ ಅಷ್ಟೋ ಇಷ್ಟೋ ಪುಡಿಗಾಸನ್ನು ಯಾವುದೊ ವಂಚಕರ ಬಾಯಿಗೆ ಹಾಕಿ ಆಮೇಲೆ ಪರಿತಪಿಸುವ ಕರ್ಮವಂತೂ ಬೇಡವೇ ಬೇಡ. ಆದ್ದರಿಂದ ಈಗಲೇ ಹುಷಾರಾಗಿ.


• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಡವರಿಗೆ ಸಂಕಟ ಬಡ್ಡಿಕೋರರಿಗೆ ಚೆಲ್ಲಾಟ

ಈ ಗೋಲ್ಡ್ ಲೋನ್ ಕಂಪನಿಗಳ ಬೆಳವಣಿಗೆ ದೇಶದ ಕೆಳವರ್ಗದ ಜನರ ಆರ್ಥಿಕತೆಗೆ ಹಿಡಿದ ಕನ್ನಡಿಯಂತಿದೆಯೆಂದರೆ ನಿಮಗೆ ಆಶ್ಚರ್ಯವೆನಿಸಬಹುದು. ಹೌದು ನಿಜ. ಬಡಜನರ ಆರ್ಥಿಕ ಮುಗ್ಗಟ್ಟು ಹೆಚ್ಚಾದಷ್ಟೂ, ಕಷ್ಟಕಾರ್ಪಣ್ಯಗಳು ಹೆಚ್ಚಾದಷ್ಟೂ ಈ ಕಂಪನಿಗಳಿಗೆ ಗಿರಾಕಿ ಹೆಚ್ಚುತ್ತಾರೆ. ಜನರಿಗೆ ರೋಗರುಜಿನಗಳು ಹೆಚ್ಚಾದಷ್ಟೂ ವೈದ್ಯರಿಗೆ ಸುಗ್ಗಿ. ಇದು ನಮ್ಮ ದೇಶದ ದುರಂತ.


ಈ ಮಣಪ್ಪುರಂನ ಇತಿಹಾಸವನ್ನೇ ನೋಡಿ. ಇದರ ಮಾಲಿಕ ವಿಪಿ ನಂದಕುಮಾರ್. 1986 ರಲ್ಲಿ ತನ್ನ ತಂದೆಯ ನಿಧನದ ಸಂದರ್ಭದಲ್ಲಿ ಕೇರಳದ ತ್ರಿಶೂರಿನ ಸುತ್ತಮುತ್ತ ಸಣ್ಣ ಪುಟ್ಟ ಲೇವಾದೇವಿ ಮಾಡಿಕೊಂಡಿದ್ದ ಕಂಪನಿಯ ಒಡೆಯನಾಗಿ ಅಧಿಕಾರ ಕೈಗೆ ತೆಗೆದುಕೊಂಡ ನಂತರ ಅದರ ಯಶೋಗಾಥೆ ನಮ್ಮೆಲ್ಲರ ಮುಂದಿದೆ. ಬಡವರಾಗಲಿ ಬಲ್ಲಿದರಾಗಲಿ ಅವರವರ ಶಕ್ತ್ಯಾನುಸಾರ ಬಂಗಾರವನ್ನು ಕೊಳ್ಳುವುದು ಭಾರತದ ಸಂಸ್ಕೃತಿಯ ಒಂದು ಭಾಗವೆಂದರೆ ತಪ್ಪಾಗಲಾರದು. ಒಟ್ಟಾರೆ ದೇಶದ ಜನರ ಬಳಿ ಆಭರಣ ರೂಪದಲ್ಲಿರುವ ಬಂಗಾರ ಸುಮಾರು 18000 ಟನ್ನುಗಳೆಂದು ಒಂದು ಅಂದಾಜು. ಈ ಬಂಗಾರವೇ ಬಡ್ಡಿ ಕಂಪನಿಗಳ ವ್ಯವಹಾರದ ಮೂಲ. ಇಂದು ಮಣ್ಣಪುರಂ ದೇಶದ 22 ರಾಜ್ಯಗಳಲ್ಲಿ ಒಟ್ಟು 2916 ಶಾಖೆಗಳನ್ನು ಸ್ಥಾಪಿಸಿದೆ. ಅದರ ಬಹುಪಾಲು ಶಾಖೆಗಳು ದಕ್ಷಿಣ ಭಾರತದಲ್ಲೇ ಇವೆ. ತಮಿಳುನಾಡಿನಲ್ಲಿ 563, ಕರ್ನಾಟಕದಲ್ಲಿ 524, ಆಂಧ್ರ ಪ್ರದೇಶದಲ್ಲಿ 517 ಮತ್ತು ಕೇರಳದಲ್ಲಿ 493 ಶಾಖೆಗಳಿವೆ. ಈ ಕಂಪನಿಯ ವಹಿವಾಟನಡಿ ಬರುವ ಸ್ವತ್ತುಗಳ ಮೌಲ್ಯ 12,358 ಕೋಟಿಗಳಿಗೇರಿದೆ. ಈ ಮೊತ್ತವನ್ನು ಇನ್ನು ಒಂದು ವರ್ಷದಲ್ಲಿ 13,500 ಕೋಟಿಗಳಿಗೆ ಏರಿಸುವುದಾಗಿ ಇದರ ವಕ್ತಾರರು ಹೇಳಿಕೊಂಡಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಕೊನೆಗೊಂಡ ತ್ರೈಮಾಸಿಕದಲ್ಲಿ ಮಣಪ್ಪುರಂ ಫೈನಾನ್ಸ್ ಗಳಿಸಿದ ನಿವ್ವಳ ಲಾಭ ಬರೋಬ್ಬರಿ 161.37 ಕೋಟಿಗಳು!

ಜನರ ಸಂಕಷ್ಟಗಳು ಮತ್ತಷ್ಟು ಹೆಚ್ಚಾದಂತೆಲ್ಲಾ ಗೋಲ್ಡ್ ಲೋನ್ ಕಂಪನಿಗಳ, ಬಡ್ಡಿ ಮಾರ್ವಾಡಿಗಳ ಲಾಭ ಮತ್ತಷ್ಟು ಹೆಚ್ಚಲಿದೆ.









ಸೇಂಟ್ ಮೇರೀಸ್ ದ್ವೀಪ


ಚೆಡ್ಡಿ ಶಾಸಕ ರಘುಪತಿ ಭಟ್ಟನ ಬೆತ್ತಲೆ ಬ್ಯುಸಿನೆಸ್!!

ಅದೊಂದು ಪ್ರಾಕೃತಿಕ ಸೊಬಗಿನ ದ್ವೀಪ; ವಾಸ್ಕೋ-ಡಿ-ಗಮಾ ಕಂಡು ಹಿಡಿದ ಪವರು ಶಿಲೆಗಳ ಐತಿಹಾಸಿಕ ಐಲ್ಯಾಂಡ್. ಸುಮಾರು ಮೂರು ಕಿ.ಮೀ. ಸುತ್ತಳತೆಯ ಇಡೀ ದ್ವೀಪವೇ ಲಾವಾರಸ ಉಕ್ಕಿ ಘನೀಕರಣಗೊಂಡು ನಿರ್ಮಾಣವಾಗಿದೆ. ಉಡುಪಿಯ ಮಲ್ಪೆ ಬೀಚ್‌ನಿಂದ ಐದು ಕಿ.ಮೀ. ದೂರದ ಅರಬ್ಬೀ ಸಮುದ್ರದ ಮಧ್ಯದಲ್ಲಿರುವ ಈ ದ್ವೀಪದ ಹೆಸರು 'ಸೇಂಟ್ ಮೇರೀಸ್ ಐಲ್ಯಾಂಡ್' ಪುರಾತತ್ವ ಇಲಾಖೆಗೆ ಸೇರಿದ ಈ ಪ್ರಸಿದ್ಧ ಪ್ರವಾಸಿ ತಾಣ ಅತ್ಯಂತ ನಿಯಂತ್ರಿತ ಪ್ರದೇಶ. ಅಷ್ಟ ಮಠಾಧೀಶರು ಕೊಟ್ಟಿರುವ ಧಾರ್ಮಿಕ ದಂಧೆ ಟಚಪ್‌ನಿಂದ 'ದೈವಾಂಶಸಂಭೂತ'ವೂ ಆಗಿಹೋಗಿದೆ ಪವಿತ್ರ ದ್ವೀಪ!!

ಇಂಥ ಇತಿಹಾಸ-ಭೂಗೋಲದ ಸೇಂಟ್ ಮೇರೀಸ್ ದ್ವೀಪ ಸ್ವಯಂ ಘೋಷಿತ ಸುಬಗ ಸಂಸ್ಕೃತಿಯ ಬಿಜೆಪಿಗಳ ಸರ್ಕಾರ ಬುರ್ನಾಸ್ ಮಾಡಿಬಿಟ್ಟಿದೆ! ಸದಾ ಶೀಲ-ಶಿಸ್ತುಸಂಪ್ರದಾಯದ ಪೇಟೆಂಟ್ ಪಡೆದಂತೆ ಹಾರಾಡುವ ಚೆಡ್ಡಿ ಚತುರರು ಮೊನ್ನೆ ಈ ದ್ವೀಪದಲ್ಲಿ ಸಾವಿರಾರು ಬೆತ್ತಲೆ-ಅರೆಬೆತ್ತಲೆ ಹಿಪ್ಪಿಗಳ ಜೊತೆ ಒಂದಿಷ್ಟು ಸ್ವದೇಶಿ ಹೈಪೈ ಮಂದಿರವನ್ನು ಜಮೆ ಮಾಡಿದ್ದರು. ಅವರ ಕೈಗೊಂದಿಷ್ಟು ಅಫೀಮು-ಗಾಂಜಾ-ಹೆಂಡ ಕೊಟ್ಟು ಬೆತ್ತಲೆ 'ಆಟ' ಆಡಲು ಅವಕಾಶ ಕೊಟ್ಟಿದ್ದರು. ಜಿಲ್ಲಾಡಳಿತದ ಬೆಂಗಾವಲಿನಲ್ಲೇ ನಡೆದ ಈ "ಚಟೋದ್ಯಮ"ದಲ್ಲಿ ಬಿಜೆಪಿ ಭಂಡರು ಬರೋಬ್ಬರಿ ಎರಡು ಕೋಟಿ ಕಮಾಯಿಸಿದರು. ಕರ್ನಾಟಕ ಕರಾವಳಿಯಲ್ಲಿ ಪ್ರವಾಸೋದ್ಯಮ ಪ್ರಮೋಟ್ ಮಾಡುವ ನೆಪದಲ್ಲಿ ಮೂರ್ಮೂರು ದಿನ ಬಿಜೆಪಿ ಸರ್ಕಾರ ಪ್ರಣೀತ ಪಕ್ಕಾ ರೇವ್ ಪಾರ್ಟಿ ಸೇಂಟ್ ಮೇರೀಸ್ ಐಲ್ಯಾಂಡಲ್ಲಿ ನಡೆದು ಹೋಯ್ತು!


ಉಡುಪಿ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಮತ್ತು ಸ್ಥಳೀಯ ಶಾಸಕ ರಘುಪತಿ ಭಟ್ಟನ ಬಾಲ್ಯ ಸ್ನೇಹಿತ ಗಿರೀಶ್ ಶೆಟ್ಟಿಯ ಪಿಡಬ್ಲ್ಯೂ ಕಾನ್ಸೆಪ್ಟ್ ಹೆಂಡೋದ್ಯಮಿ ಮಲ್ಯನ ಕಿಂಗ್‌ಫಿಷರ್ ಜಂಟಿಯಾಗಿ ಸೇಂಟ್ ಮೇರೀಸ್ ದ್ವೀಪದಲ್ಲಿ "ಸ್ಪ್ರಿಂಗ್ ಝೂ 2012" ಎಂಬ ಅಂತರರಾಷ್ಟ್ರೀಯ ಮಟ್ಟದ ಕೊಳಕು ಸಾಂಸ್ಕೃತಿಕ ಉತ್ಸವ ಹಮ್ಮಿಕೊಂಡಿತ್ತು. ಫೆಬ್ರವರಿ 3, 4 ಮತ್ತು 5 ರಂದು ನಡೆದ ಈ ಮೋಜು-ಮಸ್ತಿಯ ಸಂಗೀತ-ನೃತ್ಯ ಮೇಳಕ್ಕೆ ಜಿಲ್ಲಾಧಿಕಾರಿ ಡಾ. ಟಿ.ಎಂ. ರೇಜು ಎಂಬ ಅಡ್ಡಕಸುಬಿ ಎಮ್ಮೆಲ್ಲೆ ರಘುಪತಿ ಭಟ್ಟನ ಗುಲಾಮ ಉಡುಪಿ ಜಿಲ್ಲೆಯ ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿಪಡಿಸುವ ಇಂಡೋ-ವೆಸ್ಟರ್ನ್ ಇಂಟರ್‌ನ್ಯಾಷನಲ್ ಫೆಸ್ಟಿವಲ್ ಎಂದು ನಾಮಕರಣ ಮಾಡಿದ್ದ! ರಂಗೀಲಾ ರಗಳೆಗಳ ಎಮ್ಮೆಲ್ಲೆ ರಘುಪತಿ ಭಟ್ ಮತ್ತು ಎಡವಟ್ಟು ಡಿಸಿ ರೇಜು ಸಾಹೇಬರ ನಿರ್ದೇಶನದಲ್ಲಿ ಮೂರು ರಾತ್ರಿ ಬೆಳಗಾಗುವವರೆಗೆ ನಡೆದ ಈ ವಿಕೃತ ಉತ್ಸವದ ಉದ್ದೇಶ ದೇಶ-ವಿದೇಶಿ ಪ್ರವಾಸಿಗರನ್ನು ಕರಾವಳಿಯತ್ತ ಸೆಳೆಯುವುದಾಗಿತ್ತು, ಆದರೆ ಹಿಡನ್ ಹಿಕಮತ್ತು ಮಾತ್ರ ದೇಶ-ವಿದೇಶಿ ಅಮಲುಕೋರ ಜೋಡಿಗಳ ಕೀಟ ಕೆರಳಿಸುವ ರಾಕ್-ಸಂಗೀತ-ರತಿನೃತ್ಯ ಏರ್ಪಡಿಸಿ ಕೊಪ್ಪರಿಗೆಗಟ್ಟಲೆ ಡಾಲರ್ ದೋಚುವುದಾಗಿತ್ತು!

ಎಮ್ಮೆಲ್ಲೆ ಭಟ್ಟನ ಪಾಪಾ ದೋಸ್ತ್ ಗಿರೀಶ್ ಶೆಟ್ಟಿ ಇಂಥ ರೇವ್ ಪಾರ್ಟಿ ರಗಳೆಗಳಲ್ಲಿ ನಿಸ್ಸೀಮ. ಈತ [illegible] ಸೇರಿದಂತೆ ಬೇರೆಬೇರೆ ದೇಶದ ಮತ್ತು ಕರ್ನಾಟಕದ ವಿವಿಧ ಭಾಗದ ಚಿತ್ರ-ವಿಚಿತ್ರ ಸಂಗೀತ-ನೃತ್ಯ ತಂಡಗಳನ್ನು ತರಿಸಿದ್ದ. ಈ 'ಮ್ಯೂಸಿಕ್' ಗ್ಯಾಂಗ್‌ಗಳು ಬೆಳಗಾನ ಜೋಡಿಗಳಿಗೆ ಹುಚ್ಚೆಬ್ಬಿಸಿದರೆ, ಡಿಸಿ ಸಾಹೇಬರು ಖುದ್ದು ನಿಂತು ಬಾರ್ ವ್ಯವಸ್ಥೆ ಮಾಡಿಸಿದ್ದರು. ಕಿಂಗ್‌ಫಿಷರ್ ಕಂಪನಿಯು ಹೆಂಡದ ಹೊಳೆಯೇ ಹರಿಸಿದರೆ, ವಿದೇಶಿ ಹೆಂಡ-ಆಹಾರ-ಗಾಂಜಾಗಿಂಜಾ ಬೇಕಾದರೆ ಪ್ರತ್ಯೇಕವಾಗಿ ಹಣ ಕೊಡಬೇಕಿತ್ತು



ಮೂರು ದಿನದ ಈ ವಿಕೃತೋತ್ಸವದಲ್ಲಿ ಮೊದಲ ದಿನ ಸುಮಾರು 500 ಜನರಷ್ಟೇ ಸೇರಿದ್ದರು. ಎರಡನೇ ದಿನ 1000 ದಷ್ಟು ಚಟದಾರರು ಜಮೆಯಾಗಿದ್ದರೆ, ಕೊನೆಯ ದಿನ 2000-3000 'ಆದಿ ಮಾನವರು' ಸೇಂಟ್ ಮೇರೀಸ್‌ನ ಸರ್ಕಾರಿ ರೇವ್ ಪಾರ್ಟಿಗೆ ಬಂದಿದ್ದರು. ಮೂರು ದಿನ ಶಾಸಕ ಭಟ್ಟನ ಗೆಳೆಯ ಗಿರೀಶ್ ಶೆಟ್ಟಿಯ ನಂಗಾನಾಚ್-ಅಮಲಾಟದ ಕಾರ್ಯಕ್ರಮದಲ್ಲಿ ಕೋಟಿ ಕೋಟಿ ಬ್ಯುಸಿನೆಸ್ ನಡೆದಿದೆ. ಇದರಲ್ಲಿ ಖರ್ಚು-ವೆಚ್ಚ ಎಲ್ಲ ಕಳೆದು ಗಿರೀಶ್ ಶೆಟ್ಟಿ ಬಳಗಕ್ಕೆ ಬರೋಬ್ಬರಿ ಎರಡು ಕೋಟಿ ಲಾಭವಾಗಿದೆ ಎಂದು ಈ ವಿಕೃತ ಉತ್ಸವವನ್ನು ಹತ್ತಿರದಿಂದ ನೋಡಿದ ದಂಧೆದಾರರೇ ಹೇಳುತ್ತಾರೆ. ಗಿರೀಶ್ ಶೆಟ್ಟಿ ಸರ್ಕಾರಕ್ಕೆ ತುಂಬಿರುವುದು ಬರೀ 5 ಲಕ್ಷ ಲೈಸೆನ್ಸ್ ಫೀ ಅಷ್ಟೇ!! ಹಾಗಂತ ಈ ಸರ್ಕಾರಿ ಕಾಮಲೋಕ-ಅಮಲು ಪ್ರಪಂಚದಲ್ಲಿ ಜಮಾ-ಖರ್ಚು ಆದ ಹಣ ವೆಷ್ಟೆಂಬುದು ಡಿಸಿಗೇ ಗೊತ್ತಿಲ್ಲ. ಆ ಲಕ್ಕಿ ಶಾಸಕ ಭಟ್ಟನ 'ಬಿಸಿನೆಸ್'ನ ಮ್ಯಾನೇಜಿಂಗ್ ಪಾರ್ಟನರ್ ಶೆಟ್ಟಿ ಬುದ್ಧಿಪೂರ್ವಕವಾಗಿ ಅಡಗಿಸಿದ್ದಾನೆ.

ಈ ಗಿರೀಶ್ ಶೆಟ್ಟಿಯ ಮೂಲ ಉಡುಪಿ. ಈತ ಉಡುಪಿಯ ಪ್ರಸಿದ್ಧ ಡೆಂಟಿಸ್ಟ್ ಓರ್ವರ ಮಗಳ ಗಂಡ; ಶಾಸಕ ರಘುಪತಿ ಭಟ್ಟನ ಗಳಸ್ಯಕಂಠಸ್ಯ ಮಿತ್ರ. ಗಿರೀಶ್‌ಗೆ ಬೆಂಗಳೂರು-ಗೋವಾ-ಕೇರಳದ ಐಷಾರಾಮಿ ರೆಸಾರ್ಟ್‌ಗಳಲ್ಲಿ ರೇವ್ ಪಾರ್ಟಿ ನಡೆಸುವುದೇ ದಂಧೆ. ಕೊಳಕು ಹಿಪ್ಪಿಗಳ-ಹೈ-ಪೈ ಮಂದಿಯ ಹಸಿಬಿಸಿ ಹಪಾಹಪಿ ಬಂಡವಾಳ ಮಾಡಿಕೊಂಡು ಆಸಿಡ್ ಪಾರ್ಟಿ- ರೇವ್



ರೇವ್ ಪಾರ್ಟಿ ಸಿದ್ಧತೆಯಲ್ಲಿ ಭಟ್ಟ...

ಪಾರ್ಟಿ ಏರ್ಪಡಿಸುವ ಕುಕಲೆ ಈತನಿಗೆ ಕರಗತವಾಗಿ ಹೋಗಿದೆ. ಈ ಸನ್ಮಿತ್ರನ ಮುಂದಿಟ್ಟುಕೊಂಡು ಶಾಸಕ ಭಟ್ಟ ರೇವ್‌ಪಾರ್ಟಿ ಏರ್ಪಡಿಸಿ ಹಣ ಮಾಡುವ ಸ್ಕೆಚ್ ಮೂರ್ನಾಲ್ಕು ತಿಂಗಳ ಹಿಂದೆಯೇ ಹಾಕಿಕೊಂಡಿದ್ದ. ಯಾವಾಗ ರೇಜು ಎಂಬ ಸ್ವಂತಿಕೆ-ಜನಪರ ಬದ್ಧತೆಗಳಿಲ್ಲದ ಐಎಎಸ್ ಅಡ್ನಾಡಿ ಜಿಲ್ಲಾಧಿಕಾರಿಯಾಗಿ ಬಂದನೋ ಆಗ ಭಟ್ಟನಿಗೆ 'ಸೆಕ್ಸ್ ಟೂರಿಸಮ್' ಕಾರ್ಯಕ್ರಮಕ್ಕೆ ಮುಹೂರ್ತ ಇಡಲು ಅನುಕೂಲವಾಯ್ತು. ಹಿಪ್ಪಿಗಳನ್ನು, ಇಂಡಿಯಾದ ತೆವಲುಗಾರರನ್ನೆಲ್ಲ ಕಲೆಹಾಕಿ ಅವರ ಕಾಮ ಕೆರಳಿಸಿ ಕಾಸು ಮಾಡುವ ದಂಧೆಕೋರ ಗಿರೀಶ್ ಶೆಟ್ಟಿಯನ್ನು ಮುಂದಿಟ್ಟುಕೊಂಡು ಭಟ್ಟ ಕರಾಮತ್ತು ನಡೆಸಹತ್ತಿದ. ಮೊನ್ನೆ ಸೇಂಟ್ ಮೇರೀಸ್ ದ್ವೀಪದಲ್ಲಿ ನಡೆದ ಸರ್ಕಾರಿ ಪ್ರಣೀತ ನಂಗಾನಾಚ್ ಉತ್ಸವ ಉದ್ಘಾಟಿಸಿದ್ದೇ ಈ ಶಾಸಕ ಭಟ್ಟ. ಮೂರೂ ದಿನ ಭಟ್ಟ ತುಂಬ ಮುತುವರ್ಜಿಯಿಂದ ಹಿಂದೂ ಸಂಸ್ಕೃತಿ ಉತ್ಥಾನ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ದ್ವೀಪದಲ್ಲೇ ಠಿಕಾಣಿ ಹೂಡಿಕೊಂಡಿದ್ದ.

ಪ್ರವಾಸೋದ್ಯಮದ ಅಭಿವೃದ್ಧಿ ಧ್ಯೇಯೋದ್ದೇಶದಿಂದ ಹಮ್ಮಿಕೊಂಡಿದ್ದ 'ಉತ್ಸವ' ವಿದೇಶಿ ಜೋಡಿಗಳ ಜೋಡಿಗಳು ಬರುವಾಗಲೇ ಸಾಕಷ್ಟು ಗಾಂಜಾ-ಅಫೀಮು-ಚರಸ್ ಮುಂತಾದ ಅಮಲು ಪದಾರ್ಥ ತೆಗೆದುಕೊಂಡೇ ಬಂದಿದ್ದರು.

ಈ ವಿದೇಶಿ-ದೇಶಿ ಜೋಡಿಗಳು ಮಲ್ಪೆ ಬೀಚ್‌ನಿಂದ ಬೋಟ್‌ನಲ್ಲಿ ಗುಂಪು-ಗುಂಪಾಗಿ ಬಂದರು. ಬರುವಾಗ ಯಾರೂ ಇವರನ್ನು ತಡೆದು ತಪಾಸಣೆ ನಡೆಸಲಿಲ್ಲ. ಆಳುವ ಚೆಡ್ಡಿ ಸರ್ಕಾರದ ಪ್ರಭಾವಿ ಶಾಸಕ ರಘುಪತಿ ಭಟ್ಟ ಮತ್ತು ಜಿಲ್ಲಾಡಳಿತ ಕೃಪಾಕಟಾಕ್ಷದಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿಗೆ ಹೋಗುತ್ತಿದ್ದವರ ತಡೆವ ತಾಕತ್ತು ಯಾರಿಗಿದೆ? ಹೀಗಾಗಿ ಈ ದೇಶ-ವಿದೇಶಿ ಕಪಲ್‌ಗಳು ಅಮಲು ಪದಾರ್ಥ ಹಿಡಿದುಕೊಂಡೇ ಸೇಂಟ್ ಮೇರೀಸ್ ದ್ವೀಪದ ಸರ್ಕಾರಿ ರೇವ್ ಅಡ್ಡೆಗೆ ನಿರಾತಂಕವಾಗಿ ಹೋಗಿದ್ದಾರೆ. ಗೋವಾ, ಮುಂಬೈ, ಕೇರಳ, ದಿಲ್ಲಿ, ಗೋಕರ್ಣ ಕಡೆಯಿಂದ ವಿದೇಶಿ ಜೋಡಿಗಳು ಬಂದರೆ, ಸ್ವದೇಶಿ ಜೋಡಿಗಳು ಬೆಂಗಳೂರು-ಕೇರಳದಿಂದ ಬಂದಿದ್ದರು. ವಿದೇಶಿ ಕಪಲ್‌ಗಳಿಗೆ ತಲಾ 2500 ಡಾಲರ್ ಶುಲ್ಕ ವಿಧಿಸಲಾಗಿತ್ತು, ದೇಶಿಯರಿಗೆ ಹತ್ತು ಸಾವಿರ ಪ್ರವೇಶ ಧನ ನಿಗದಿಸಲಾಗಿತ್ತು,

ಉನ್ಮಾನದಿಂದ ದಿಕ್ಕುತಪ್ಪಿ-ಹೋಯ್ತೆಂದು ಅಥವಾ ಜಿಲ್ಲಾಡಳಿತದ ನಿಯಂತ್ರಣ ಮೀರಿ ಹೋಯ್ತೆಂದು ಯಾರೂ ಭಾವಿಸಬೇಕಾಗಿಯೇ ಇಲ್ಲ. ಏಕೆಂದರೆ ಸೇಂಟ್ ಮೇರೀಸ್ ದ್ವೀಪದಲ್ಲಿ ಮೂರು ರಾತ್ರಿ ಬೆಳಗಾನ ನಡೆದ ಮಧ್ಯ-ಗಾಂಜಾ-ಅಫೀಮಿನ ಸಮಾರಾಧನೆ, ಕಾಮಕಾಂಡಗಳೆಲ್ಲ ಶಾಸಕಭಟ್ಟ ಮತ್ತವನ ಆಜ್ಞಾನುಧಾರಕನಾದ 'ಲಹರಿ' ಮೆಂಟಾಲಿಟಿಯ ಡಿಸಿ ರೇಜು ಬುದ್ಧಿಪೂರ್ವಕವಾಗೇ ಟೂರಿಸಮ್ ಮುಖವಾಡದಲ್ಲಿ ರೇವ್ ಪಾರ್ಟಿ-ಬೆತ್ತಲೆ ಬ್ಯಾಲೆ ಹಮ್ಮಿಕೊಂಡಿದ್ದರೆಂಬುದಕ್ಕೆ ಸಾಕ್ಷ್ಯಾಧಾರದಂತಿವೆ. ರಾತ್ರಿ ಬೆಳದಿಂಗಳು ಪ್ರಖರವಾಗುತ್ತಿದ್ದಂತೆ, ಹಿತವಾದ ಛಳಿ ಬೀಸುತ್ತಿದ್ದಂತೆ ಜೋಡಿಗಳು 'ಎಚ್ಚರ' ತಪ್ಪಿ ಓಲಾಟ-ಕಾಮದಾಟ ಶುರುಹಚ್ಚಿಕೊಂಡು ಬಿಡುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದ ಸುತ್ತಲೂ ತುಂಡು ಬಟ್ಟೆಯೂ ಇಲ್ಲದ ಗಂಡು-ಹೆಣ್ಣು ಓಡಾಡುತ್ತಿದ್ದರು! ಅಲ್ಲಲ್ಲೇ ಪ್ರಣಯದಾಟ, ರತಿಲೀಲೆ ನಡೆದುಹೋಗುತ್ತಿತ್ತು!!

ಕೆಲವರು ಹುಚ್ಚೆಬ್ಬಿಸುವ ನೃತ್ಯಕ್ಕೆ ಬಟ್ಟೆ ಬಿಚ್ಚಿಕೊಂಡು ಹೆಜ್ಜೆ ಹಾಕುತ್ತಿದ್ದರೆ, ಇನ್ನೂ ಕೆಲವರು ಅಲ್ಲಲ್ಲೇ ಮಲಗಿ ಮಲುಕಾಡುತ್ತಿದ್ದರು. ಅದೊಂದು ಬರ್ಬರ-ಹೇಯ-ನಿರ್ಲಜ್ಜ ಕಾಮಕೂಪವಾಗಿ ಹೋಗಿತ್ತು. ಇದೆಲ್ಲ ಹಿಂದೂ ಸಂಸ್ಕೃತಿ-ನೈತಿಕತೆಯ ಪ್ರಬಲ ಪ್ರತಿಪಾದಕ-ಭಯಂಕರ ಭಜರಂಗಿ ರಘುಪತಿ ಭಟ್ಟ ಮತ್ತು ಜಿಲ್ಲಾಧಿಕಾರಿ ರೇಜು ಕಣ್ಣೆದುರೇ ನಡೆದಿದೆ. ಜಿಲ್ಲಾಡಳಿತವಾಗಲಿ, ಸಾಕ್ಷಾತ್ ಶಾಸಕ ಸಾಹೇಬರಾಗಲಿ ಈ ವಿಕೃತಿಗೆ ತಡೆಹಾಕುವ ಗೋಜಿಗೆ ಹೋಗಲಿಲ್ಲ. ಮೊದಲ ದಿನವೇ ಅಶ್ಲೀಲ ಅವಾಂತರ-ಅನಾಹುತ ನಡೆದರೂ ಇನ್ನುಳಿದ ಎರಡು ದಿನ ಹಾಗಾಗದಂತೆ ಜಿಲ್ಲಾಡಳಿತ-ಎಮ್ಮೆಲ್ಲೆ ಯಾರೂ ಮುಂದಾಗಲೇ ಇಲ್ಲ. ಹಾಗೆ ಹಿಪ್ಪಿಗಳ ಹಸಿಬಿಸಿ ಆಕಾಂಕ್ಷೆಗಳಿಗೆ ಅಡೆ-ತಡೆ ಹಾಕಿದರೆ ಕಲೆಕ್ಷನ್ ಆಗುವುದಾದರೂ ಹೇಗೆ? ಟೂರಿಸಮ್ ಅಭಿವೃದ್ಧಿ ಆಗುವುದಾದರೂ ಹೇಗೆ? ಪ್ರವಾಸೋದ್ಯಮ ಹೆಸರಿನ ವ್ಯಾಪಾರೋತ್ಸವ ಯಶಸ್ವಿಯಾಗುವುದಾದರೂ ಹೇಗೆ? ಇದರರ್ಥ ಇಷ್ಟೆ! ಈ ಪಾತಕ ಜಿಲ್ಲಾಡಳಿತ ಮತ್ತು ಶಾಸಕ ಭಟ್ಟ ಬುದ್ಧಿಪೂರ್ವಕವಾಗೇ ನಡೆಸಿದ್ದಾರೆಂದರ್ಥ!!

ಈ ಬೆತ್ತಲೆ ಪ್ರವಾಸೋದ್ಯಮದಿಂದ ಶಾಸಕ ಭಟ್ಟ ಮತ್ತವನ ಬಿಜೆಪಿ ಭಜರಂಗಿ ಬಳಗದ ಬದುಕು ಭದ್ರವಾಯ್ತೇ ವಿನಃ ಉಡುಪಿ ಜಿಲ್ಲೆಗೆ ಪೈಸೆ ಪ್ರಯೋಜನವಾಗಲಿಲ್ಲ. ಜಿಲ್ಲೆಗೆ ಲಾಭವಾಗುವುದಿರಲಿ, ಸಂಘಪರಿವಾರದ ಸೋಗಲಾಡಿಗಳ ರೇವ್ ಪಾರ್ಟಿಯಿಂದ ಅಪಖ್ಯಾತಿ ಶುರುವಾಗಿಬಿಟ್ಟಿದೆ! ಅತ್ತ ಸೇಂಟ್ ಮೇರೀಸ್ ನಡುಗಡ್ಡೆಯಲ್ಲಿ ದೇಶ-ವಿದೇಶಿ ಜೋಡಿಗಳು ಬೆತ್ತಲಾಗುತ್ತಿದ್ದರೆ, ಅಮಲೇರಿಸಿಕೊಂಡು ಅಸಹ್ಯವಾಗಿ 'ಆಟ' ಆಡುತ್ತಿದ್ದರೆ, ಇತ್ತ ಸಂಘಪರಿವಾರದ ಅಸಲಿ ಸಂಸ್ಕೃತಿ-ಸಂಸ್ಕಾರ ಇಡೀ ನಾಡಿಗೇ ಜಗಜ್ಜಾಹೀರಾಗಿ ಹೋಗಿದೆ. ನೈತಿಕತೆ, ಶೀಲ, ಪಾವಿತ್ರ್ಯವೆಲ್ಲ ಗುತ್ತಿಗೆ ಪಡೆದಂತೆ ತೂರಾಡುವ ಬಿಜೆಪಿ-ಭಜರಂಗಿ-ಆರೆಸ್ಸೆಸ್ ದೇಶಭಕ್ತರು ಹಣ ಸಿಗುತ್ತದೆಂದಾದರೆ ಎಂಥ ನೀಚ ಕೆಲಸಕ್ಕೂ ಹೇಸುವುದಿಲ್ಲ ಎಂಬುದಕ್ಕೆ ಉಡುಪಿಯ ನಂಗಾನಾಚ್ ಆಧಾರಿತ ಪ್ರವಾಸೋದ್ಯಮ ನಿದರ್ಶನದಂತಿದೆ.


ಹಿಂದೂ-ಮುಸ್ಲಿಮ್ ಹುಡುಗ ಹುಡುಗಿಯರು ಪರಸ್ಪರ ಒಡನಾಡಿದರೆ, ಪಬ್‌ಗಳಿಗೆ ಹುಡುಗಿಯರು ಹೋದರೆ ಅಟ್ಟಾಡಿಸಿ ಹೊಡೆದು ಹಿಂಸಿಸಿ ಸಂಸ್ಕೃತಿ "ರಕ್ಷಿಸುವ" ಚೆಡ್ಡಿ-ಬಿಜೆಪಿ ಭೂಪರು ಸೇಂಟ್ ಮೇರೀಸ್ ದ್ವೀಪದಲ್ಲಿ ಯಾರ್ಯಾರನ್ನೋ ಬೆತ್ತಲೆ ಮಾಡಿ, ಅಮಲು ಪದಾರ್ಥ ತಿನ್ನಿಸಿ-ಹೆಂಡ ಕುಡಿಸಿ ಕಾಸು ಮಾಡಿಕೊಂಡಿದ್ದಾರೆ. ಜಿಲ್ಲೆಯ ಜನ ಜೀವನ-ಸಂಸ್ಕೃತಿ-ಶಿಷ್ಟಾಚಾರದ ಮೇಲೆ ದೂರಗಾಮಿ ದುಷ್ಪರಿಣಾಮ ಬೀರುವ ಶಾಸಕ ಭಟ್ಟನ ಕಾಮೋತ್ಸವದ ಬಗ್ಗೆ ನಿಷ್ಠುರ ತನಿಖೆ ನಡೆಸುವ ದಮ್ ಸಿಎಂ ಡೀವಿಗೆ ಇದೆಯಾ? ಜಿಲ್ಲಾ ಉಸ್ತುವಾರಿ ಮಂತ್ರಿ ಡಾ. ಆಚಾರ್ಯ ಬಹಿರಂಗವಾಗೇ ಬೆತ್ತಲಾಗಿ ಹೆಂಡ-ಅಫೀಮು-ಗಾಂಜಾದಿಂದ ಸ್ನಾನ ಮಾಡುವ ತಲುಬುದಾರಿಕೆಯೂ ಮಡೆಸ್ನಾನದಷ್ಟೇ ಪವಿತ್ರವೆಂದು ಭಾವಿಸಿದ್ದಾರಾ? ಹಾಗಿದ್ದರೆ ಆಚಾರ್ಯರೇಕೆ ಮಲ್ಪೆ ದ್ವೀಪದಲ್ಲಾದ ಅನಾಚಾರದ ಬಗ್ಗೆ ಮಾತಾಡುತ್ತಿಲ್ಲ! ಆತನಿಗೇನಾದರೂ ಕೋಟಿ-ಕೋಟಿ ನಂಗಾನಾಚ್ ದಂಧೆಯಿಂದ ಕಮಾಯಿಸಿರುವ ಶಾಸಕ ಭಟ್ಟ ಪಾಲು ಕೊಟ್ಟಿದ್ದಾನಾ?

ಇಂಥ ಪರಮ ಪವಿತ್ರ-ಸಂಸ್ಕಾರ-ದೇಶಭಕ್ತ ಭಟ್ಟ-ಆಚಾರ್ಯನ ಶಾಸಕ-ಮಂತ್ರಿಯಾಗಿ ಪಡೆದ ಉಡುಪಿಯ 'ಪುಣ್ಯ'ಕ್ಕೆ ಏನೆನ್ನುವುದು?

• ನಮುಷ



ರೇವ್ ಪಾರ್ಟಿ ವಿರುದ್ಧ ಕಾಂಗ್ರೆಸ್ಸಿಗರಿಂದ ಮತ್ತು ಮಹಿಳೆಯರಿಂದ ಪ್ರತಿಭಟನೆ...



ಜಯಸಿಂಹ




ಮೈಸೂರು ಕೇಂದ್ರ ಕಾರಾಗೃಹದ ಅಧಿಕಾರಿಗಳ ಕರ್ಮಕಾಂಡ

ಮೈಸೂರು ಕಾರಾಗೃಹದ ಅಧೀಕ್ಷಕ ಮಲ್ಲೇಶ್, ಸಹಾಯ ಅಧೀಕ್ಷಕ ಜೋಗಯ್ಯ, ಜೈಲರ್ ಸುರೇಶ್‌ರ ದುಷ್ಟ ಕೂಟ ಜೈಲನ್ನು ಹಾಗೂ ಬಂದಿಗಳನ್ನು ಹುರಿದು ಮುಕ್ಕಿ ತಿನ್ನುತ್ತಿದೆ. ಈಗ ಮುಖ್ಯ ಅಧೀಕ್ಷಕರಾಗಿರುವ ಜಯಸಿಂಹ ಕೆಲವು ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡಿದ್ದರೂ ಅವರನ್ನು ಈ ದುಷ್ಟ ಕೂಟವೇ ನಿಯಂತ್ರಿಸುತ್ತಿದೆ.

ಅಧೀಕ್ಷಕ ಮಲ್ಲೇಶ್ ಇನ್ನೂ 3-4 ತಿಂಗಳಲ್ಲಿ ನಿವೃತ್ತರಾಗಲಿದ್ದು, ಇವರು ಮಾಡುತ್ತಾ ಬಂದ ಅಕ್ರಮಗಳು ಲೂಟಿಗಳಿಂದಾಗಿ ಮೈಸೂರು, ಹಾಸನಗಳಲ್ಲಿ ಭಾರಿ ನಿವೇಶನಗಳು, ಕಾರುಬಂಗಲೆಗಳನ್ನು ಶೇಖರಿಸಿಟ್ಟುಕೊಂಡಿದ್ದಾರೆ.

ಹಾಸನದಲ್ಲಿ ಕಟ್ಟಿಸಿರುವ ಬಂಗಲೆಗಳಿಗೆ ಜೈಲಿನಲ್ಲಿರುವ ಅನುಕೂಲಕರ ಕೈದಿಗಳಿಂದ ಹಣ ಕಿತ್ತಿದ್ದಾರೆ. ಜೈಲರ್ ಆಗಿ ಪದೋನ್ನತಿ ಹೊಂದುತ್ತಾ ಅಧೀಕ್ಷಕ ಸ್ಥಾನಕ್ಕೆ ಏರಿರುವ ಇವರಿಗೆ ಇಷ್ಟೆಲ್ಲಾ ಭಾರಿ ಆಸ್ತಿ ಸಂಪಾದಿಸಲು ಹೇಗೆ ಸಾಧ್ಯ ಎಂಬುದರ ತನಿಖೆ ನಡೆಸಿದರೆ ಇವರ ಅಕ್ರಮ ಆಸ್ತಿಗಳು ಇನ್ನಷ್ಟು ಹೊರಬರಬಹುದು. ಬಂದಿಗಳ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡಲು, ಪೆರೋಲ್ ಮಂಜೂರು ಮಾಡಲು, ಬೇರೆ ಜೈಲಿಗೆ ವರ್ಗಾವಣೆ ಮಾಡಿಸಿಕೊಳ್ಳಲು, ಹೊರಗಿನ ಆಸ್ಪತ್ರೆಗೆ ಕಳುಹಿಸಿಕೊಡಲು ಮೊದಲಾದ ಎಲ್ಲಾ ಕೆಲಸಗಳಿಗೂ ನೂರಾರು ರೂಪಾಯಿಗಳಿಂದ ಸಾವಿರಾರು ರೂಪಾಯಿ ಚೆಲ್ಲಬೇಕಾಗುತ್ತದೆ. ಕೊಡಲಾಗದ ಬಂದಿಗಳ ಕೆಲಸಗಳು ಆಗುವುದೇ ಇಲ್ಲ.

ತನ್ನ ಮನೆಗೆ ಸಜಾ ಬಂದಿಗಳನ್ನ ಅಕ್ರಮವಾಗಿ ಕರೆಸಿಕೊಂಡು ಬಿಟ್ಟಿ ಗುಲಾಮಗಿರಿ ಕೆಲಸಗಳಿಗೆ, ತನ್ನ ಮನೆಯ ಕಕ್ಕಸ್ಸು ರೂಮು ಸ್ವಚ್ಛಗೊಳಿಸಲು, ಬೂಟ್ ಪಾಲಿಷ್ ಮಾಡಲು, ಮನೆಯವರ ಬಟ್ಟೆ ತೊಳೆಯಲು ಹಚ್ಚುತ್ತಾರೆ. ಚಾಮರಾಜನಗರ ಜಿಲ್ಲೆಗೆ ಸೇರಿದ ಮಹಾದೇವಯ್ಯ ಎಂಬ ದಲಿತ ಸಜಾ ಬಂದಿಗಳ ಕೈಲಿ ಈ ರೀತಿಯ ಚಾಕರಿಯನ್ನು ವರ್ಷಾನುಗಟ್ಟಲೇ ಮಾಡಿಸಿ, ಹಿಂಸಿಸಿ, ಕಿರುಕುಳ ನೀಡಿ, ಮೊದಲು ಅವರಿಗೆ ಸಿಗುತ್ತಿದ್ದ ಪೆರೋಲ್ ಕೂಡ ಇಲ್ಲದಂತೆ ಮಾಡಿದ್ದರಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗಿ ಬೆಂಗಳೂರಿಗೆ ಚಿಕಿತ್ಸೆಗೆ ಹೋಗುವಂತೆ ಮಾಡಿದ್ದಾರೆ. ಈಗ ಮುಖ್ಯ ಅಧೀಕ್ಷಕನಾಗಿ ಪದೋನ್ನತಿ ಹೊಂದಲು ಲಿಂಗಾಯತ ಸ್ವಾಮಿಗಳು ಹಾಗೂ ರಾಜಕಾರಣಿಗಳ ಪಾದಗಳಿಗೆ ಬೀಳುವ ಕಾಯಕ ಶುರುಮಾಡಿದ್ದಾನೆ. ತನ್ನ ಅಧೀನ ಸಿಬ್ಬಂದಿಗಳ ಮೇಲೆ ಹಾಗೂ ಬಂದಿಗಳ ಮೇಲೆ ದರ್ಪ ತೋರಿಸುತ್ತಾ ಕಿರುಕುಳ ನೀಡಿ ಹಿಂಸಿಸುತ್ತಾನೆ. ಮಾನವೀಯ, ಸುಧಾರಣೆಯ ಕೆಲಸಗಳಿಗೆಲ್ಲಾ ತಡೆಗಳನ್ನು ಒಡ್ಡುತ್ತಾ ತನಗೆ ಮುಕ್ಕಾಲು ದೊರೆತರೆ ಮಾತ್ರ ಸ್ವಲ್ಪ ಆಸಕ್ತಿ ತೋರಿಸುವಂತೆ ಮಾಡುತ್ತಾರೆ. ಸಾಕಷ್ಟು ಲಂಚಪಡೆದುಕೊಂಡರೂ ಯಾವ ಕೆಲಸವನ್ನೂ ಮಾಡದೇ ಇರುವಷ್ಟು ನೀಚತನವೂ ಈತನಲ್ಲಿದೆ. ಈ ರೀತಿ ಹಲವಾರು ಬಂದಿಗಳಿಗೆ ಮಾಡಿದ್ದಾರೆ. ಬಂದಿಗಳನ್ನು ಮನುಷ್ಯರಂತೆ ಕಾಣುವ, ಅವರ ಅಭಿವೃದ್ಧಿ ಸುಧಾರಣೆಗಳಿಗೆ ಅಗತ್ಯವಾಗಿರುವ ವಾತಾವರಣ ನಿರ್ಮಿಸುವ ಕನಿಷ್ಠ ಕಾಳಜಿಯೂ ಇಲ್ಲದ ಮಲ್ಲೇಶನಂತಹ ಅಧಿಕಾರಿಗಳು ಸಮಾಜಕ್ಕೆ ಮಾಡುವ ಅಪಾಯ ಅಷ್ಟಿಷ್ಟಲ್ಲ. ಇಷ್ಟೆಲ್ಲಾ ದುರಾಚಾರಗಳನ್ನು ಮಾಡುತ್ತಾ ಇರುವ ಈ ಅಧಿಕಾರಿ ಜೈಲಿನ ಪ್ರಜಾಪಿತ ಈಶ್ವರಿಯ ವಿದ್ಯಾಲಯದ ಘಟಕವೊಂದರ ಪೋಷಕನ ಸೋಗನ್ನು ಬೇರೆ ಹಾಕ್ಕೊಂಡಿದ್ದಾನೆ.



ಆಸ್ಪತ್ರೆಯಲ್ಲಿ ಕೈದಿಗಳು

ರಾಜ್ಯದ ಸಾಂಸ್ಕೃತಿಕ ನಗರಿಯೆಂದು ಮೈಸೂರನ್ನು ಕರೆಯಲಾಗುತ್ತಿದೆ. ಇಂತಹ ಮೈಸೂರಿನಲ್ಲಿ ಕೇಂದ್ರ ಕಾರಾಗೃಹ ಒಂದಿದೆ. ಇದರ ಒಟ್ಟು ಸಾಮರ್ಥ್ಯ ಐನೂರನ್ನು ಮೀರುವುದಿಲ್ಲ ಆದರೆ ಸಾವಿರದ ನೂರೈವತ್ತಕ್ಕಿಂತಲೂ ಹೆಚ್ಚಿನ ಕೈದಿಗಳನ್ನು ಇಲ್ಲಿ ತುಂಬಲಾಗಿದೆ. 75-80 ರಷ್ಟು ಮಹಿಳಾ ಬಂದಿಗಳೂ ಇಲ್ಲಿದ್ದಾರೆ. ಇಲ್ಲಿನ ಬಂದಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಭಾಗದ ರೈತಾಪಿ ಜನರು. ವೃತ್ತಿಪರ ಅಪರಾಧಿಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದಾರೆ. ಸಾಂದರ್ಭಿಕವಾಗಿ, ಯಾವುದೋ ಆವೇಶ, ಸಿಟ್ಟುಗಳಿಗೆ, ತಪ್ಪು ಗ್ರಹಿಕೆಗಳಿಗೆ ಒಳಗಾಗಿ, ಇಲ್ಲವೇ ಪರಿಸ್ಥಿತಿಯ ಒತ್ತಡಗಳಿಗೆ ಒಳಗಾಗಿ ತಪ್ಪುಗಳನ್ನು ಮಾಡಿದವರೇ ಅಧಿಕ. ಅದಲ್ಲದೇ ಹಲವರು ಯಾರೋ ಮಾಡಿದ ತಪ್ಪಿಗೆ ಜೈಲು ಸೇರಿದವರಿದ್ದಾರೆ. ಬಡ ಹಿನ್ನೆಲೆಯ ಅನಕ್ಷರಸ್ಥರೇ ಹೆಚ್ಚಿನವರು. ಅಮಾಯಕರ ಸಂಖ್ಯೆಯೂ ಸಾಕಷ್ಟಿದೆ. ಹತ್ತಾರು ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿರುವವರು ಹಲವರಿದ್ದಾರೆ. ವಿಚಾರಣಾ ಹಂತದಲ್ಲೇ ಇರುವ ಒಬ್ಬರು ಇದೇ ಜೈಲಿನಲ್ಲಿ 12 ವರ್ಷಕ್ಕೂ ಹೆಚ್ಚು ಕಾಲದಿಂದ ಇದ್ದಾರೆ. ಇವರೀಗ ಮಾನಸಿಕವಾಗಿ ಜರ್ಜರಿತರಾಗಿ ಅಸ್ವಸ್ಥರಾಗಿದ್ದಾರೆ. ಅವರಿಗೆ ಸರಿಯಾದ ಔಷಧೋಪಚಾರವೂ ಇಲ್ಲ, ನ್ಯಾಯಾಲಯಕ್ಕೆ ಕಳಿಸುವುದೂ ಇಲ್ಲದಂತಹ ಪರಿಸ್ಥಿತಿ ಮಾಡಿಬಿಟ್ಟಿದ್ದಾರೆ. ಅವರಿಗೀಗ 55 ವರ್ಷಕ್ಕೂ ಹೆಚ್ಚಿನ ಪ್ರಾಯವಾಗಿದೆ.

ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಸುಮಾರು 75ಕ್ಕೂ ಹೆಚ್ಚು ಎಕರೆ ಜಾಗ ಇದೆ. ಅದರಲ್ಲಿ ತೆಂಗಿನತೋಟ ಇದೆ. ಅಲ್ಲದೆ ಇಲ್ಲಿ ಕಾಲೊರೆಸು, ಹಾಸು ಚಾಪೆ, ಹತ್ತಿ ಬಟ್ಟೆ, ತೆಂಗಿನ ನಾರಿನ ಉತ್ಪಾದನೆಗಳು, ಮರದ ಉತ್ಪನ್ನಗಳು, ಅಗರಬತ್ತಿ ಮೊದಲಾದ ಗುಡಿ ಕೈಗಾರಿಕೆಗಳಿವೆ.



ಬೆತ್ತನಗೆರೆ ಸೀನನೊಂದಿಗೆ

ಬೆತ್ತನಗೆರೆ ಸೀನನೊಂದಿಗೆ ಚೆನ್ನಿಗಯ್ಯನ ದಂಧೆ

ಸಹಾಯಕ ಅಧೀಕ್ಷಕ ಜೋಗಯ್ಯ ಕೊಳಕು ನಡವಳಿಕೆಯ ಭ್ರಷ್ಟ ವ್ಯಕ್ತಿ, ಕೈದಿಗಳಿಂದ ಲಂಚ ಪಡೆಯದೆ ಯಾವ ಕಾರ್ಯವನ್ನು ಮಾಡದ, ಹಣ ಸಿಗುತ್ತೆಂದರೆ ಎಂತಹ ಅಕ್ರಮಗಳಿಗೆ ಬೇಕಾದರೂ ಅವಕಾಶ ಮಾಡುವ ವ್ಯಕ್ತಿ, ಕೈದಿಗಳಿಗೆ ಬೆದರಿಕೆ ಹಾಕುವುದು, ಹೊಲಸು ಭಾಷೆ ಪ್ರಯೋಗ ಮಾಡುವುದು, ಎಲ್ಲೆಲ್ಲಿ ಯಾರ್‍ಯಾರಿಂದ ಎಷ್ಟೆಷ್ಟು ವಸೂಲಿ ಮಾಡಬಹುದೆಂದು ಹೊಂಚು ಹಾಕುವುದು. ಜೈಲಿನಿಂದ ತನ್ನ ಮನೆ ಏನೇನನ್ನು ತೆಗೆದುಕೊಂಡು ಹೋಗಲು ಸಾಧ್ಯ ಎಂಬುದರ ಯೋಜನೆ ಮಾಡುವುದು ಈತನ ದಿನಚರಿ. ನೆಲಮಂಗಲದ ಕುಖ್ಯಾತ ರೌಡಿ ಶೀಟರ್ ಬೆತ್ತನಗೆರೆ ಸೀನನೊಂದಿಗೆ ಅಕ್ರಮ ಸಖ್ಯ ಬೆಳೆಸಿಕೊಂಡು ಭದ್ರತಾ ನಿಯಮಗಳನ್ನು, ಜೈಲಿನ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ತನ್ನೊಂದಿಗೆ ಜೈಲಿನ ಆವರಣದ ಎಲ್ಲೆಂದರಲ್ಲಿ ತಿರುಗಾಡಿಸುತ್ತಾ ಶೂಟ್‌ಔಟ್ ನಡೆಯಲು ನೇರ ಕಾರಣನಾದನು. ಆದರೆ ತನ್ನ ಪಾತ್ರವನ್ನು ಮಾಧ್ಯಮಗಳಿಂದ ಮುಚ್ಚಿಡಲು ಯಶಸ್ವಿಯಾಗಿ ವಿಲನ್ ಆದ ಜೋಗಯ್ಯನೇ ಹೀರೋ ಎಂಬಂತೆ ಬಿಂಬಿಸಲ್ಪಟ್ಟ. ಬೇರೆ ಸಿಬ್ಬಂದಿಗಳನ್ನು ಜೊತೆಯಲ್ಲಿ ಇಟ್ಟುಕೊಂಡರೆ ಬೆತ್ತನಗೆರೆ ಸೀನನೊಂದಿಗಿನ ತನ್ನ ವ್ಯವಹಾರ ಹಾಗೂ ಕಮಾಯಿಗಳಿಗೆ ಕುತ್ತಾಗಬಹುದೆಂದು ಯಾರನ್ನೂ ಜೊತೆಗಿಟ್ಟುಕೊಳ್ಳದೆ ತಾನೊಬ್ಬನೇ ಬೆತ್ತನಗೆರೆ ಸೀನನೊಂದಿಗೆ ಇರುತ್ತಿದನು. ಈತ ಮಾಡಿದ ಅಕ್ರಮ ಸೇವೆಗಳಿಗೆ ಪ್ರತಿಫಲವಾಗಿ ಲಕ್ಷಾಂತರ ರೂಪಾಯಿಗಳನ್ನು ಸೀನನಿಂದ ಕಿತ್ತಿದ್ದಾನೆ. ತನ್ನ ಮಗಳ ಮದುವೆಗೂ ಬೆತ್ತನಗೆರೆ ಸೀನನನ್ನೇ ಬಳಸಿಕೊಂಡಿದ್ದಾನೆ. ಕಾರಾಗೃಹದ ಬಂದಿಗಳು ಬೆಳೆಸಿದ ತೆಂಗಿನ ತೋಟದಿಂದ ಸಾವಿರಾರು ತೆಂಗಿನ ಕಾಯಿಗಳನ್ನು ತನ್ನ ಮನೆಗೆ ಕದ್ದೊಯ್ದು ಮದುವೆ ಸಮಾರಂಭಕ್ಕೆ ಬಳಸಿದ್ದಾನೆ. ತೀವ್ರ ಅನಾರೋಗ್ಯದಿಂದ ನರಳುತ್ತಿದ್ದರೂ ಬಂದಿಗಳಿಗೆ ಒಂದು ಎಳನೀರನ್ನೂ ಕೊಡದ ಕ್ರೂರಿ ಈತ. ಬಂದಿಗಳನ್ನು ಸಂದರ್ಶಿಸಲು ಬರುವ ಸಂಬಂಧಿಕರಿಂದಲೂ ಲೂಟಿ ಮಾಡಿ ನಂತರ ಬಂದಿಗಳ ಜೇಬಿಗೆ ಕೈಹಾಕಿ ದುಡ್ಡು ಕಸಿಯುವ ಮನುಷ್ಯ ಈತ. ಇದರಲ್ಲೆಲ್ಲ ಬೇರೆಯವರಿಗೂ ಪಾಲಿದೆ. ಬಂದಿಗಳಿಗೆ ಏನನ್ನೂ ಹೇಳಲು ಬಿಡದ ಹೇಳಿದರೂ ತಾತ್ಸಾರದಿಂದ ಕಾಣುವ ಕುತ್ಸಿತ ಬುದ್ಧಿಯವನು ಈತ. ಮಾಜಿ ಮಂತ್ರಿ, ಹಾಲಿ ಶಾಸಕ ಶ್ರೀರಾಮುಲು ತನ್ನ ಆಪ್ತ ಎಂದು ಬಿಲ್ಡ್‌ಅಪ್ ಕೊಡುತ್ತಾ ತನ್ನ ಬೇಳೆ ಬೇಯಿಸಿಕೊಳ್ಳುವುದನ್ನ ಮಾಡುತ್ತಾನೆ. ಇಂತಹ ವ್ಯಕ್ತಿಗೆ ಸರ್ಕಾರ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಪದಕ ನೀಡಿದ್ದನ್ನು ನೋಡಿದರೆ ಪದಕಗಳ ಬಗ್ಗೆ ವಾಕರಿಕೆ ಬರುತ್ತದೆ.

ಜೈಲಿನ ಗುಡಿ ಕೈಗಾರಿಕೆಗಳ ಉತ್ಪನ್ನಗಳಿಂದ ಲಾಭ, ಜೈಲಿನಲ್ಲಿ ನಡೆಸುತ್ತಿರುವ ಕ್ಯಾಂಟೀನಿನ ಹೆಸರಿನಲ್ಲಿ, ತೋಟದ ಉತ್ಪನ್ನದಲ್ಲಿ, ಅಡುಗೆ ವಸ್ತುಗಳು, ಬಂದಿಗಳಿಗೆ ನೀಡುವ ರೇಷನ್, ಪೆರೋಲ್, ಬಂದಿಗಳು ಮಾಡುವ ಕೆಲಸಗಳಿಗೆ ಕೊಡಬೇಕಾದ ಕೂಲಿಯಲ್ಲಿ ನ್ಯಾಯಾಲಯಗಳಿಗೆ ಹೋಗಬೇಕಾದ ಬಂದಿಗಳಿಗೆ ಊಟಕ್ಕಾಗಿ ನೀಡಬೇಕಾದ ಹಣ ಹೀಗೆ ಎಲ್ಲವನ್ನೂ ಹಗಲು ದರೋಡೆ ಮಾಡಲಾಗುತ್ತಿದೆ. ಕೇವಲ ಕ್ಯಾಂಟೀನ್ ಒಂದರಿಂದಲೇ ದಿನಕ್ಕೆ 2000 ರೂ.ಗಳಿಂದ 3000 ರೂ ವಸೂಲಿ ಮಾಡುತ್ತಾರೆ. ಹಾಗಾಗಿ ಕ್ಯಾಂಟೀನಿನಲ್ಲಿ ಮಾರಾಟ ಮಾಡುವ ವಸ್ತುಗಳನ್ನು ಗರಿಷ್ಠ ಮಾರಾಟ ಬೆಲೆಗಿಂತಲೂ ಹೆಚ್ಚುಪಟ್ಟು ಬೆಲೆ ವಿಧಿಸುತ್ತಾರೆ. ಬಂದಿಗಳಿಗಾಗಿ ಇರುವ ಸೌಲಭ್ಯ ಗಳನ್ನು ಇಂತಹ ದುಷ್ಟ ಕೂಟ ತಮ್ಮ ಲಾಭ ಹಾಗೂ ಕೊಳ್ಳೆಗಾಗಿ ಮೂಲ ಮಾಡಿಕೊಳ್ಳುತ್ತಾರೆ. ಬಂದಿಗಳಿಗೆ ಮಲಗಲು ಜಾಗ ಸಿಗಬೇಕಾದರೆ ನೂರಾರು ರೂಪಾಯಿಗಳಿಂದ ಸಾವಿರಾರು ರೂಪಾಯಿ ಕೊಡಬೇಕಾಗುತ್ತದೆ. ಹಣ ಇಲ್ಲದ ಹೊರಗಿನವರ ಸಂಪರ್ಕವೂ ಇಲ್ಲದವರು ನರಳಿನರಳಿ ಬಸವಳಿಯಬೇಕಾಗುತ್ತದೆ. ಮಹಿಳಾ ಬಂದಿಗಳ ಮೇಲೆ ನಿರ್ಬಂಧ, ದಬ್ಬಾಳಿಕೆಗಳು ನಿರಂತರವಾಗಿ ನಡೆಯುತ್ತಿವೆ. ಈ ಬಾರಿ ಜೈಲಿನಲ್ಲಿ ಹಲವಾರು ಕಾಮಗಾರಿಗಳು ನಡೆದಿವೆ. ಅದರಲ್ಲೆಲ್ಲಾ ಮಾಮೂಲಿ ವಸೂಲಿ ಇದ್ದೇ ಇದೆ. ಸುಣ್ಣ ಬಣ್ಣವನ್ನು ಅಲ್ಲಲ್ಲಿ ತೇಪೆ ಹಚ್ಚಿ ಅದರ ಒಟ್ಟು ಮೊತ್ತದಲ್ಲಿ ಬಹುಪಾಲನ್ನು ಗುಳುಂ ಮಾಡಲಾಗಿದೆ. ನೀರು ಪೂರೈಸಲು ಹತ್ತಾರು ಕಳಪೆ ಗುಣಮಟ್ಟದ ಪೈಪು ಮೋಟಾರುಗಳನ್ನು ಅಳವಡಿಸಿ ಸ್ನಾನಾದಿಗಳಿಂದ ಮಲಿನವಾಗುವ ನೀರನ್ನು ಬಂದಿಗಳ ಬ್ಯಾರಕ್ಕಿನ ಒಳಗೆ ಪೂರೈಸುವ ಕಳಪೆ ಕಾಮಗಾರಿ ನಡೆಸುತ್ತಿದ್ದಾರೆ. ಇದರ ನಿಯಂತ್ರಣವನ್ನು ಅಧೀಕ್ಷಕ ಮಲ್ಲೇಶ ಇಟ್ಟುಕೊಂಡು ನೇರ ಕಳ್ಳ ವ್ಯವಹಾರ ನಡೆಸುತ್ತಿದ್ದಾರೆ.

ಜೈಲಿನ ಮ್ಯಾನುವೆಲ್‌ಗಳಾಗಲಿ ಇನ್ಯಾವುದೇ ಅಗತ್ಯ ಕೈಪಿಡಿಗಳಾಗಲೀ ಬಂದಿಗಳಿಗೆ ಸಿಗುವುದೇ ಇಲ್ಲ. ಗ್ರಂಥಾಲಯದಲ್ಲೂ ಇಡುವುದಿಲ್ಲ. ಜೈಲು ಮ್ಯಾನುವೆಲ್ ಪ್ರತಿ ಬಂದಿಗೂ ಅಧ್ಯಯನಕ್ಕೆ ಸಿಗುವಂತಿರಬೇಕೆಂಬ ನಿಯಮ ಇದ್ದರೂ ಅದೂ ಪುಸ್ತಕದಲ್ಲಿ ಮಾತ್ರ. ಪ್ರತಿ ಜೈಲಿನಲ್ಲಿ ಮಾನವ ಹಕ್ಕು ಆಯೋಗಕ್ಕೆ ಲೋಕಾಯುಕ್ತಕ್ಕೆ, ಜಿಲ್ಲಾ ನ್ಯಾಯಾಧೀಶರಿಗೆ, ಜಿಲ್ಲಾಧಿಕಾರಿಗಳಿಗೆ ನೇರವಾಗಿ ದೂರು ನೀಡಬಹುದಾದ ಸೌಲಭ್ಯ ಇರಬೇಕೆಂದಿದ್ದರೂ ಅದೂ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಇಲ್ಲ. ಇವರೆಲ್ಲರ ವಿಳಾಸಗಳನ್ನು ಪ್ರದರ್ಶಿಸಬೇಕು ಎಂದು ನಿಯಮ ಇದೆಯಾದರೂ ಸೌಲಭ್ಯ ಇಲ್ಲ. ಪ್ರತಿ ಸೋಮವಾರ ಬಂದಿಗಳ ಸಮಸ್ಯೆ ದೂರುಗಳನ್ನು ತಿಳಿದುಕೊಳ್ಳಲೆಂದೇ ಎಲ್ಲಾ ಅಧಿಕಾರಿಗಳ ರೌಂಡ್ಸ್ ಇದ್ದರೂ ಅದು ಒಂದು ಪ್ರಹಸನದಂತೆ ನಡೆಸಲಾಗುತ್ತದೆ. ಬಂದಿಗಳನ್ನೆಲ್ಲಾ ಹೆದರಿಸಿ ಬೆದರಿಕೆ ಹಾಕಿ ಕಿರುಕುಳ ನೀಡಿ ಯಾರು ಏನು ಕೇಳಲಾರದಂತಹ, ಹೇಳಲಾರದಂತಹ ವಾತಾವರಣ ನಿರ್ಮಿಸಿ ಬಿಟ್ಟಿದ್ದಾರೆ. ಒಂದುವೇಳೆ ಯಾರಾದರೂ ಹೇಳಿದರೂ ದಿವ್ಯ ನಿರ್ಲಕ್ಷ್ಯ ಮಾಡುತ್ತಾರೆ. ಕೇಳಿದವರನ್ನು ಗುರಿಯಿಟ್ಟು ಕಿರುಕುಳ ನೀಡುತ್ತಾರೆ.

ಕಾರಾಗೃಹದಲ್ಲಿ ವಾಚನಾಲಯ ಸೌಲಭ್ಯವೇ ಇಲ್ಲ. ಗ್ರಂಥಾಲಯ ಇದ್ದರೂ ಅದರ ಕಟ್ಟಡ ತುಂಬಾ ಚಿಕ್ಕದಾಗಿದ್ದು ಹತ್ತು ಜನ ನಿಲ್ಲಲೂ ಸಾಧ್ಯವಾಗುವುದಿಲ್ಲ. ಇನ್ನೂ ಆರೋಗ್ಯ ಘಟಕ ಮತ್ತು ವೈದ್ಯರ ಕತೆಯಂತೂ ಹೇಳುವುದೇ ಬೇಡ. ಔಷಧಿಗಳು ಆರೈಕೆ ಹೀಗೆ ಎಲ್ಲವೂ ತೋರುಗಾಣಿಕೆಗಾಗಿ ಮಾತ್ರ ಇದೆ. ಸ್ಥಿರ ಮಹಿಳಾ ವೈದ್ಯರೇ ಇಲ್ಲ.

ಮೊನ್ನೆ ಇಲ್ಲಿ ಗಣ ರಾಜ್ಯೋತ್ಸವ ಆಚರಿಸಿಕೊಳ್ಳಲಾಗಿದೆ. ಆದರೆ ಸಂವಿಧಾನದತ್ತವಾಗಿರುವ ಹಕ್ಕುಗಳು, ಮಾನವ ಹಕ್ಕುಗಳ ರಕ್ಷಣೆ ಖಾತ್ರಿ, ಗೌರವಯುತವಾಗಿರುವ ಅವಕಾಶ ಇತ್ಯಾದಿಗಳೆಲ್ಲಾ ಬಂದಿಗಳಿಗೆ ಮರೀಚಿಕೆಯೇ ಆಗಿದೆ. ಬ್ರಿಟಿಷ್ ವಸಾಹತು ಶಾಹಿಯ ವಾರಸುದಾರರು ತಾವೆಂಬಂತೆ ಈ ದುಷ್ಟ ಅಧಿಕಾರಿಗಳ ಕೂಟ ವರ್ತಿಸುತ್ತಿದೆ. ಕರ್ನಾಟಕದ ಮುಕ್ತ ವಿಶ್ವವಿದ್ಯಾಲಯದವರು ಬಂದಿಗಳಿಗೆ ವ್ಯಾಸಂಗಕ್ಕಾಗಿ ಬಂದು ಘಟಕವನ್ನು ತೆರೆದರೂ ವ್ಯಾಸಂಗಕ್ಕೆ ಅಗತ್ಯವಾದ ಪೂರಕ ವಾತವರಣ ನಿರ್ಮಿಸಿಕೊಡುವ ಒಳ್ಳೇ ಮನಸೂ ಇಲ್ಲ ಈ ಅಧಿಕಾರಿಗಳಿಗೆ. ಆದರೆ ಇವರೆಲ್ಲರ ಹೆಸರು ಮಾತ್ರ ತನಗೇ ದಕ್ಕಬೇಕೆಂಬ ಸ್ವಾರ್ಥ ದುರಾಸೆ ಅಧೀಕ್ಷಕ ಮಲ್ಲೇಶ್‌ದು.

ಜೈಲರ್ ಸುರೇಶ್‌ನ ನೀಚತನ

ಜೈಲರ್ ಸುರೇಶ್ ಮಂಗಳೂರು ಜೈಲಿನಲ್ಲಿ ಕಾರ್ಯನಿರ್ವಹಿಸುವಾಗ ಮಹಿಳೆಯರ ವಿಚಾರದಲ್ಲಿ ಕಚ್ಚೆ ಹರುಕತನವೆಸಗಿದ ಆರೋಪ ಇದೆ. ಈತನ ಕಚ್ಚೆ ಹರುಕುತನ ಎಲ್ಲರಿಗೂ ಗೊತ್ತಿರುವ ವಿಚಾರ. ಈತ ಈಗ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಅಡುಗೆ ಮನೆ ಜವಾಬ್ದಾರಿ ಸಿಕ್ಕಿದೆ. ಇದು ಈತನಿಗೆ ಕೊಳ್ಳೆ ಹೊಡೆಯಲು ಒಳ್ಳೆ ಅವಕಾಶವಾಗಿ ಸಾವಿರಾರು ಜನ ಬಂದಿಗಳ ಊಟವನ್ನು ತಾನೇ ದೋಚಿ ವ್ಯಾಪಾರ ಮಾಡುತ್ತಿದ್ದಾನೆ. ಬಂದಿಗಳಿಗೆ ಕಳಪೆ ತಿಂಡಿ ಟೀ ಪೂರೈಸಿ ಹೊಟ್ಟೆ ಹೊರೆಯುತ್ತಾನೆ. ಗುತ್ತಿಗೆದಾರರೊಂದಿಗೆ ಅವ್ಯವಹಾರ ಬೇರೆ. ಹೀಗೆ ಲಕ್ಷಾಂತರ ರೂಪಾಯಿ ಕೊಳ್ಳೆ ಹೊಡೆಯುತ್ತಾ ಬಂದಿಗಳೊಂದಿಗೆ ಒರಟನಾಗಿ ವರ್ತಿಸುತ್ತಾ ದೌರ್ಜನ್ಯ ನಡೆಸುತ್ತಾನೆ. ಬಂದಿಗಳಿಗೆ ಆಟೋಟಗಳಿಗೆ ನಡಿಗೆಗಳಿಗೆ ಅವಕಾಶ ಸಿಗದಂತೆ ಮಾಡುತ್ತಾನೆ. ಮುಖ್ಯ ವಾರ್ಡನ್ ಆಗಿರುವ ಮಹಿಳೆಗೂ ಏಕವಚನ ಪ್ರಯೋಗ ಮಾಡುತ್ತಾ 'ಏಯ್, ಬಾ, ಹೋಗು' ಅಂತ ಸಂಬೋಧನೆ ಮಾಡುವ ಅಸಭ್ಯ ಅನಾಗರಿಕ ವ್ಯಕ್ತಿ ಈತ. ಅದು ಎಲ್ಲಾ ಬಂದಿಗಳ ಎದುರಲ್ಲೇ ಕೊಳಕು ಭಾಷೆಯ ಬೈಗುಳ ಹೇಳುವ ಕೆಟ್ಟ ಅಭ್ಯಾಸ ಬೇರೆ.

ಇಲಾಖೆಯ ಉನ್ನತಾಧಿಕಾರಿಗಳು ಹಲಾಲ್‌ಟೋಪಿಗೆ ಈಗಲಾದರೂ ಪಾಠ ಕಲಿಸಬಾರದ?


ಜಯಸಿಂಹಗೆ ಧೈರ್ಯ ಇಲ್ಲವೇ?

ಹಿಂದಿನ ಮುಖ್ಯ ಅಧೀಕ್ಷಕ ಲಕ್ಷ್ಮೀನಾರಯಣ ಕೆಟ್ಟ ಮನುಷ್ಯ ಆಗಿರಲಿಲ್ಲ. ತನ್ನಿಂದ ಆದಷ್ಟು ಒಳ್ಳೇ ಕೆಲಸ, ಸುಧಾರಣ ಕೆಲಸ ಮಾಡಬೇಕೆಂಬ ಮನಸ್ಸಿದ್ದವರು. ಆದರೆ ಅವರ ಇಂತಹ ಕೆಲಸಗಳಿಗೆ ಅಧೀಕ್ಷಕ ಮಲ್ಲೇಶ್ ಕಲ್ಲು ಹಾಕುತ್ತಲೇ ಇದ್ದ.

ಹೊಸದಾಗಿ ಬಂದಿರುವ ಮುಖ್ಯ ಅಧೀಕ್ಷಕ ಜಯಸಿಂಹರಿಗೆ ಜೈಲು ಬಂದಿಗಳು ಅನುಭವಿಸುವ ಕಿರುಕುಳ ನೋವುಗಳ ಬಗ್ಗೆ ತಮ್ಮದೇ 5 ವರ್ಷಗಳ ಜೈಲುವಾಸದ ಅನುಭವ ಇದ್ದರೂ ಆಡಳಿತ ನಡೆಸಲೂ ಹತೋಟಿ ಹೊಂದಲೂ ಆಗುತ್ತಿಲ್ಲ. ಈ ದುಷ್ಟ ಕೂಟದ ಲಕ್ಷ್ಮಣ ರೇಖೆಯನ್ನು ದಾಟಿ ಕಾರ್ಯನಿರ್ವಹಿಸುವ ಧೈರ್ಯ ಇದ್ದಂತಿಲ್ಲ. ಇತ್ತೀಚೆಗೆ ಜೈಲುಗಳನ್ನು ಸುಧಾರಣಾ ಕೇಂದ್ರಗಳನ್ನಾಗಿ ಮಾರ್ಪಡಿಸಿ ಹೆಸರನ್ನು ಕೂಡ ಹಾಗೇ ಇಡಬೇಕೆಂದು ಸರ್ಕಾರಿ ವಲಯಗಳು ಮಾತನಾಡುತ್ತಿರುವಾಗ, ಜೈಲುಗಳ ಸುಧಾರಣೆ ಬಗ್ಗೆ ಹಲವಾರು ಆಯೋಗಗಳು ವರದಿ ನೀಡಿರುವಾಗ ಬಂದಿಗಳನ್ನು, ಜೈಲುಗಳನ್ನು ಸುಲಿದು ತಿಂದು ಹಗಲು ದರೋಡೆ ನಡೆಸುವ ಇಂತಹ ಅಧಿಕಾರಿಗಳಿದ್ದರೆ ಏನಾಗಬಹುದು. ಜೈಲುಗಳು ಮತ್ತಷ್ಟು ಕ್ರಿಮಿನಲ್‌ಗಳನ್ನು, ಮಾನಸಿಕ ಅಸ್ವಸ್ಥರನ್ನು ಉತ್ಪಾದಿಸುವ ಸಮಾಜ ವಿರೋಧಿ ಕೇಂದ್ರವಾಗಬಹುದು ಅಷ್ಟೇ. ವಾಸ್ತವದಲ್ಲಿ ಈಗ ಅದೇ ಆಗುತ್ತಿರುವುದು. ಇಂತಹ ಅಧಿಕಾರಿಗಳ ಆಟಾಟೋಪಗಳಿಗೆ, ಲೂಟಿ, ಹಗಲು ದರೋಡೆಗಳಿಗೆ ಲಗಾಮು ಹಾಕಿ ತಿದ್ದದೇ ಹೋದರೆ ನಾಳಿನ ದಿನಗಳಲ್ಲಿ ಜೈಲಿನಲ್ಲಿ ಒತ್ತಡಗಳು ಅಧಿಕವಾಗಿ ಬಂದಿಗಳು ದಂಗೆ ಏಳುವ ಸಾಧ್ಯತೆಗಳು ಇವೆ. ಅದರ ಪರಿಣಾಮಗಳ ಹೊಣೆಗಾರಿಕೆಯನ್ನು ಸರ್ಕಾರ ಹಾಗೂ ಕಾರಾಗೃಹ ಇಲಾಖೆ ಹೊರಬೇಕಾಗುತ್ತದೆ. ಈ ಬಗ್ಗೆ ಜನಪರ ಸಂಘಟನೆ ವ್ಯಕ್ತಿಗಳು, ಮಾನವ ಹಕ್ಕು ಕಾರ್ಯಕರ್ತರು ಧ್ವನಿ ಎತ್ತಿ ಜನಾಭಿಪ್ರಾಯ ರೂಪಿಸುವ ಅಗತ್ಯವಿದೆ.

...ಮುಂಗನ ಮಾಣಿಕ್ಯ ದರ್ಶನ

ಅಧಿಕಾರದ ಅಮಲನ್ನು ತಲೆಗೇರಿಸಿಕೊಂಡಿದ್ದ ...ಡಿಯೂರಪ್ಪ ಒಮ್ಮಿಂದೊಮ್ಮೆ ಮುಖ್ಯಮಂತ್ರಿಯ ಕುರ್ಚಿ ...ಂದ ಕೆಳಗಿಳಿದ ಲಾಗಾಯ್ತಿನಿಂದ ಒಂದೇ ಸಮ ಎಲ್ಲವನ್ನು ...ಕೊಂಡವನಂತೆ ವರ್ತಿಸುತ್ತಿದ್ದಾನೆ. ಚಿತ್ತ ಭ್ರಮಣೆಗೆ ...ಗಾದವನಂತೆ ಕಂಡ ಕಂಡ ದೇವರಿಗೆ ಅಡ್ಡ ಬೀಳುವುದು, ...ೋಮ, ಹವನ ನಡೆಸುವುದು, ಹೊತ್ತಿಗೆ ತೆಗೆದು ...ಳಿಕೆಗಳನ್ನು ಕೇಳುವುದು ಸಹಜ ಎನ್ನುವಂತಾಗಿದೆ. ...ಗಾವಿಯ ವೀರಭದ್ರ ದೇವರೆ ಇರಲಿ, ಮಂತ್ರಾಲಯದ ...ಘವೇಂದ್ರನೇ ಆಗಿರಲಿ, ಜಮ್ಮು ರಾಜ್ಯದ ಕಟ್ರಾ ...ಷ್ಣವಿದೇವಿಯಾಗಿರಲಿ ಯಾರಾದರೂ ಸೈ ತನಗೆ ಶ್ರೀರಕ್ಷೆ ...ದಿ ಮತ್ತೆ ಮುಖ್ಯಮಂತ್ರಿ ಕುರ್ಚಿಯ ಮೇಲೆ ಪವಡಿಸಿದರೆ ...ಕು ಎಂದು ದೈನೇಸಿತನದಿಂದ ಬೇಡಿಕೊಳ್ಳುತ್ತಿದ್ದಾನೆ.



ಬುದ್ಧಿಮಾಂದ್ಯ ಮಹಿಳೆ ಮಾಣಿಕ್ಯ


ತೀರಾ ಇತ್ತೀಚೆಗೆ ಯಡ್ಡಿ ಯಾದಗಿರಿ ಜಿಲ್ಲೆಯ ಕಟ್ಟ...ಯ ಹಳ್ಳಿ ಯಾನಾಗುಂದಿಗೆ ಬಂದು ಇಲ್ಲಿನ ಮಾತಾ ...ಣಿಕೇಶ್ವರಿ ದರ್ಶನ ಸಿಕ್ಕಿದ್ದೇ ತನ್ನ ಪೂರ್ವ ಜನ್ಮದ ...ಣ್ಯದ ಫಲ ಎಂದು ಹೇಳಿಕೆ ಕೊಟ್ಟಿದ್ದಾನೆ. ಇಷ್ಟೆ ...ಲ್ಲದೆ ತಾನು ಮತ್ತೆ ಮುಖ್ಯಮಂತ್ರಿಯಾಗುವುದಾಗಿ ಅಮ್ಮ ಖಚಿತಪಡಿಸಿದ್ದಾಳೆ ...ದು ಬಹು ಉಮೇದಿಯಿಂದ ಹೇಳಿಕೊಂಡಿದ್ದಾನೆ. ಕರ್ನಾಟಕ ಪೊಲೀಸ್ ...ಾಖೆಯ ಡಿ.ಜಿ.ಪಿ. ಶಂಕರ ಬಿದರಿ ಎಂಬ ಅಧಿಕಾರಿ ಕೂಡ ತಾನು ...ತುಕೊಳ್ಳುವ ಕುರ್ಚಿಯ ಘನತೆಯನ್ನು ಅಮ್ಮನ ಉಡಿಯಲ್ಲಿ ಹಾಕಿಹೋಗಿದ್ದಾರೆ.

ತಮಾಷೆ ಎಂಥದ್ದೆಂದರೆ ಯಾನಾಗುಂದಿಯ ಬೆಟ್ಟದ ಮೇಲೆ ವಿರಾಜ...ನವಾಗಿ ಪವಡಿಸಿರುವ ಮಾತಾ ಮಾಣಿಕೇಶ್ವರಿ ಅಮ್ಮನ ಕಥೆಯೇ ಒಂದು ...ಂಗತ ನಾಟಕದಂತೆ ಇದೆ. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ...ಲ್ಲಾಬಾದ ಗ್ರಾಮದ ಬುಗ್ಗಮ್ಮ ಆಶಪ್ಪ ದಂಪತಿಗಳ ನಾಲ್ಕನೆಯ ಮಗು ...ದಿನ ಶ್ರೀ ಮಾತಾ ಮಾಣಿಕೇಶ್ವರಿ. ಈ ಮಾಣಿಕಮ್ಮ ತಾಯಿ ಹುಟ್ಟುತ್ತಲೇ ...ವಾಡಗಳನ್ನು ಮಾಡುತ್ತಲೆ ಬಂದವಳು ಎಂದು ಹಲವಾರು ಜನ ಈಗಾಗಲೇ ...ಗಳ ಮೇಲೆ ಕಥೆಗಳನ್ನು ಹೆಣಿಗೆ ಮಾಡಿ ಗೋಬೆಲ್ಸ್ ಮಾತನ್ನು ನಿಜ ...ಾಡಿದ್ದಾರೆ.

ಬೆಂಬತ್ತಿ ಕಾಡುವ ಬಡತನದ ಮನೆಯಲ್ಲಿ ಮಾಣಿಕಮ್ಮ ನಾಲ್ಕನೆಯ ...ಣ್ಣು ಮಗುವಾಗಿ ಹುಟ್ಟಿದಾಗ ಸಹಜವಾಗಿ ಆ ಮನೆಯಲ್ಲಿ ಸಿಗುವ ...ಸ್ಕಾರಕ್ಕೆ ಒಳಗಾದಳು. ಸರಿಯಾದ ಅನ್ನ ಆಹಾರವಿಲ್ಲದೆ ಕೃಶವಾದವಳು. ...ಾರೊಂದಿಗೂ ಮಾತಾಡದ, ಯಾರ ಜೊತೆಗೂ ಕೂಡದ, ತನ್ನಷ್ಟಕ್ಕೆ ತಾನೇ ...ಟಿಯಾಗಿ ಕಾಲ ಕಳೆಯುವ ಹುಡುಗಿ. ಊರಲ್ಲಿನ ಅರಳೀಮರದ ಮೇಲೇರಿ ...ತರೆ ಕೆಳಗೆ ಇಳಿಸುವುದೇ ಕಷ್ಟ ಎನ್ನುವಂತೆ ತನ್ನಷ್ಟಕ್ಕೆ ತಾನೇ ಕುಳಿತು ...ುತ್ತಿದ್ದಳಂತೆ. ತಂದೆ-ತಾಯಿ ಮಾತಾಡಿಸಿದರೆ ಮರ್ಜಿಯಿಂದ ಮಾತಾಡುವಾಕೆ.

...ಯ ನಡವಳಿಕೆ ಕಂಡು ಆತಂಕಗೊಂಡ ಆಕೆಯ ...ಕ್ಷರಸ್ಥ ತಂದೆ-ತಾಯಿ ಆಕೆಯನ್ನು ಸಹಜವಾಗಿಯೇ ...ವರು ದಿಂಡಿರುಗಳ ಹತ್ತಿರ ಕರೆದುಕೊಂಡು ...ೋಗಿದ್ದಾರೆ. ಅವ್ಯಾವೂ ಪರಿಹಾರ ಒದಗಿಸದೆ ...ೋದಾಗ ಹಲವಾರು ಬಾರಿ ಈಕೆಯನ್ನು ದೆವ್ವ ...ಡಿಸುವವರ ಹತ್ತಿರವೂ ಕರೆದುಕೊಂಡು ಹೋಗಿದ್ದರಂತೆ.

ಕೊನೆಗೆ ಮದುವೆಯಾದರೆ ಸರಿಹೋದೀತೆಂದು ...ಕೆಯನ್ನು ಹತ್ತನೆಯ ವರ್ಷದಲ್ಲಿಯೇ ಬಾಲ್ಯವಿವಾಹ ...ರೆ ಮಾಡಿದ್ದಾರೆ. ಇದೂ ಕೂಡ ಸರಿ ಹೋಗದೆ ...ದ್ದಾಗ ಅನಿವಾರ್ಯವಾಗಿ ಮಾಣಿಕಮ್ಮನನ್ನು ...ರುಮಿಠಕಲ್‌ನ ಖಾಸಾಮಠದ 8 ನೇ ...ಾಧಿಕಾರಿಯಾಗಳಾಗಿದ್ದ ಶಾಂತವೀರ ಸ್ವಾಮಿಗಳ ...? ಕರೆದುಕೊಂಡು ಹೋಗಿದ್ದಾರೆ. ಶಾಂತವೀರ ...ಮಿಗಳು ಗಿಡಮೂಲಿಕೆಗಳನ್ನು ಬಲ್ಲವರಾದ್ದರಿಂದ ...ರು ಈಕೆಯನ್ನು ಗುಣಪಡಿಸಬಲ್ಲರು ಎಂದು ತಂದೆ ...ಯಿ ನಂಬಿದ್ದರು. ಸ್ವಾಮಿಗಳು ಸಹ ಮಾಣಿಕಮ್ಮನನ್ನು ...ಮ್ಮ ಔಷಧಿಗಳಿಂದ ಗುಣಮುಖ ಮಾಡಿಸಲು ...ುತ್ನಿಸಿದರು. ಆದರೂ ಮಾಣಿಕಮ್ಮನ ಆರೋಗ್ಯ ...ಧಾರಿಸದೆ ಹೋದಾಗ "ಈಕೆಯನ್ನು ದೇವರೇ ಕಾಪಾಡಬೇಕು. ಇದು ...ವರ ಮಗು" ಮುಂತಾಗಿ ಹೇಳಿದ್ದಾರೆ. ಅಷ್ಟೇ ಅಲ್ಲ, ತಮ್ಮ ಖಾಸಾಮಠದ ...ಲುಗಡೆ ಇರುವ ಗವಿಯಲ್ಲಿ ಮಣಿಕಮ್ಮಳಿಗೆ ಉಳಿದುಕೊಳ್ಳಲು ಸ್ಥಳಾವಕಾಶ ...ಡ ನೀಡಿದರೆಂದು ಹೇಳುತ್ತಾರೆ. ಕೆಲವು ದಿನಗಳ ತರುವಾಯ ಮಾಣಿಕಮ್ಮನಿಗೆ ಖಾವಿಯ ಬಟ್ಟೆಯನ್ನು ಹಾಕಿಸಿ ಸನ್ಯಾಸ ದೀಕ್ಷೆ ನೀಡಿದರೆಂದು ಪ್ರತೀತಿ ಇದೆ.




ಮರದ ಮೇಲೆ ಮಾಣಿಕ್ಯ

ಒಟ್ಟಿನಲ್ಲಿ ಮಾನಸಿಕ ಅಸ್ವಸ್ಥತೆಯ (ಅದೇ ವೇಳೆಗೆ ಯಾರಿಗೂ ಏನನ್ನು ಮಾಡದ), ತನ್ನಷ್ಟಕ್ಕೆ ತಾನೇ ತಾನಾಗಿರುವ ಹುಡುಗಿಗೆ ನಮ್ಮ ಭಾರತೀಯ ಮೌಢ್ಯದ ಮನಸ್ಸುಗಳು ಪಟ್ಟಗಟ್ಟುವಂತೆ ಸನ್ಯಾಸಿನಿಯ ಪಟ್ಟಗಟ್ಟಿದ ಮೇಲೆ ಎಲ್ಲರೂ ಆಕೆಯ ಕಾಲಿಗೆ ಎರಗುವುದು, ತಮ್ಮ ಕಷ್ಟಗಳನ್ನು ಪರಿಹರಿಸೆಂದು ಬೇಡಿಕೊಳ್ಳುವುದು ನಡೆಯುತ್ತ ಬಂತು. ಇಂಥ ಸಂದರ್ಭಕ್ಕೆ ಕಾದು ಕುಳಿತವರಂತೆ ಕೆಲ ಪುಂಡು ಪೋಕರಿಗಳು ಈಕೆಯ ಸುತ್ತ ಹುತ್ತ ನೆರೆದಂತೆ ನೆರೆದೇ ಬಿಟ್ಟರು. ಮಾಣಿಕಮ್ಮನ ದಿವ್ಯ ದೃಷ್ಟಿಯಲ್ಲಿ ಕಾಣದ್ದನ್ನು ಕಂಡಂತೆ ಬಣ್ಣಿಸಿದರು. ಮಾಡದ ಕೆಲಸಗಳನ್ನು ಮಾಡಿದಂತೆ ಹೇಳಿದರು. ಅನ್ನ ಆಹಾರವಿಲ್ಲದೆ ಮಾಣಿಕಮ್ಮ ಇರಬಲ್ಲಳು ಎಂದು ಸುದ್ದಿ ಹಬ್ಬಿಸಿಬಿಟ್ಟರು. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಜನ ಹಿಂಡುಹಿಂಡಾಗಿ ಮಾಣಿಕಮ್ಮಳ ದರ್ಶನಕ್ಕೆ ಬರತೊಡಗಿದರು. ಕಾಯಿ, ಕರ್ಪೂರ, ಊದುಬತ್ತಿ ಲೋಬಾನಗಳ ಭರ್ಜರಿ ವ್ಯಾಪಾರ ಈಕೆಯ ಸುತ್ತ ಮುತ್ತ ಹುಟ್ಟಿಕೊಂಡವು.

ಯಾದಗಿರಿಯ ಕಟ್ಟಕಡೆಯ ಹಾಗೂ ಆಂಧ್ರ ಪ್ರದೇಶದ ಮೊಟ್ಟ ಮೊದಲ ಹಳ್ಳಿಯಾದ ಯಾನಾಗುಂದಿಯ ದಿಬ್ಬ ಎಲ್ಲರೂ ನೋಡನೋಡುತ್ತಿರುವಂತೆ ಆಕರ್ಷಣೆಯ ಕೇಂದ್ರವಾಗಿ ಹೋಯಿತು. ಮೊದಲೇ ನಿರಕ್ಷರ ಕುಕ್ಷಿಗಳ ಹಾಗೂ ತೀರಾ ಭಾವನಾತ್ಮಕ ನೆಲೆಯಲ್ಲಿ ಆಲೋಚಿಸುವ ಆಂಧ್ರದ ಭಕ್ತರು ಪೈಪೋಟಿಗೆ ಬಿದ್ದವರಂತೆ ಯಾನಾಗುಂದಿಗೆ ಅಂಡಲೆಯತೊಡಗಿದರು. ಇತ್ತ ಕರ್ನಾಟಕದವರೂ ಅವರನ್ನೆಲ್ಲ ಗಮನಿಸಿ ನಾವೇನು ಕಡಿಮೆ ನಿಮಗೆ ಎಂಬಂತೆ ಓಡಾಡತೊಡಗಿದರು.

ಎಲ್ಲಿ ಜಾಸ್ತಿ ಜನರು ನೆರೆಯುತ್ತಾರೋ ಅಲ್ಲಿಯೇ ತಮ್ಮ ಠಿಕಾಣಿ ಹೂಡುವ ರಾಜಕಾರಣಿಗಳು ಸಹಜವಾಗಿಯೆ ತಾವೂ ಮಾಣಿಕಮ್ಮಳ ಭಕ್ತರಂತೆ ಪೋಜು ಹೊಡೆದರು. ತಮಗೆ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಇಲ್ಲಿ ಚೆಲ್ಲಿ ಹೋಗಿದ್ದಾರೆ. ಸಹಜವಾಗಿಯೆ ಇದರಿಂದ ಇಲ್ಲಿ ಪುಷ್ಕಳವಾದ ಭೋಜನ ಲಭ್ಯ ಎಂಬುದನ್ನು ಮನಗಂಡ ಐನಾತಿ ಆಸಾಮಿಗಳು ಮಾಣಿಕಮ್ಮನನ್ನು ಬಂಧಿಯಾಗಿರಿಸಿ ತಮ್ಮ ಲಾಭ ಮಾಡಿಕೊಳ್ಳುತ್ತಿದ್ದಾರೆ.



ಗುಲ್ಬರ್ಗಾದ ಗಳಂಗಳಪ್ಪ ಪಾಟೀಲ ಎಂಬ ಐನಾತಿ ಉದ್ಯಮಿ ಕೆಲವು ವರ್ಷಗಳ ಹಿಂದೆ ದಾಸೋಹ ನಡೆಸುತ್ತೇನೆ ಎಂದು ಇಲ್ಲಿ ಠಿಕಾಣಿ ಹೂಡಿದ್ದ. ದರ್ಶನಾಪುರ ಶರಣಬಸ್ಸಪ್ಪಗೌಡ ಎಂಬ ಮಾಜಿ ಮಂತ್ರಿಯ ಚಿಕ್ಕಪ್ಪ (ಕೃ.ಮೇ.ಯೋ. ತುಡುಗು ಗುತ್ತೇದಾರ) ಬಸವರಾಜಪ್ಪಗೌಡನೂ ಇದಕ್ಕೆಲ್ಲ ಸಾತ್ ನೀಡಿದ್ದ. ಅದೇಕೋ ತಮ್ಮ ಕೆಲಸ ಕೈಗೂಡದೆ ಇದ್ದಾಗ ಇಲ್ಲಿಂದ ಮತ್ತೆ ಹಿಂದಿರುಗಿ ಬಂದಿದ್ದಾರೆ. ಆದರೆ ಇವರೆಲ್ಲರನ್ನು ಹೊರಗೆ ಕಳಿಸಿ ಅನುಗಾಲದಿಂದಲೂ ಮಾಣಿಕಮ್ಮನನ್ನು ಸರ್ಪಗಾವಲಿಟ್ಟು ಕಾಯುತ್ತಿರುವವನು ಶಿವಯ್ಯ ಎಂಬ ಆಂಧ್ರದ ಮಾಜಿ ಬ್ಯಾಂಕ್ ನೌಕರ. ಈತ ಮಾಣಿಕಮ್ಮನ ಕಾವಲು ನಾಯಿ. ಆಕೆಯ ಸುತ್ತ ವಜ್ರ ಪಂಜರವನ್ನು ನಿರ್ಮಿಸಿ ಕಾಯುತ್ತಿರುತ್ತಾನೆ.

ಜನರಿಗೆ ನಿತ್ಯ ಮಾಣಿಕಮ್ಮ ಕಾಣಿಸಿಕೊಂಡರೆ ಅದು ವಿಶೇಷ ಅನಿಸುವುದಿಲ್ಲ ಎಂಬುದನ್ನು ಬಹು ಚೆನ್ನಾಗಿಯೇ ಮನಗಂಡಿರುವ ಶಿವಯ್ಯ ಆಕೆಯನ್ನು ಪ್ರತಿ ವರ್ಷ ಶಿವರಾತ್ರಿಯ ದಿನ ಜನರೆಲ್ಲರ ಎದುರಿಗೆ ಕಾಣಿಸಿಕೊಳ್ಳುವಂತೆ ನೋಡಿಕೊಂಡು ಕ್ರೇಜ್ ಹುಟ್ಟಿಸಿದ್ದಾನೆ. ಈಗ ಎಪ್ಪತ್ತೆಂಟು ವರ್ಷದವಳಾಗಿರುವ ಮಾಣಿಕಮ್ಮ ಉರ್ಫ್ ಮಾತಾ ಮಾಣಿಕೇಶ್ವರಿ "ಅನ್ನ ಆಹಾರವಿಲ್ಲದೆಯೆ ಬದುಕಿ ನಮ್ಮ ಕಣ್ಣೆದುರಿಗೆ ಪವಾಡವನ್ನು ಮೆರೆದಿದ್ದಾಳೆ, ಅವಳಿಗೆ ದಿವ್ಯ ದೃಷ್ಟಿ ಇದೆ. ಯಾರೋ ಎಲ್ಲೋ ಕುಳಿತು ಮಾತಾಡಿದ್ದು ತಾಯಿಗೆ ಕೇಳುತ್ತದೆ, ಯಾರ್‍ಯಾರದೋ ಸಂಕಲ್ಪವನ್ನು ತಾಯಿ ಇಲ್ಲಿ ಕುಳಿತಲ್ಲಿಂದಲೇ ಪರಿಹರಿಸುತ್ತಾಳೆ" ಎಂದೆಲ್ಲ ಬೊಂಗುಬಿಟ್ಟು ಬಿಟ್ಟು ಅದೆಲ್ಲ ಈಗ ಇಲ್ಲಿ ಸತ್ಯ ಎಂಬಂತಾಗಿ ಹೋಗಿದೆ. ಸತ್ಯದ ತಲೆಯ ಮೇಲೆ ಏರಿ ಕುಳಿತ ಸುಳ್ಳು ಇಲ್ಲಿ ವಿಜೃಂಭಿಸುತ್ತಿದೆ.

ಬತ್ತಲೆ ಇದ್ದವರ ರಾಜ್ಯದಲ್ಲಿ ಬಟ್ಟೆ ಉಟ್ಟುಕೊಂಡವನೆ ಮೂರ್ಖ ಎನ್ನುವ ಸ್ಥಿತಿ ಇಲ್ಲಿ ನಿಮಗೆ ಕಾಣಸಿಗುತ್ತದೆ. ಅಕ್ಷರಶಃ ಬೆಟ್ಟದ ಕೆಳಗಡೆಯಲ್ಲಿರುವ (ಸಕಲ ವ್ಯವಸ್ಥೆಗಳಿರುವ) ಗುಹೆಯಲ್ಲಿ ಮಾಣಿಕಮ್ಮ ಬಂಧಿಯಾಗಿದ್ದಾಳೆ. ಆಕೆ ಶಿವಯ್ಯನ ಆಜ್ಞೆಗಾಗಿ ಕಾದು ನಿಂತವಳಂತೆ ಇರುತ್ತಾಳೆ ಮಾತ್ರ. ಆಕೆಯ ಅಂತರಂಗ ಹಾಗೂ ಬಹಿರಂಗದ ಗುಹೆಯಲ್ಲಿ ಶಿವಯ್ಯ ಎಂಬ ಐನಾತಿ ಆಸಾಮಿ ಮಾತ್ರ ಪ್ರವೇಶಿಸುತ್ತಾನೆ. ಮಾಣಿಕಮ್ಮನನ್ನು ಹುಡುಕಿಕೊಂಡು ದೂರದೂರದ ಊರುಗಳಿಂದ ಬರುವ ಹೆಸರಾಂತ ರಾಜಕಾರಣಿಗಳನ್ನು ಬೇಕಂತಲೆ ಕಾಯಿಸಿ - ಕಾಯಿಸಿ ಕೊನೆಗೂ ಭೇಟಿಯ ಭಾಗ್ಯ ಕರುಣಿಸದೆ ಕ್ರೇಜ್ ಹುಟ್ಟಿಸುತ್ತಾನೆ.

ತೀರಾ ಇತ್ತೀಚಿಗೆ ಯಡ್ಡಿ ಬೆಳ್ಳಂಬೆಳಗ್ಗೆ ಮುಂಜಾನೆಯ ಏಳು ಗಂಟೆಗೆ ಕಾದು ಕುಳಿತರೂ ಈಕೆಯ ದರ್ಶನ ಭಾಗ್ಯ ಲಭಿಸಿದ್ದು ಸುದೀರ್ಘ ನಾಲ್ಕು ಗಂಟೆಗಳ ತರುವಾಯ. ಆಗಲೂ ಮಾಣಿಕಮ್ಮ ಯಡ್ಡಿಗೆ ಹೇಳಿದ್ದರಲ್ಲಿ ಏನೂ ವಿಶೇಷವಿರಲಿಲ್ಲ. "ನಾನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಂದಿದ್ದೇನೆ ಮಾತಾಜಿ. ಮತ್ತೆ ನಾನು ರಾಜ್ಯದ ಮುಖ್ಯ ಮಂತ್ರಿ ಆಗಬೇಕು. ಆಶೀರ್ವಾದ ಮಾಡಿ" ಎಂದು ಯಡ್ಡಿ ಎರಡೆರಡುಬಾರಿ ಗೋಗರೆದರು. ಇದಕ್ಕೆ ಸಹಜವಾಗಿ ಎಲ್ಲರೂ ಹೇಳುವಂತೆ: "ಸದ್ಯಕ್ಕೆ ರಾಜಕೀಯ ಧರ್ಮ ಕೆಟ್ಟಿದೆ (ಅದನ್ನು ಹಾಳುಗೆಡವಿದವರು ತನ್ನ ಎದುರೇ ನಿಂತಿದ್ದರೂ ಕ್ಯಾಕರಿಸಿ ಉಗುಳದೆ?). ಕೆಟ್ಟ ಬುದ್ಧಿಯನ್ನು ಬಿಡಬೇಕು. (ಈ ಬುದ್ಧಿಯನ್ನು ಬಿಟ್ಟರೆ ರಾಜಕೀಯ ಮಾಡುವುದು ಹೇಗೆ?) ದೇವರು ಎಲ್ಲವನ್ನೂ ಕೊಡುತ್ತಾನೆ. ನೀನು ಸಿ.ಎಂ. ಆಗ್ತೀಯಾ. ಇನ್ನೂ ಎತ್ತರಕ್ಕೆ ಹೋಗ್ತೀಯಾ. ದೇವರನ್ನು ಬೇಡಿಕೋ. ದೇವರೇ ಜನರನ್ನು ಬದಲಿಸುವ ಶಕ್ತಿ ಹೊಂದಿದ್ದಾನೆ. ಆದರೆ ಎತ್ತರಕ್ಕೆ ಏರಿದ ಮೇಲೆ ಪ್ರಾಣಿ ಹಿಂಸೆ ತಡೆಯಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು" ಎಂದು ಹೇಳಿದಳು.



ತರುವಾಯ ಯಡ್ಡಿಗೆ ಖುಷಿಯಾಗಿ ಮೈ ಮೇಲೆ ದೇವರು ಬಂದಂತೆ "ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದಿದ್ದು ನಾನೇ ಅಮ್ಮ" ಎಂದು ಒಂದೇ ಸಮ ಅವಲತ್ತುಕೊಂಡರು. ಆಗ "ಹಾಗಾದರೆ ಒಳ್ಳೆಯದು. ಮುಂದೆಯೂ ಅಹಿಂಸೆಯನ್ನು ಪಾಲಿಸಿಕೊಂಡು ಹೋಗ ಬೇಕು. ಪ್ರಾಣಿಗಳ ಹಿಂಸೆ ತಡೆಯಲು ಕಟ್ಟು ನಿಟ್ಟಿನ ಕ್ರಮಕೈಗೊಳ್ಳಲು ಪೊಲೀಸರಿಗೆ ಸೂಚಿಸಬೇಕು" ಎಂದು ಹೇಳಿದ ಮೇಲೆ ಯಡ್ಡಿಯ ಕೈ ಕಾಲುಗಳು ನೆಲದ ಮೇಲೆ ನಿಲ್ಲಲೇ ಇಲ್ಲ.

"ಅತಿ ವಿರಳವಾದ ಮಾತಾ ಮಾಣಿಕೇಶ್ವರಿ ಅಮ್ಮನವರ ದರ್ಶನ ಸಿಕ್ಕದ್ದೇ ನನ್ನ ಪುಣ್ಯ ವಿಶೇಷ" ಎಂದು ಯಡ್ಡಿ ಮತ್ತೆ ಸಿ.ಎಂ. ಕುರ್ಚಿಯ ಕನಸಿನಲ್ಲಿ ಮುಳುಗಿ ಒಳಗೊಳಗೆ ತಿರುಕನಂತೆ ಪುಳಕಗೊಂಡದ್ದು ಗುರುತರಿಸುತ್ತಿತ್ತು.

• ವಿಶ್ವಾರಾಧ್ಯ ಸತ್ಯಂಪೇಟೆ

ಮದ್ಯ ಮಾಂಸಗಳನ್ನು ಮನುಷ್ಯ ಮುಟ್ಟಬಾರದು; ಅದು ಪಾಪ!?

ವಿಶೇಷ ಓದಿನ ಬಲ ಇಲ್ಲದ ಹಾಗೂ ಜನಸಂಪರ್ಕವೇ ಹೊಂದಿಲ್ಲದ ಮಾತಾ ಮಾಣಿಕೇಶ್ವರಿ ಬಹುವಾಗಿ ವಾಸಿಸುವುದು ಗುಡ್ಡದ ಮೇಲುಗಡೆ ಆಕೆಗಾಗಿಯೇ ನಿರ್ಮಿಸಿರುವ ಗುಹೆಯಲ್ಲಿ. ಈ ಗುಹೆಯತ್ತ ಶಿವಯ್ಯ ಎಂಬ ಆಂಧ್ರದ ವ್ಯಕ್ತಿಯೊಬ್ಬನನ್ನು ಹೊರತುಪಡಿಸಿ ಇನ್ನಾರೂ ಸುಳಿಯುವುದು ಸಾಧ್ಯವೇ ಇಲ್ಲ. ಶಿವರಾತ್ರಿಯ ದಿನ ಮಾತ್ರ ಜನರ ಎದುರಿಗೆ ಕಾಣಿಸಿಕೊಳ್ಳುವ ಅಮ್ಮ (?) ಮಾತಾಡಿದ್ದು ಅಂತಹ ಉದ್ಬೋದಕ ಎನ್ನುವ ಮಾತುಗಳಾಗಿರುವುದಿಲ್ಲ. ಅವೆಲ್ಲ ಸಹಜ ಮಾತುಗಳಂತೆ ಇರುತ್ತವೆ. ಕೆಲವು ಸಲ ತೆಲುಗಿನಲ್ಲಿ, ಇನ್ನು ಹಲವು ಸಲ ಕನ್ನಡದಲ್ಲಿ ಮಾತಾಡುತ್ತಾಳೆ. ಅಂತಹ ಹಲವು ಮಾತುಗಳನ್ನು ಇಲ್ಲಿ ನೀಡಿದ್ದೇವೆ. ಇದನ್ನು ಓದಿ ಆಕೆಯ ಜ್ಞಾನ ಎಂತಹದ್ದು ಎಂಬುದು ಪತ್ರಿಕೆಯ ಜಾಣ ಓದುಗರಾದ ನೀವೇ ನಿರ್ಧರಿಸಿ:

ಅಷ್ಟದಿಕ್ಪಾಲಕರು ಈ ಭೂಮಿಯನ್ನು ಹೊತ್ತುಕೊಂಡು ಕುಳಿತಿದ್ದಾರೆ. ಅವರಿಗೆ ನೀವೆಲ್ಲ ಕೃತಜ್ಞರಾಗಿ ಬದುಕಬೇಕು. ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ಜನರು ನಡೆಯುತ್ತಿದ್ದಾರೆ. ಇದು ಒಳ್ಳೆಯದಲ್ಲ. ನಮ್ಮ ಭಾರತದಂತಹ ಒಳ್ಳೆಯ ದೇಶ ಎಲ್ಲಿಯೂ ಇಲ್ಲ. ನೀವೆಲ್ಲ ಸಾಧು ಸತ್ಪುರುಷರಿಗೆ ದಾನ-ಧರ್ಮವನ್ನು ಮಾಡಬೇಕು. ಸಾಧು ಸನ್ಯಾಸಿಯಾದವನಿಗೆ ಯಾವುದೇ ಕುಲಗೋತ್ರಗಳು ಇಲ್ಲ. ಎಲ್ಲರೂ ದೇವರ ಮಕ್ಕಳೆ. ಅಹಿಂಸೆಯೆ ನಮ್ಮ ಧರ್ಮವಾಗಬೇಕು. ಯಾವುದೇ ಪ್ರಾಣಿ - ಪಕ್ಷಿಗಳನ್ನು ಕೊಂದು ತಿನ್ನಬಾರದು. ಇದು ದೇವರಿಗೆ ಇಷ್ಟವಾಗುವುದಿಲ್ಲ. ಮದ್ಯ ಮಾಂಸಗಳನ್ನು ಮನುಷ್ಯ ಮುಟ್ಟಬಾರದು. ಅದೆಲ್ಲ ಪಾಪ!

ಸಿಟ್ಟು ಬಿಡು. ತಾಳ್ಮೆಯಿಂದ ಇರು. ಒಳ್ಳೆಯ ಸಂಸ್ಕಾರ ಪಡಿ. ನಮ್ಮದೆಂದು ಕಾಣುವ ಈ ದೇಹ - ಕೀರ್ತಿ- ಹಣ ನಮ್ಮದಲ್ಲ. ಸತ್ತ ಮೇಲೆ ಬರುವುದು ಒಳ್ಳೆಯದು ಮಾತ್ರ. ಇಂದ್ರಿಯಗಳ ಮೇಲೆ ನಿನ್ನ ನಿಗ್ರಹ ಇರಲಿ. ಇದೇ ತಪಸ್ಸು. ಅಸತ್ಯ- ಅಧರ್ಮ- ಮೋಸ ಒಳ್ಳೆಯದಲ್ಲ. ಶಿವನ ಧ್ಯಾನ ಮಾಡು ನಿನಗೆ ಒಳ್ಳೆಯದಾಗುತ್ತದೆ.

– 2010 ರ ಶಿವರಾತ್ರಿಯಂದು ಮಾಣಿಕೇಶ್ವರಿ ಮಾಡಿದ ಆಶೀರ್ವಚನ


ನಮ್ಮ ಮೂರ್ಖತನವಷ್ಟೆ!

ಕಂಪ್ಯೂಟರ್ ಯುಗದ ಈ ದಿನಮಾನಗಳಲ್ಲಿಯೂ ಜನರು ಇನ್ನೂ ಮೌಢ್ಯದ ಜಿಡ್ಡಿನಿಂದ ಹೊರಬಂದಿಲ್ಲ. ದೇವರು - ...ಧರ್ಮಗಳು ಅವರನ್ನು ಕ್ಷಣಕ್ಷಣವೂ ತಿಕ್ಕಿ ಮುಕ್ಕಿ ಕಾಡುತ್ತವೆ. ಯಾರೊಂದಿಗೂ ಮಾತಾಡದವನು, ಸುಮ್ಮನೆ ಕುಳಿತಲ್ಲಿಯೇ ...ಕುಳಿತವನು, ತನ್ನ ಅನಾರೋಗ್ಯಕ್ಕಾಗಿ ಊಟವನ್ನೇ ತ್ಯಜಿಸಿದವನು ಈ ದೇಶದಲ್ಲಿ ಬಹುದೊಡ್ಡ ಸಾಧು-ಸಂತನಾಗಿ ಮೆರೆದ ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆಯೇ ಇವೆ. ಇವುಗಳಲ್ಲಿ ಈ ಮಾಣಿಕಮ್ಮಳೂ ಒಬ್ಬಳು ಅಷ್ಟೆ! ಈ ಜಗತ್ತಿಗೆ ಮೊಟ್ಟಮೊದಲು ...ವಿಚಾರದ ದೀವಿಗೆಯನ್ನು ಹಚ್ಚಿದ ಬುದ್ಧ ಸಹ ಮೊದಮೊದಲು ದೇವರನ್ನು ಹುಡುಕಿದ್ದು ತನ್ನ ದೇಹವನ್ನು ದಂಡಿಸುವ ಮೂಲಕ. ಆದರೆ ಆ ದೇವರು ತನ್ನ ದೇಹ ದಂಡನೆಯಲ್ಲಿ ಇಲ್ಲ ಎಂಬುದನ್ನು ಬಹು ಬೇಗನೆ ಆತ ಕಂಡುಕೊಂಡ. ಗಾಂಧೀಜಿಯೂ ಸಹ ತಾನು ...ಹುಡುಕಿರುವವರೆಗೂ ಯಾವುದೇ ದೇವಸ್ಥಾನಗಳನ್ನು ಅರಸಿಕೊಂಡು ಹೋಗಲಿಲ್ಲ. ಜನಸಾಗರದಲ್ಲಿಯೇ ತನ್ನ ದೇವರನ್ನು ಹುಡುಕಿದರು. ಬಸವಣ್ಣನವರಂತೂ ಆ ದೇವಸ್ಥಾನಗಳನ್ನೆ ಪಲ್ಲಟಗೊಳಿಸಿ 'ಉಳ್ಳವರು ಶಿವಾಲಯವ ಮಾಡುವರು' ಎಂದು ಹೇಳಿಬಿಟ್ಟರು. ತೀರಾ ಇತ್ತೀಚಿನ ಕುವೆಂಪು ಅವರು ಸಹ 'ಸತ್ತ ಕಲುಗಳ ಮುಂದೆ ಅತ್ತು ಕರೆದುದು ಸಾಕು' ಎಂದು ಒಂದೇ ಸಮ ಹೇಳಿದರು. ...ಕರ್ನಾಟಕದ ಮತ್ತೊಬ್ಬ ರಾಷ್ಟ್ರಕವಿ ಜಿ.ಎಸ್.ಎಸ್. ಅವರಂತೂ 'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ. ...ಇಲ್ಲೇ ಇರುವ ಸ್ನೇಹ ಪ್ರೀತಿಗಳ ಕಾಣದಾದೆನು ನಮ್ಮೊಳಗೆ' ಎಂದು ಎದೆ ತುಂಬಿ ಹಾಡಿದರು. ಆದರೆ ಇದೆಲ್ಲವನ್ನು ಓದಿ ಕೇಳಿಯೂ ...ಕರ್ನಾಟಕದ ಬಹುತೇಕ ಜನ ಮತ್ತೆ ಮತ್ತೆ ಮೌಢ್ಯದ ಕೂಪಕ್ಕೆ ಹೋಗಿಬೀಳುವುದು ಯಡ್ಡಿಯಂತಹ ದಡ್ಡ ರಾಜಕಾರಣಿಗಳನ್ನು ...ದೊಡ್ಡವರು ಎಂದು ತಿಳಿದುಕೊಂಡಿದ್ದರಿಂದ!? ಯಡ್ಡಿ ಅಥವಾ ಇಂಥವರು ಏರಿದ ರಾಜಕೀಯ ಕುರ್ಚಿ ದೊಡ್ಡದಾಗಿರಬಹುದು. ಆದರೆ ಅವರಿಗೆ ಅದೇ ಕುರ್ಚಿಯ ಎತ್ತರಕ್ಕೆ ಇರುವ ಬೌದ್ಧಿಕ ಶ್ರೀಮಂತಿಕೆ ಇದೆ ಎಂದು ತಿಳಿದುಕೊಳ್ಳುವುದು ನಮ್ಮ ಆಗರ ಮೂರ್ಖತನವಷ್ಟೆ ...?

ಚಿತ್ರದುರ್ಗ: ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಎಂಬ ಪುಂಡರ ನಾಯಕ

ಪರಮ ಖತರ್‌ನಾಕ್ ಗಿರಾಕಿಯಾದ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ವಿರುದ್ಧ ಆಹಾರ ಇಲಾಖೆಯ ನಿರೀಕ್ಷಕ ತಿಪ್ಪೇಸ್ವಾಮಿ ಎಂಬುವವರು ಪ್ರಾಣ ಬೆದರಿಕೆಯ ಕೇಸನ್ನು ದಾಖಲಿಸುವುದರೊಂದಿಗೆ ಈತನ ಸೋಲಿನ ಹಾದಿಗೆ ಮುನ್ನುಡಿ ಬರೆದಿದ್ದಾರೆ. ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಸರ್ಕಾರಿ ಹುದ್ದೆಗೂ ಸಲ್ಲ, ರಾಜಕೀಯಕ್ಕೂ ಸಲ್ಲ ಎಂಬುದನ್ನು ತನ್ನ ನಡೆನುಡಿಗಳಲ್ಲಿ ಸಾಬೀತುಮಾಡಿದ್ದಾನೆ. ತನ್ನ ಬೆಳವಣಿಗೆಯುದ್ದಕ್ಕೂ ನೆಗೆಟಿವ್ ಟ್ರ್ಯಾಕನ್ನೇ ಹೊಂದಿರುವ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಯನ್ನು ಕಾಂಗ್ರೆಸ್ ಅದ್ಯಾವ ಘನಕಾರಣಗಳಿಗಾಗಿ ಸಹಿಸಿಕೊಂಡಿದೆ ಎಂಬುದೇ ಅಚ್ಚರಿಯ ಸಂಗತಿ.

• ಎನ್.ಮೂರ್ತಿ



ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಚಿತ್ರದುರ್ಗ ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕಂ ಉಪನ್ಯಾಸಕ, ಕೆಪಿಸಿಸಿ ಸದಸ್ಯ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಎಂಬ ಪುಂಡರ ನಾಯಕ ಸ್ಕ್ರ್ಯಾಪ್‌ಲಿಸ್ಟ್‌ಗೆ ಸೇರುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ.

ಪರಮ ಖತರ್‌ನಾಕ್ ಗಿರಾಕಿಯಾದ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ವಿರುದ್ಧ ಆಹಾರ ಇಲಾಖೆಯ ನಿರೀಕ್ಷಕ ತಿಪ್ಪೇಸ್ವಾಮಿ ಎಂಬುವವರು ಪ್ರಾಣ ಬೆದರಿಕೆಯ ಕೇಸನ್ನು ದಾಖಲಿಸುವುದರೊಂದಿಗೆ ಈತನ ಸೋಲಿನ ಹಾದಿಗೆ ಮುನ್ನುಡಿ ಬರೆದಿದ್ದಾರೆ.

ಕೇಸು ದಾಖಲಾದ ನಂತರ ಕಂಗಾಲಾಗಿರುವ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಕೇಸನ್ನು ವಾಪಸು ತೆಗೆಸಿ ಮರ್ಯಾದೆ ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಗಳನ್ನು ಮಾಡಿದ್ದಾನೆ. ಆದರೆ ಈತನ ಉಪಟಳದಿಂದ ರೋಸಿಹೋಗಿದ್ದ ಆಹಾರ ನಿರೀಕ್ಷಕ ತಿಪ್ಪೇಸ್ವಾಮಿ ಮಾತ್ರ ಈತನ ಪರೋಕ್ಷ ಬೆದರಿಕೆ-ಪ್ರಭಾವಿಗಳ ಒತ್ತಡ ಯಾವುದಕ್ಕೂ ಸೊಪ್ಪು ಹಾಕಿಲ್ಲ, ಕೈಲಾಗದವ ಮೈಪರಚಿಕೊಂಡ ಎಂಬಂತೆ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಈ ಅಧಿಕಾರಿಯ ವಿರುದ್ಧ ಬೇರೆಯವರಿಂದ ಪ್ರತಿದೂರು ದಾಖಲಿಸಿ, ಪ್ರಕರಣವನ್ನು ದಿಕ್ಕು ತಪ್ಪಿಸುವ ಪ್ಲಾನ್ ಮಾಡಿದ್ದಾನೆ.

ತನ್ನ ಲಾಭಕ್ಕಾಗಿ ಅಧಿಕಾರಿಗಳಿಗೆ ಕಿರುಕುಳ ನೀಡುವುದನ್ನೇ ಕಾಯಕವನ್ನಾಗಿಸಿಕೊಂಡಿದ್ದ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಈ ಹಿಂದೆ ಎಸ್‌ಸಿ/ಎಸ್‌ಟಿ ನಿಗಮದ ಅಧಿಕಾರಿ, ನಿರ್ಮಿತಿ ಕೇಂದ್ರ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವಿರುದ್ಧ ಮಸಲತ್ತು ನಡೆಸಿ ಠಾಣೆಯ ಮೆಟ್ಟಿಲು ಏರಿದ್ದ, ಕೈಕಾಲು ಹಿಡಿದು ಅದೇಗೋ ಆ ಪ್ರಕರಣಗಳಿಂದ ಬಚಾವಾದ.


ಈ ಪ್ರಕರಣ ಇನ್ನು ಏನೇನು ತಿರುವು ಪಡೆದುಕೊಳ್ಳಲಿವೆ ಎಂಬುದು ಕುತೂಹಲಕರವಾಗಿದ್ದರೂ ತಾನು 'ಮಹಾನ್ ನಾಯಕ' ಎಂಬ ಭ್ರಮೆಯಲ್ಲಿರುವ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಗೆ ಮಾತ್ರ ನುಂಗಲಾರದ ತುತ್ತಾಗಿದೆ. ಈ ಬೆಳವಣಿಗೆಯಿಂದ ಈತನ ಪೀಡಕ ಇತಿಹಾಸಬಲ್ಲ ಸರ್ಕಾರಿ ಅಧಿಕಾರಿಗಳಂತೂ ನಿರುಮ್ಮಳವಾಗಿದ್ದಾರೆ.

ಈ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ 'ನಾಯಕ'ನಾಗಿ ಬೆಳೆದ ಪರಿಯೇ ಒಂದು ಸೋಜಿಗ. ಜೆ.ಜೆ. ಹಟ್ಟಿಯವನಾದ ಈತ ಹಾದಿ-ಬೀದಿಗಳಲ್ಲಿ ಗೊತ್ತುಗುರಿಯಿಲ್ಲದೆ ಅಂಡಲೆಯುತ್ತಿದ್ದ, ಎಸ್.ಸಿ/ಎಸ್.ಟಿ. ನಿಗಮದಿಂದ ಸಾಲ ಪಡೆದು ಆಟೋ ಓಡಿಸುತ್ತಿದ್ದ, ಪುಸ್ತಕಗಳೆಂದರೆ ಅಲರ್ಜಿಪಡುವ ಈತ ಪದವಿ, ಸ್ನಾತಕೋತ್ತರ ಪದವಿ, ಕಾನೂನು ಪದವಿ, ಜೊತೆಗೊಂದು 'ಡಾಕ್ಟರೇಟು!' ಪದವಿ ಪಡೆದುದನ್ನು ನೋಡಿ ದುರ್ಗದ ಜನರೆಲ್ಲ ವಿಶ್ವದ ಅದ್ಭುತಗಳ ಬಗ್ಗೆ ಪಡುವಷ್ಟು ಅಚ್ಚರಿಯನ್ನೇ ವ್ಯಕ್ತಪಡಿಸಿದರು.

ಸರಸ್ವತಿ ಲಾ ಕಾಲೇಜಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡ ತಿಪ್ಪೇಸ್ವಾಮಿ ಪುಂಡು ಸ್ವಭಾವದ ಹುಡುಗರನ್ನು ಗುಂಪು ಕಟ್ಟಿಕೊಂಡು ಅಲೆಯುವ ಕಾಯಕವನ್ನೇ ಮುಂದುವರಿಸಿದ. ಇದೇ ಕಾರಣಕ್ಕೆ ಸಾಕಷ್ಟು ಕುಖ್ಯಾತಿಯನ್ನು ಪಡೆದು, ಅದನ್ನೇ ಎನ್‌ಕ್ಯಾಶ್ ಮಾಡಿಕೊಂಡು ತಾನೊಬ್ಬ ಮಹಾನ್ ಲೀಡರ್ ಎಂಬಂತೆ ಪೋಜು ಕೊಡಲಾರಂಭಿಸಿದ.

ಈತನ ದಾಂಧಲೆ ಪ್ರವೃತ್ತಿಯ ನಡವಳಿಕೆಗಳಿಂದ ಲಾಭ ಪಡೆದ ಕೆಲ ಕಾಂಗ್ರೆಸ್ ನಾಯಕರು ಈತನನ್ನು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠಾಪಿಸಿದರು. ತಕ್ಷಣವೇ ವರಸೆ ಬದಲಾಯಿಸಿದ ತಿಪ್ಪೇಸ್ವಾಮಿ ಹಿರಿಯ ಕಾಂಗ್ರೆಸ್ ನಾಯಕರುಗಳನ್ನೇ ಏಕವಚನದಲ್ಲಿ ಮಾತನಾಡಿಸಿ ಶೇಪು ತೆಗೆಯುವಷ್ಟು ಉದ್ಧಟತನ ಪ್ರದರ್ಶಿಸಲಾರಂಭಿಸಿದ. ಈತನನ್ನು ಸಹಿಸಿಕೊಳ್ಳಲೂ ಆಗದೆ ದೂರವಿಡಲೂ ಆಗದೆ ಜಿಲ್ಲಾ ಕಾಂಗ್ರೆಸ್ ಮುಖಂಡರು ಸಂದಿಗ್ಧದಲ್ಲಿ ಸಿಲುಕುತ್ತಿದ್ದರು.

ವಕೀಲ, ಯುವ ಕಾಂಗ್ರೆಸ್ ಮುಖಂಡ ಶಿವು ಯಾದವ್, ಬಿ.ಟಿ. ಜಗದೀಶ್ ಮುಂತಾದವರು ಪ್ರತಿಭಟನೆ-ಹೋರಾಟಗಳನ್ನು ಸಂಘಟಿಸಿದರೆ ತಿಪ್ಪೇಸ್ವಾಮಿ ಉತ್ಸವಮೂರ್ತಿಯಂತೆ ಭಾಗವಹಿಸಿ ಪೋಜು ಕೊಡುತ್ತಿದ್ದ. ಈತ ಕಾಂಗ್ರೆಸ್ ಪಕ್ಷದ ಬ್ಯಾನರನ್ನು ತನ್ನ ದಂಧೆಗಳಿಗೆ ಹೇಗೆಬೇಕೋ ಹಾಗೆ ಬಳಸಿಕೊಂಡನೆ ವಿನಃ ನಿಜವಾದ ಕಾಂಗ್ರೆಸ್ಸಿಗನಾಗಲೇ ಇಲ್ಲ, ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಎದುರಾಳಿ ಸ್ಪರ್ಧಿಗಳ ಜೊತೆ ಶಾಮೀಲಾಗಿರುತ್ತಿದ್ದ, ಕಾಂಗ್ರೆಸ್ ಪಕ್ಷಕ್ಕಾಗಿ ಏನನ್ನೂ ಕಿಸಿಯಲಿಲ್ಲ, ಚುನಾವಣೆಗಳ ವಿಷಯದಲ್ಲಿ ಈತನನ್ನು ಬುಕ್‌ಕೇಸ್ ಎಂದೇ ಗುರುತಿಸುತ್ತಿದ್ದರು.



ತಿಪ್ಪೇಸ್ವಾಮಿ ನಿವೃತ್ತಿಗೆ ಶಿಫಾರಸು

ಈತ ಹರಸಾಹಸಪಟ್ಟರೂ ಜಿಲ್ಲಾ ಪಂಚಾಯ್ತಿ, ನಗರಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ಟಿಕೆಟ್ ಗಿಟ್ಟಿಸಿಕೊಳ್ಳಲು ಆಗಿರಲಿಲ್ಲ, ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೊಳಲ್ಕೆರೆ ಮೀಸಲು ವಿಧಾನಸಭಾ ಕ್ಷೇತ್ರದಿಂದ ಈತನಿಗೆ ಟಿಕೆಟ್ ಘೋಷಣೆಯಾಯಿತೋ ಆಗ ಈತನ ನಸೀಬೆ ಬದಲಾಯಿತು. ನಂತರ ಟಿಕೆಟ್ ಮಾಜಿ ಶಾಸಕ ಎಚ್. ಆಂಜನೇಯರ ಪಾಲಾಗಿ ಈತ ಕಡೆಗಣಿಸಲ್ಪಟ್ಟ.

ಹೊಳಲ್ಕೆರೆಯಲ್ಲಿ ತನಗೆ ಟಿಕೆಟ್ ಒಮ್ಮೆ ಅನೌನ್ಸ್ ಆಗಿದ್ದನ್ನೇ ಬಂಡವಾಳ ಮಾಡಿಕೊಂಡು ಮತ್ತೊಂದಿಷ್ಟು ನಕರಾಗಳನ್ನು ಮುಂದುವರಿಸಿದ. ಅದೇ ತಾನೇ ರಾಹುಲ್ ಗಾಂಧಿ ಹವಾ ಶುರುವಾಗಿತ್ತಲ್ಲ; ನನಗೆ ರಾಹುಲ್ ಗಾಂಧಿ ತುಂಬಾ ಕ್ಲೋಜು. ಕೃಷ್ಣ ಭೈರೇಗೌಡ ತನ್ನ ಜೇಬಲ್ಲೇ ಇದ್ದಾನೆ. ದಿನೇಶ್ ಗುಂಡೂರಾವ್ ಫೋನ್ ಮಾಡ್ತಾನೆ ಇರ್ತಾರೆ.... ಹೀಗೆ ಮನಸೋ ಇಚ್ಛೆ ರೈಲುಬಿಡುತ್ತಿದ್ದ. 'ನೋಡ್ತಾ ಇರಿ. ಎಂ.ಪಿ. ಟಿಕೆಟ್ ತರ್ತೀನಿ' ಅಂತಾ ಹೇಳಿಕೊಂಡು ತಿರುಗಾಡುತ್ತಿದ್ದ.

ಈ ನಡುವೆ ತನಗೆ ಅಡ್ಡದಾರಿಯಲ್ಲಿ ದೊರೆತ ಡಾಕ್ಟರೇಟ್ ಹಾಗೂ ಸುಳ್ಳು ಸಾಧನೆಗಳ ಪ್ರಮಾಣಪತ್ರಗಳನ್ನು ಮುಂದುಮಾಡಿ ಕೋಲಾರದ ಸಂಸದ ಈಗಿನ ರೈಲ್ವೇ ಮಂತ್ರಿ ಕೆ.ಎಚ್. ಮುನಿಯಪ್ಪನವರ ಬಳಿ ತಾನು ಮಹಾನ್ ವಿದ್ವಾಂಸ, ನನ್ನ ಸಹೋದರರೆಲ್ಲ ಕ್ಲಾಸ್‌ಒನ್ ಅಧಿಕಾರಿಗಳು, ಎಡಗೈ ಸಮುದಾಯದಲ್ಲಿ ಜಿಲ್ಲೆಯಲ್ಲಿ ತಾನೊಬ್ಬನೇ ಪ್ರಭಾವಿ ಎಂದೆಲ್ಲಾ ತಿದಿಯೊತ್ತಿ ಟಿಕೆಟ್ ಕೊಡುವಂತೆ ದುಂಬಾಲು ಬಿದ್ದ.

ಹೀಗಾಗಿ ಯಾವ್ಯಾವುದೋ ಮಾನದಂಡಗಳಲ್ಲಿ ನಿಷ್ಠಾವಂತ ಕಾರ್ಯಕರ್ತನೂ ಅಲ್ಲದ, ಸಮರ್ಥ ಸಂಘಟಕನೂ ಅಲ್ಲದ, ಯುವ ಜನಾಂಗಕ್ಕೆ ಮಾದರಿಯಾಗಬಲ್ಲವನೂ ಅಲ್ಲದ, ಸಾರ್ವಜನಿಕ ಜೀವನವನ್ನು ಪ್ರತಿನಿಧಿಸಬಹುದಾದ ಪ್ರಬುದ್ಧತೆಯೂ ಇಲ್ಲದ, ಅಪ್ಪಟ ದಾಂಧಲೆ ಪ್ರವೃತ್ತಿಯ ಈತನಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಯೂತ್ ಕೋಟಾದಡಿ ಟಿಕೆಟ್ ನೀಡುವುದರೊಂದಿಗೆ ತಮ್ಮ ಪಕ್ಷದಲ್ಲಿ ತೊಡಗಿಸಿಕೊಳ್ಳುವ ಯುವಕರು ಹೇಗಿರಬೇಕೆಂಬುದನ್ನು ಸಾಂಕೇತಿಕವಾಗಿ ಬಿಂಬಿಸಿತ್ತು.

ಕಾಂಗ್ರೆಸ್ 'ಬಿ' ಫಾರಂ ತಂದು ನಾಮಪತ್ರ ಸಲ್ಲಿಸಿದ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಚುನಾವಣೆ ಮಾಡುವ ಬದಲು ವಸೂಲಿಗೆ ನಿಂತ. ಸರ್ಕಾರಿ ಅಧಿಕಾರಿಗಳು, ಗಣಿ ಮಾಲೀಕರು, ಕ್ಯಾಪಿಟೇಷನ್ ಕುಳಗಳು ಹೀಗೆ ಎಲ್ಲೆಂದರಲ್ಲೇ ಫಂಡು ಎತ್ತಿದ. ಪಾರ್ಟಿಫಂಡನ್ನು ಚುನಾವಣಾ ವೆಚ್ಚಕ್ಕೆ ಬಳಸಿಕೊಳ್ಳಲಿಲ್ಲ, ಇದರ ಪರೋಕ್ಷ ಲಾಭ ಪಡೆದ ಬಿಜೆಪಿಯ ಜನಾರ್ದನ ಸ್ವಾಮಿಯ ವಿರುದ್ಧ ಬರೋಬ್ಬರಿ 1 ಲಕ್ಷ 42 ಸಾವಿರ ಓಟುಗಳ ಅಂತರದಲ್ಲಿ ಸೋತು ಮನೆ ಸೇರಿದ.

ತಾನು ಡಿಫೇಟಡ್ ಎಂ.ಪಿ. ಕ್ಯಾಂಡಿಡೇಟ್ ಎಂಬ ಹ್ಯಾಂಗೋವರ್‌ನಲ್ಲೇ ಒಂದಷ್ಟು ದಿನ ಕಾಲ ಕಳೆದ ಈತ ನಂತರ ನಡೆದ ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಸಂದರ್ಭದಲ್ಲಿ ತನ್ನ ಅಳಿದುಳಿದ ಪ್ರಭಾವ ಬಳಸಿ ಪದವಿ ಕಾಲೇಜು ಉಪನ್ಯಾಸಕನಾಗಿ ಮೈಸೂರು ಜಿಲ್ಲೆಯ ಕೆ.ಆರ್. ನಗರದ ಸರ್ಕಾರಿ ಪದವಿ ಕಾಲೇಜಿನ ಅಪರಾಧಶಾಸ್ತ್ರ ವಿಭಾಗಕ್ಕೆ ವಕ್ಕರಿಸಿಕೊಂಡ.


ಅಧ್ಯಯನ, ಬೋಧನೆ, ಅಕಾಡೆಮಿಕ್ ಶಿಸ್ತುಗಳ ಗಂಧಗಾಳಿಯೂ ಇಲ್ಲದ ತಿಪ್ಪೇಸ್ವಾಮಿ ವಿದ್ಯಾರ್ಥಿಗಳ ಮುಂದೆ ಕಿಸಿಯುವುದಾದರೂ ಏನು? ಹೇಳಿಕೇಳಿ ಅಪರಾಧಶಾಸ್ತ್ರ ಬೋಧನೆ ಎನ್ನುವುದು ಆಳವಾದ, ವಿಸ್ತೃತ ಅಧ್ಯಯನ ಬಯಸುವ ವಿಷಯ. ವಿದ್ಯಾರ್ಥಿಗಳಿಗೆ ಪಾಠ ಮಾಡುವುದೋ ಅಥವಾ ಬೆವರು ಒರೆಸಿಕೊಳ್ಳುವುದೋ ಎಂಬ ಗೊಂದಲದಲ್ಲಿಯೇ ಕಾಲೇಜು ಮೇಷ್ಟ್ರು ಕೆಲಸಕ್ಕೆ ಸತತ ಗೈರುಹಾಜರಿಯಾಗ ಲಾರಂಭಿಸಿದ. ಸರ್ಕಾರಿ ಹುದ್ದೆಯ ಪ್ರೊಬೆಷನರಿ ಅವಧಿ ಯಲ್ಲಿದ್ದರೂ ಉಪನ್ಯಾಸಕ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದೇನೆಂದು ಹೇಳಿ ಚಿತ್ರದುರ್ಗದಲ್ಲಿ ಭರ್ತಿ ರಾಜಕೀಯ ಮಾಡಲಾರಂಭಿಸಿದ.

ಒಂದು ಕಡೆ ಈತನ ಆಟಾಟೋಪದ ನಡವಳಿಕೆಗಳಿಂದ ಬೇಸತ್ತ ಕಾಂಗ್ರೆಸ್ ಮುಖಂಡರು ಕೆಪಿಸಿಸಿಗೆ ದೂರುಗಳನ್ನು ಸಲ್ಲಿಸಿದರು. ಉಪನ್ಯಾಸಕನಾಗಿದ್ದುಕೊಂಡೂ ಅಧ್ಯಾಪಕ ವೃತ್ತಿಗೆ ನ್ಯಾಯ ಸಲ್ಲಿಸದೆ ರಾಜಕೀಯದಲ್ಲಿ ಸಕ್ರಿಯವಾಗಿದ್ದಾನೆಂದು ಆರೋಪಿಸಿ ಅಂದಿನ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿಗೆ ಚಿತ್ರದುರ್ಗದ ನ್ಯಾಯವಾದಿ ನೂರುಲ್ಲಾ ಷರೀಫ್ ಹಾಗೂ ಕೆಳಗೋಟೆ ನಿವಾಸಿ ಮಹೇಶ್ ಕುಮಾರ್ ಎಂಬುವವರು ದೂರು ಸಲ್ಲಿಸಿದ್ದರು.


ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಯ ಕಾರ್ಯವೈಖರಿ ಕುರಿತು ಕೆ.ಆರ್. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರುಗಳು ನೀಡಿದ ಅಧಿಕೃತ ಹೇಳಿಕೆ, ಈತನ ವಿರುದ್ಧ ತನಿಖೆಗೆ ನೇಮಿಸಿದ್ದ ವಿಚಾರಣಾ ಸಮಿತಿ ನೀಡಿದ ವರದಿಗಳ ಆಧಾರದಲ್ಲಿ ಮೈಸೂರಿನ ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ದಿ. 13.6.2011 ರಂದು ನೀಡಿರುವ ವರದಿಯಲ್ಲಿ "ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವುದು ಸೂಕ್ತ" ಎಂದು ಅಭಿಪ್ರಾಯ ನೀಡಿದ್ದಾರೆ.

ಸರ್ಕಾರಿ ಹುದ್ದೆಗೂ ಸಲ್ಲ, ರಾಜಕೀಯಕ್ಕೂ ಸಲ್ಲ ಎಂಬುದನ್ನು ಈತ ತನ್ನ ನಡೆನುಡಿಗಳಲ್ಲಿ ಸಾಬೀತುಮಾಡಿ ದ್ದಾನೆ. ತನ್ನ ಬೆಳವಣಿಗೆಯುದ್ದಕ್ಕೂ ಇಂಥಾ ನೆಗೆಟಿವ್ ಟ್ರ್ಯಾಕನ್ನೇ ಹೊಂದಿರುವ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಯನ್ನು ಕಾಂಗ್ರೆಸ್ ಅದ್ಯಾವ ಘನಕಾರಣಗಳಿಗಾಗಿ ಸಹಿಸಿಕೊಂಡಿದೆ ಎಂಬುದೇ ಅಚ್ಚರಿಯ ಸಂಗತಿ.

ಸರ್ಕಾರಿ ನೌಕರರು ಕೆಪಿಸಿಸಿ ಸದಸ್ಯರಾಗಬಹುದೇ?




ಸರ್ಕಾರಿ ನೌಕರರಾದವರು ಯಾವುದೇ ರಾಜಕೀಯ ಪಕ್ಷಗಳ ಆಗುಹೋಗುಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಿಲ್ಲ. ಆದರೆ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದಾನೆ ಮಾತ್ರವಲ್ಲ, ಕೆಪಿಸಿಸಿ ಸದಸ್ಯನೂ ಆಗಿದ್ದಾನೆ. ಕೆಪಿಸಿಸಿಯ ನಿಯಮಾವಳಿಗಳಲ್ಲಿ ಇಂಥದ್ದಕ್ಕೆ ಅವಕಾಶಗಳಿವೆಯಾ? ಎಂಬುದನ್ನು ಕೆಪಿಸಿಸಿ ಅಧ್ಯಕ್ಷರಾದ ಡಾ. ಜಿ. ಪರಮೇಶ್ವರ್‌ರವರೇ ಹೇಳಬೇಕು. ಕೆಪಿಸಿಸಿಯನ್ನು ಮುಂದಿನ ಚುನಾವಣೆಗೆ ಅಣಿಗೊಳಿಸುವ ಪ್ರಯತ್ನಗಳಲ್ಲಿರುವ ಪರಮೇಶ್ವರ್‌ರವರು ಪಕ್ಷದ ವರ್ಚಸ್ಸಿಗೆ ಧಕ್ಕೆ ತರುವ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಯಂತಹ ಎಲಿಮೆಂಟುಗಳನ್ನು ಮೊದಲು ಕೈಬಿಡಬೇಕು. ಇಲ್ಲವಾದಲ್ಲಿ ಜಿಲ್ಲೆಯ ಜನರಿಗೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ.



ಪಿಎಚ್‌ಡಿ ಪದವಿ ತನಿಖೆಯಾಗಲಿ

ಡಾ. ಬಿ. ತಿಪ್ಪೇಸ್ವಾಮಿ ಅಲಿಯಾಸ್ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ವಿಚಾರಣಾ ಸಮಿತಿಗೆ ಬರೆದುಕೊಟ್ಟಿರುವ ತಪ್ಪೊಪ್ಪಿಗೆ ಪತ್ರದಲ್ಲೇ ಹಲವು ತಪ್ಪುಗಳಿವೆ. ಈ ಪತ್ರವನ್ನು ನೋಡಿದ ಯಾರಿಗೆ ಆದರೂ ಈ ವ್ಯಕ್ತಿ ಪಿಎಚ್‌ಡಿ ಹೇಗೆ ಮಾಡಿದ ಎಂಬ ಸಂಶಯ ಬಾರದೇ ಇರದು. ಈತನ ಜಾತಕಗಳನ್ನು ಜಾಲಾಡುತ್ತಿರುವ ಕೆಲ ಕಾಂಗ್ರೆಸ್ ಮುಖಂಡರು ಈತ ಪಡೆದ ಪಿಎಚ್‌ಡಿಯ ಸಾಚಾತನದ ಕುರಿತು ವಾಸ್ತವಾಂಶಗಳನ್ನು ಬಯಲಿಗೆಳೆಯಲು ಈಗಾಗಲೇ ಧಾರವಾಡ ವಿ.ವಿ.ಯ ಕದ ತಟ್ಟಿದ್ದಾರೆ. ಅಲ್ಲಿ ಯಾರ್ಯಾರಿಗೆ ಗ್ರಹಚಾರ ಕಾದಿದೆಯೋ ಏನೋ.



ಸವದಿಯ ಪಾಪದ ಕೊಡ ಮತ್ತು ಬಲಿಯಾದವರ ಆರ್ತನಾದ

ತೊಗರಿ ಬೆಳೆಗಾರರ ಕಾರ್ಪಣ್ಯದ ಕುರಿತು ...ಧಾನಪರಿಷತ್ತಿನಲ್ಲಿ ಶಾಸಕ ಅಲ್ಲಮ ಪ್ರಭು ಪಾಟೀಲ್ ...ಣ್ಣೀರಿಡುತ್ತಿದ್ದರೆ ಅವರನ್ನು ಸಂತೈಸಬೇಕಿದ್ದ ಮಂತ್ರಿ ಸವದಿ ...ತ್ತು ಕತ್ತಿ ಗೇಲಿ ಮಾಡಿ ನಕ್ಕಿದ್ದು ಬಿಜೆಪಿ ಮಂತ್ರಿಗಳ ...ಟ್ಟಹಾಸದ ಪ್ರತೀಕದಂತಿತ್ತು. ಇದನ್ನು ಕಂಡೇ ಎಮ್ಮೆಲ್ಸಿ ...ಲ್ಲಮಪ್ರಭು ಪಾಟೀಲ್ "ನಾನು ರೈತರ ಕಷ್ಟದ ಬಗ್ಗೆ ...ಣ್ಣೀರಿಡುತ್ತಿದ್ದರೆ ನೀವು ಗೇಲಿ ಮಾಡಿ ನಗುತ್ತಿದ್ದೀರಲ್ಲ ...ಮಗೆ ರೈತರ ಶಾಪ ತಟ್ಟದೇ ಇರೋಲ್ಲ' ಎಂದು ...ಡಿಶಾಪ ಹಾಕಿದಾಗಲೇ ಸವದಿಯ ಪಾಪದ ಕೊಡ ...ಂಬಿಬಂದಿತ್ತು.

ಲಕ್ಷ್ಮಣ ಸಂಗಪ್ಪಾ ಸವದಿ ...ಹಕಾರ ಮಂತ್ರಿಯಾಗಿ, ...ಥಣಿಯ ಶಾಸಕನಾಗಿ, ...ಲಬರ್ಗಾ ಜಿಲ್ಲೆಯ ಉಸ್ತುವಾರಿ ...ಂತ್ರಿಯಾಗಿ ಮಾಡಿದ ...ನಾಚಾರ ಮತ್ತು ನಡೆಸಿದ ...ೌರ್ಜನ್ಯಗಳ್ಯಾವವೂ ...ಜಧಾನಿಯ ಮಟ್ಟಿಗೆ ...ದ್ದಿಯಾಗಲಿಲ್ಲ, ಗೂಂಡಾಗಿರಿ, ...ೌರ್ಜನ್ಯ, ಬ್ಲಾಕ್‌ಮೇಲ್, ...ತಂತ್ರಗಳನ್ನೇ ತನ್ನ ...ಜಕೀಯದ ಸೋಪಾನವನ್ನಾಗಿ ...ಾಡಿಕೊಂಡು ಸವದಿ ಹಾಳು ...ಾಡಿದ ಮನೆಗಳ ಸಂಖ್ಯೆ ...ಂದಾ, ಎರಡಾ?

1994ರಲ್ಲಿ ಸವದಿ ...ಕ್ಷೇತರನಾಗಿ ನಿಂತು ...ಸುಮಾರು 30 ಸಾವಿರ ಮತ ...ತಾಗ ಅಥಣಿಗೆ ಶಾಸಕರಾಗಿದ್ದದ್ದು ಕಾಂಗ್ರೆಸ್ಸಿನ ...ಹಜಹಾನ್ ಡೊಂಗರಗಾಂವ್. ಇದ್ದುದರಲ್ಲಿ ಈತ ಸಭ್ಯ ...ತ್ತು ಪ್ರಾಮಾಣಿಕ. ಆದರೆ ಜಾತಿಯ ಬಲ ಬೇಕಲ್ಲ, ...ವದಿ ತನ್ನ ಜಾತಿ ಮತ್ತು ಪಾಳೇಗಾರಿ ಅಟ್ಟಹಾಸವನ್ನೇ ...ಜಕೀಯದ ಅಡಿಪಾಯವನ್ನಾಗಿಸಿಕೊಂಡ. 2004 ರಲ್ಲಿ ...ಜೆಪಿಯಿಂದ ಗೆದ್ದು ಮೊದಲ ಬಾರಿಗೆ ಶಾಸಕನಾದಾಗಲೇ ...ಥಣಿಯ ಕರಾಳದಿನಗಳು ಶುರುವಾಗಿದ್ದವು. ತಂದೆ ...ಗಪ್ಪ ಹೇಳಿಕೇಳಿ 200 ಎಕರೆಗಳ ಪಾಳೇಗಾರ. ಅಣ್ಣ ...ಶಿನಾಥ ಆ ಕಾಲದಿಂದಲೂ ಬಡರೈತರನ್ನು ...ೀಡಿಸಿಕೊಂಡೇ ಬಂದಾತ. ಈತನ ಮಗ ಶಿವಾನಂದ ...ಂಗಳೂರಿನಲ್ಲಿ ಮಂತ್ರಿ ಸವದಿಯ ರಿಯಲ್ ಎಸ್ಟೇಟ್ ...ತ್ತು ಬ್ಲಾಕ್‌ಮನಿಯ ಉಸ್ತುವಾರಿ ವಹಿಸಿದರೆ, ಮತ್ತೊಬ್ಬ ...ಗ ಸಿದ್ಧಾರೂಢ ಅಥಣಿಯ ಪಾಲಿಗೆ ಅನಭಿಷಕ್ತ ...ೊರೆಯಂತೆ ಮೆರೆದ.

ಈ ಸಿದ್ಧಾರೂಢ ಹೆಸರಿಗಷ್ಟೇ ವಕೀಲ. ಇಲ್ಲಿನ ...ೋಲೀಸರು, ಅಧಿಕಾರಿಗಳು ಈತನ ಅಣತಿ ಮೇರೆಗೇ ...ರ್ಯನಿರ್ವಹಿಸಬೇಕು. ಯಾವುದೇ ಗಲಾಟೆ, ...ೂವಿವಾದ, ಕೌಟುಂಬಿಕ ಕಲಹ ಏನೇ ಇದ್ದರೂ ಅದು ಮೊದಲು ಸಿದ್ಧಾರೂಢನ ಅಡ್ಡೆಗೆ ಬಂದೇ ಆನಂತರ ಪೊಲೀಸ್ ಠಾಣೆಗೆ ಬರಬೇಕೆಂಬುದು ಸವದಿ ಸಾಹೇಬರ ಫರ್ಮಾನು. ಈ ಸಿದ್ಧಾರೂಢನ ಹಾವಳಿಯೇ ಈ ಪರಿಯಾದರೆ ಸವದಿಯ ಖಾಸಾ ತಮ್ಮ ಪರಪ್ಪ ಸವದಿಯ ಹಾವಳಿ ಇನ್ನೂ ವಿಪರೀತ. ಸಂಕೋನಟ್ಟಿಯ ಪ್ರತಿಷ್ಠಿತ ಕೃಷ್ಣಾ ಶುಗರ್ ಫ್ಯಾಕ್ಟರಿಗೆ ಈತನೇ ಛೇರ್ಮನ್. ಅಣ್ಣ ಕಾಶೀನಾಥನ ಅಳಿಯ ಸರ್ಕಲ್ ಇನ್‌ಸ್ಪೆಕ್ಟರಾದರೆ ತನ್ನ ಪತ್ನಿ ಪುಷ್ಪಾಳ ಖಾಸಾ ತಮ್ಮ ಸುನೀಲ್ ಸಿದ್ಧಪ್ಪಾ ನಂದೀಶ್ವರ್‌ನನ್ನೇ ತನ್ನ ಪಿಎ ಮಾಡಿಕೊಂಡು ಆತನಿಗೆ ತನ್ನ ಮಗಳನ್ನು ಕೊಟ್ಟು ಅಳಿಯನನ್ನಾಗಿ ಮಾಡಿಕೊಂಡಿದ್ದಾನೆ ಮಂತ್ರಿ ಸವದಿ.



ಅಥಣಿಯ ಮಟ್ಟಿಗೆ ಸವದಿ ನಿರಂಕುಶ ಚಕ್ರಾಧಿಪತಿ. ಸಬ್ ಇನ್ಸ್‌ಪೆಕ್ಟರ್ ರವೀಂದ್ರ ನಾಯಕೋಡಿ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಎಲಿಗಾರ್ ಏನಿದ್ದರೂ ಇಲ್ಲಿ ಸವದಿಯ ಆಜ್ಞಾಪಾಲಕರಷ್ಟೆ!

ಮೊದಲ ಬಾರಿಗೆ ರಾಜಕೀಯವಾಗಿ ಸವದಿಯ ತಾಕತ್ತು ಸಾಬೀತಾಗಿದ್ದು 2008 ರಲ್ಲಿ. ಬಿಜಾಪುರದ ಬಸನಗೌಡ ಯತ್ನಾಳರನ್ನು ಮುಗಿಸಿ ಬಿಜೆಪಿ ಮಟ್ಟಿಗೆ ತಾನೇ ಏಕಮೇವ ದ್ವಿತೀಯ ನಾಯಕನಾಗಬೇಕೆಂಬ ಯಡ್ಡಿಯ ದುರಾಸೆಗೆ ಅಸ್ತ್ರವಾಗಿ ಸಿಕ್ಕವನೇ ಸವದಿ. ಕುಮಾರಸ್ವಾಮಿ ಸಂಪುಟದಲ್ಲಿ ತನಗೆ ಮಂತ್ರಿಗಿರಿ ತಪ್ಪಿಸಿದ ಕಾರಣಕ್ಕೆ ಸವದಿಗೂ ಯತ್ನಾಳರ ಮೇಲೆ ಸಿಟ್ಟಿತ್ತು. ದೇವರ ಹಿಪ್ಪರಗಿಯಲ್ಲಿ ಕಾಂಗ್ರೆಸ್ಸಿನ ಎ.ಎಸ್. ಪಾಟೀಲ್ ನಡಹಳ್ಳಿ ವಿರುದ್ಧ ಬಿಜೆಪಿಯಿಂದ ಯತ್ನಾಳ್ ನಿಂತಿದ್ದ ಸಮಯವನ್ನೇ ಕಾದು ಯಡ್ಡಿ ಛೂಬಿಟ್ಟಿದ್ದು ಇದೇ ಸವದಿಯನ್ನು. ಯತ್ನಾಳರ ಮೂಲಕವೇ ರಾಜಕೀಯವಾಗಿ ಜನ್ಮತಳೆದ ಅಪ್ಪು ಪಟ್ಟಣಶೆಟ್ಟಿ ಮತ್ತು ಸವದಿ ಜೋಡಿ ಶತಗತಾಯ ಯತ್ನಾಳರನ್ನು ಮುಗಿಸಲೇಬೇಕಿತ್ತು. ಕಾಶಿನಾಥ್ ಮಸೀರ್‌ನಾಳ್ ಎಂಬಾತನನ್ನು ಯತ್ನಾಳರ ವಿರುದ್ಧ ಎತ್ತಿಕಟ್ಟಿ ಬಂಡಾಯ ಬಿಜೆಪಿ ಅಭ್ಯರ್ಥಿಯನ್ನಾಗಿಸಿ ದುಡ್ಡು ಕಾಸು ಕೊಟ್ಟು ಓಟು ಕಿತ್ತ ಫಲವಾಗಿ ಯತ್ನಾಳ್ ಸೋತರು.

ಬಿ.ಬಿ. ಶಿವಪ್ಪನವರನ್ನು ತುಳಿದಂತೆ ಮತ್ತೊಬ್ಬ ಲಿಂಗಾಯತ ನಾಯಕ ಯತ್ನಾಳರನ್ನು ಮುಗಿಸುವ ಯಡ್ಡಿಯ ದುರಾಸೆಯನ್ನು ಸವದಿ ಈಡೇರಿಸಿಕೊಟ್ಟಿದ್ದ. ಮುಂದೆ ಯಡ್ಡಿ ಮುಖ್ಯಮಂತ್ರಿಯಾಗಿ ಸವದಿಗೆ ಫಲವತ್ತಾದ ಸಹಕಾರ ಖಾತೆಯ ಜೊತೆ ಗುಲ್ಬರ್ಗಾ ಜಿಲ್ಲೆಯ ಉಸ್ತುವಾರಿ ಮಂತ್ರಿಗಿರಿಯೂ ಸಿಕ್ಕಿತು. ಹಿಪ್ಪರಗಿ ನೀರಾವರಿ ಯೋಜನೆಯ ಕರಿಮಸೂತಿ ಏತ ನೀರಾವರಿ ಪ್ರಾಜೆಕ್ಟ್ ಒಂದರಲ್ಲೇ ನೂರಾರು ಕೋಟಿಯ ಲಂಚ ಹುಟ್ಟಿಸಿತ್ತು ಮಂತ್ರಿಯಾದ ಶುರುವಿನಲ್ಲಿ ಸವದಿ ಕೈ ಹಾಕಿದ್ದೇ ಕಾಂಟ್ರಾಕ್ಟ್ ಕಮೀಶನ್ ದಂಧೆಗೆ. ಯಾರೇ ಕಂಟ್ರಾಕ್ಟರ್ ಅಥಣಿಗೆ ಕಾಲಿಡಬೇಕು ಅಂದರೆ ಹದಿನೈದು ಪರ್ಸೆಂಟ್ ಕಮೀಶನ್ ಮಡಗಿಯೇ ತೀರಬೇಕು. 600 ಕೋಟಿಯಲ್ಲಿ 15 ಪರ್ಸೆಂಟ್ ಅಂದರೆ ಹೆಚ್ಚೂ ಕಮ್ಮಿ ನೂರು ಕೋಟಿಯ ಕಿಕ್ ಬ್ಯಾಕ್!

ಹೀಗೆ ಹೊಡೆದ ಕೊಳ್ಳೆಯನ್ನು ಬಳಸಿ ಸವದಿ ಮಹಾರಾಷ್ಟ್ರ ಸಾಂಗ್ಲಿಯಲ್ಲಿ ಆಸ್ತಿ ಖರೀದಿಸಿದ. ಬೆಳಗಾವಿಯಲ್ಲಿ ವಿಧಾನಸೌಧ ಕಟ್ಟಿಸುತ್ತಿದ್ದಾರೆಂದು ಗೊತ್ತಾಗಿ ಅದರ ಪಕ್ಕದಲ್ಲೇ ಪಂಚತಾರಾ ಹೋಟೆಲ್ ಕಟ್ಟಿಸಲು 15 ಕೋಟಿಯ ಜಮೀನು ಖರೀದಿಸಿಕೊಂಡ.

ಅಥಣಿ ಪಾಳೇಗಾರನ ಪಾಪದ ಕೊಡ ತುಂಬಿತ್ತು!

ಅಥಣಿಯಲ್ಲೊಂದು ಸ್ಟಾರ್ಚ್ ಫ್ಯಾಕ್ಟರಿ ಮಾಡಲು ಮತ್ತೆ 20 ಕೋಟಿಯ ಪ್ರಾಜೆಕ್ಟ್ ಆರಂಭಿಸಿದ್ದೂ ಅಲ್ಲದೆ ಪಕ್ಕದ ರಾಯಭಾಗದಲ್ಲಿ ತಂದೆಯ ಹೆಸರಿಟ್ಟು ಸಂಗಮೇಶ್ ಶುಗರ್ ಫ್ಯಾಕ್ಟರಿ ಮಾಡ್ತೀನಿ ಎಂದು ಮತ್ತೆ 20 ಕೋಟಿಯ ಬಂಡವಾಳ ಹಾಕಿದ. ಅಳಿಯ ಕಮ್ ಪಿಎ ಸುನೀಲ್ ಸಿದ್ಧಪ್ಪಾ ನಂದೀಶ್ವರ್ ಹೆಸರಿನಲ್ಲಿ ಬೆಂಗಳೂರಿನಲ್ಲಿ ಎಂಟು ಸೈಟುಗಳು, ಡಾಲರ್ಸ್ ಕಾಲೋನಿಯಲ್ಲಿ ಭರ್ಜರಿ ಬಂಗಲೆ, ಅಣ್ಣನ ಮಗ ಶಿವಾನಂದ ಹೆಸರಿನಲ್ಲಿ ಬೆಂಗಳೂರಿನ ಅಪಾರ್ಟ್‌ಮೆಂಟ್, ಹೀಗೇ ಮೂರೇ ವರ್ಷದಲ್ಲಿ ಸವದಿಯ ಇಡೀ ವಂಶವೇ ಉದ್ಧಾರವಾಗಿ ಹೋಯಿತು.

ಇದೆಲ್ಲ ಸವದಿಯ ದುಡ್ಡೂಕಾಸಿನ ಪುರಾಣವಾದರೆ ಅಥಣಿಯಲ್ಲಿ ಆತ ನಡೆಸಿದ ಸರ್ಕಾರಿ ಗೂಂಡಾಗಿರಿಯದ್ದೇ ಪ್ರತ್ಯೇಕ ಕಥೆಯಾಗುತ್ತದೆ. ಅಥಣಿಯ ದರೂರ್ ಜಿ.ಪಂ ಕ್ಷೇತ್ರದಿಂದ ಗೆದ್ದಿದ್ದ ಮಾಯಣ್ಣನವರ್ ಬಡಬಗ್ಗರ ಪರವಾಗಿ ಕೋಟಿಗಟ್ಟಲೇ ಕಾಮಗಾರಿಯ ಯೋಜನೆ ರೂಪಿಸಿದ್ದಾರೆ. ಆ ಪೈಕಿ ಒಂದೇ ಒಂದು ಪೈಸೆ ಬಿಡುಗಡೆಯಾಗದಂತೆ ನೋಡಿಕೊಂಡು ಕೊನೆಗೆ ಮಾಯಣ್ಣನವರ್‌ರನ್ನು ಕರೆಸಿ ನೀನು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದರೆ ಮಾತ್ರ ಉಳಿಯಲು ಬಿಡ್ತೀನಿ ಎಂದು ಧಮಕಿಕೊಟ್ಟ. ಪಾಪ ಮಾಯಣ್ಣನವರ್ ಕಣ್ಣೀರಿಟ್ಟುಕೊಂಡು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡ.

ಇದೇ ಗತಿ ಸತ್ತಿಯ ಜಿ.ಪಂ ಸದಸ್ಯೆ ರತ್ನವ್ವ ಪಟ್ರೆಗೂ ಆಯಿತು. ನೀನು ಕಾಂಗ್ರೆಸ್ ತೊರೆದು ಬಿಜೆಪಿಗೆ ಬರದೇ ಹೋದ್ರೆ ಒಂದೇ ಒಂದು ಪೈಸೆ ಕಾಮಗಾರಿ ಮಾಡಲಾಗದ ಹಾಗೇ ಮಾಡ್ತೀನಿ ಎಂದು ಸವದಿ ಹೆದರಿಸಿದ. ರತ್ನವ್ವ ಭೀತಿಗೆ ಬಿದ್ದೇ ಬಿಜೆಪಿ ಸೇರಬೇಕಾಯಿತು. ಕೃಷ್ಣ ಶುಗರ್ ಫ್ಯಾಕ್ಟರಿಯ ಮಾಜಿ ಡೈರೆಕ್ಟರ್ ಬಾಬಾ ಸಾಹೇಬ ಪಾಟೀಲರನ್ನೂ ಇದೇ ರೀತಿ ಧಮಕಿ ಹಾಕಿ ಬಿಜೆಪಿಗೆ ಎಳೆದುಕೊಂಡ ಸವದಿ ಸತ್ತಿಯ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮೋಹನ್ ದೊಡ್ಮನಿಯನ್ನು ಬಿಜೆಪಿಗೆ ಸೆಳೆಯಲು ವಿಶಿಷ್ಟ ತಂತ್ರವೊಂದನ್ನು ಬಳಸಿದ. ದೊಡ್ಮನಿಯ ಪತ್ನಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲಿಗೆ ಸೂಪರಿಂಟೆಂಡೆಂಟ್ ಆಗಿದ್ದರು. ಅವರನ್ನು ಎತ್ತಿದ್ದೇ ಗುಲಬರ್ಗಾಕ್ಕೆ ಎತ್ತಂಗಡಿ ಮಾಡಿಬಿಟ್ಟ!


ಹೆಂಡತಿಯ ವರ್ಗಾವಣೆಯನ್ನು ರದ್ದುಪಡಿಸಬೇಕೆಂದರೆ ನೀನು ಬಿಜೆಪಿಗೆ ಬಾ ಎಂದು ಮೋಹನ್ ದೊಡ್ಮನಿಗೆ ಬ್ಲಾಕ್ ಮೇಲ್ ಮಾಡಿದ. ಪಾಪ ದೊಡ್ಮನಿ ವಿಧಿಯಿಲ್ಲದೇ ಬಿಜೆಪಿ ಸೇರಿ ಬಚಾವಾದ. ಇದೇ ತಂತ್ರವನ್ನು ಐಗಳದ ಜನಪ್ರಿಯ ತಾಲೂಕು ಪಂಚಾಯ್ತಿ ಸದಸ್ಯ ಗುಂಡಪ್ಪ ಬಿರಾದಾರ ಮೇಲೂ ಬಳಸಿದ. ಈತನ ಅಣ್ಣ ಬಸಗೌಡ ಬಿರಾದಾರ್ ಅಥಣಿಯಲ್ಲಿ ರೇಷ್ಮೆ ಅಧಿಕಾರಿ. ಆತನನ್ನು ಮುಲಾಜಿಲ್ಲದೇ ಕೋಲಾರಕ್ಕೆ ಎತ್ತಾಕಿದ. ಬಸಗೌಡ ಹೋಗಿ ನನ್ನನ್ನು ಅಥಣಿಯಲ್ಲೇ ಉಳಿಸಿಕೊಡ್ರಿ ಎಂದು ಕಣ್ಣೀರಿಟ್ಟ. 'ನೋಡಪ್ಪಾ ನ್ನ ತಮ್ಮಗ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬರೋದಕ್ಕೆ ಹೇಳು" ಅಂದ. ಬಿಜೆಪಿಗೆ ಬಂದ್ರೆ ಮಾತ್ರ ನಾನು ಇಲ್ಲಿ ಉಳಕೋತಿಯ..."ಎಂದು ಬಿಟ್ಟ.

ಅಥಣಿಯ ಪ್ರಭಾವಿ ಕಾಂಗ್ರೆಸ್ ಮುಖಂಡ ಗುಂಡಪ್ಪ ಬಿರಾದಾರ್ ಬಿಜೆಪಿ ಸೇರಿದ್ದೇ ಸವದಿಯ ಈ ದೌರ್ಜನ್ಯದ ಫಲವಾಗಿ. ಐಗಳದ ಜಿ.ಪಂ. ಮಾಜಿ ಸದಸ್ಯ ಮತ್ತು ಹಾಲಿ ಶುಗರ್ ಫ್ಯಾಕ್ಟ್ರಿ ಡೈರೆಕ್ಟರ್ ಚಂದ್ರಕಾಂತ ಪಾಟೀಲರ ಅಳಿಯನಿಗೆ ಸಹಕಾರಿ ಇಲಾಖೆಯಲ್ಲಿ ಕೆಲಸ ಬೇಕಾದರೆ ನೀನೂ ಬಿಜೆಪಿಗೆ ಬರಬೇಕೆಂಬ ಷರತ್ತಿಟ್ಟ. ಅಳಿಯನ ಕೆಲಸದ ಕಾರಣಕ್ಕೆ ಚಂದ್ರಕಾಂತ್ ಪಾಟೀಲ್ ಬಿಜೆಪಿಗೆ ಬರದೇ ವಿಧಿಯೇ ಇರಲಿಲ್ಲ. ಇಂತಹ ಅಧಿಕಾರದ ಅಟ್ಟಹಾಸದ ಪಾಪದ ಕೊಡ ಈಗ ತುಂಬಿ ಬಂದಿದೆ. ಅಥಣಿಯ ಜನ ಸವದಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇತ್ತ ವಿಧಾನಸಭೆಯಲ್ಲಿ ಬ್ಲೂಫಿಲ್ಮ್ ನೋಡಿ ಸಿಕ್ಕಿಬಿದ್ದ ಸವದಿಯ ಅಸಹ್ಯದ ಕುರಿತ ವರದಿಯು ಯಾವುದೇ ಪತ್ರಿಕೆ ಅಥಣಿಗೆ ಬರದಂತೆ ಪುಂಡರನ್ನು ಬಿಟ್ಟು ದಾಂಧಲೆ ನಡೆಸಿದ. ಜನ ಟೀವಿಗಳಲ್ಲಿ ಸುದ್ದಿ ನೋಡದ ಹಾಗೆ ಇಡೀ ಅಥಣಿಗೆ ಕರೆಂಟು ಕಟ್ ಮಾಡಿಸಿದ. ಸವದಿಯ ಅನಾಚಾರದ ವಿರುದ್ಧ ಅಥಣಿಯ ಜನ ಬೀದಿಗಿಳಿದು ಪ್ರತಿಭಟಿಸದ ಹಾಗೆ ಗೂಂಡಾಗಿರಿ ಮಾಡಲು ಬಾಡಿಗೆ ಬಂಟರನ್ನು ಕರೆಸಿಕೊಂಡ. ಪರಪ್ಪ ಸವದಿಯ ಶುಗರ್ ಫ್ಯಾಕ್ಟರಿ ಮತ್ತು ಸವದಿಯ ಮನೆಗಳೇ ಬಾಡಿಗೆ ಬಂಟರಿಂದ ತುಂಬಿದ್ದು ಗೊತ್ತಾಗಿ ಜನ ಯಾವ ಮಟ್ಟಿಗೆ ರೊಚ್ಚಿಗೆದ್ದರೆಂದರೆ ಪ್ರತಿಭಟನೆಗೆ ಸೇರಿದ ನಾಲ್ಕೈದು ಸಾವಿರ ಜನರನ್ನು ಕಂಡೇ ಸವದಿಯ ಗೂಂಡಾ ಪಡೆ ಪರಾರಿಯಾಯಿತು.

ಸವದಿಯ ಪಾಪದ ಕೊಡ ತುಂಬಲು ಇದಕ್ಕಿಂತ ಬೇಕೇ?

❖

ಸಿ.ಸಿ. ಪಾಟೀಲನ ಮಹಿಳಾ ಕಲ್ಯಾಣ ಮತ್ತು ಮಕ್ಕಳ ಗಣ...!!



ಕುರಿ ಕಾಯಲು ತೋಳ ಬಿಟ್ಟಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಿ.ಸಿ. ಪಾಟೀಲನೆಂಬ ಪರಮ ರಸಿಕ ಶಿಖಾಮಣಿಯನ್ನು ತಂದು ಮಂತ್ರಿ ಮಾಡಿದ್ದು ಕೂಡ ಮಾಜಿ ಮುಖ್ಯಮಂತ್ರಿ ಯಡ್ಡಿ ಸಾಹೇಬರೆ.

ನರಗುಂದವೆಂಬ ಬರಪೀಡಿತ ದಟ್ಟದರಿದ್ರ ಕ್ಷೇತ್ರದಿಂದ ಗೆದ್ದು ಬಂದ ಸಿ.ಸಿ. ಪಾಟೀಲರ ಅಧಿಕೃತ ಪತ್ನಿಯ ಹೆಸರು ಶೋಭಾ ಪಾಟೀಲ್. ಮೂರು ಗಂಡು ಒಂದು ಹೆಣ್ಣು ಮಕ್ಕಳ ತಾಯಿಯಾದ ಆಕೆಯನ್ನು ನರಗುಂದದಲ್ಲಿ ಶಾಶ್ವತವಾಗಿ ಕೂಳೆ ಹಾಕಿದ ಮಂತ್ರಿ ಪಾಟೀಲರು ತಮ್ಮ ಪ್ರಣಯಯಾತ್ರೆಯನ್ನು ಮಾತ್ರ ಅಷ್ಟದಿಕ್ಕಿಗೂ ವಿಸ್ತರಿಸಿದ್ದಾರೆ. ಸದ್ಯ ಬೆಂಗಳೂರಿನಲ್ಲಿರುವ ಮಂತ್ರಿ ನಿವಾಸದಲ್ಲಿ ತಾನು ಮಂತ್ರಿ ಸಾಹೇಬರ ಪತ್ನಿಯೆಂದೇ ಚಾಲ್ತಿಯಲ್ಲಿರುವಾಕೆ ಸರಿತಾ ಎಂಬ ಚಾಲಾಕಿ ಮಹಿಳೆ!

ಇಡೀ ಇಲಾಖೆಯಷ್ಟೇ ಏಕೆ, ಮಂತ್ರಿ ಪಾಟೀಲರ ಬೆಂಬಲಿಗರು ಕೂಡಾ ಮೇಡಮ್ ಸರಿತಾರನ್ನೇ ಪಾಟೀಲರ ಧರ್ಮಪತ್ನಿಯೆಂದು ನಂಬಿದ್ದಾರೆ. ಈ ಮಿಸೆಸ್ ಸಿ.ಸಿ. ಪಾಟೀಲ್ ಎಂದು ಸ್ವಯಂ ಘೋಷಿಸಿಕೊಂಡ ಹೆಂಗಸು ಮಂತ್ರಿ ಸಾಹೇಬರ ಅಧಿಕೃತ ಪತ್ನಿಯಲ್ಲ ಮತ್ತು ಮಂತ್ರಿ ನಿವಾಸವನ್ನು ತನ್ನ ವಿವಾಹಬಾಹಿರ ವಿಕೃತಿಗೆ ಬಳಸಿಕೊಂಡ ದುರಾಚಾರವನ್ನು ಗೊತ್ತಿದ್ದೂ ಆರೆಸ್ಸೆಸ್ ನಾಯಕರಾಗಲಿ, ಬಿಜೆಪಿ ಮುಖ್ಯಸ್ಥರಾಗಲಿ ಈತನಕ ಪ್ರಶ್ನಿಸಿಲ್ಲ. ಹಾಗೆ ಕೈಹಿಡಿದ ಮಡದಿಯನ್ನು ನರಗುಂದದ ಮನೆಯಲ್ಲಿ ಮುಸುರೆ ತಿಕ್ಕಲು ಬಿಟ್ಟು, ಬೀಜದ ಹೋರಿಯಂತೆ ಉಂಡಾಡಿಯಾದ ಪಾಟೀಲರ ಪೌರುಷ ಪ್ರಸಂಗಗಳು ಒಂದಲ್ಲ ಎರಡಲ್ಲ,

ನರಗುಂದದ ಮುನಿಸಿಪಾಲ್ಟಿ ಪಕ್ಕದ್ದೇ ಪಾಟೀಲರ ಒಡೆತನದ ಲಯನ್ಸ್ ಎಜುಕೇಷನ್ ಸೊಸೈಟಿ. ಹೇಳಿಕೇಳಿ ಇಂಗ್ಲಿಷ್ ಕಾನ್ವೆಂಟ್. ಕಮ್ಮಿಯೆಂದರೂ ಒಂದೂವರೆ ಡಜನ್ ಶಿಕ್ಷಕಿಯರ ಪಾಲಿಗೆ ಇದೇ ಕರ್ಮಸ್ಥಾನ. ಮಂತ್ರಿ ಪಾಟೀಲರು ಈ ಶಾಲೆಯ ಫೌಂಡರ್ ಮತ್ತು ಛೇರ್ಮನ್ ಆಗಿರುವುದರಿಂದ ಯಾರೇ ಶಿಕ್ಷಕಿಯೊಬ್ಬಳು ಅಷ್ಟಿಷ್ಟು ಸುಂದರಿಯರಾಗಿದ್ದು ಗಂಡ ಕೊಂಚ ಸಭ್ಯಸ್ಥನೆಂದರೆ ಆಕೆಯ ಕತೆ ಮುಗಿಯಿತೆಂದೇ ಅರ್ಥ!

ಈ ಓಂದೆ ಬಾಜಿ ಎಂಬ ಮುಸ್ಲಿಮ್ ಟೀಚರ್ ಒಬ್ಬಳಿಗೆ ಪಾಟೀಲರು ಕೊಟ್ಟ ಕಾಟದ ಬಗ್ಗೆಯೇ ನರಗುಂದದ ಜನ ಹಣೆ ಚಚ್ಚಿಕೊಳ್ಳುತ್ತಾರೆ. ಕೊನೆಗೆ ಕಾಟ ತಾಳಲಾರದೆ ಮಾನ ಉಳಿದರೆ ಸಾಕೆಂದು ಆಕೆ ಕೆಲಸವನ್ನೇ ಬಿಟ್ಟು ಬೆಳಗಾವಿಗೆ ವಲಸೆ ಹೋದಳು. ಇದೇ ಹೊತ್ತಿಗೆ ನರಗುಂದದ ಜವಳಿ ಬಜಾರ್‌ನ ತನ್ನ ಗೆಳೆಯ ಪಾಂಡುನಾವರೆ ಎಂಬಾತನ ಎಲೆಕ್ಟ್ರಿಕಲ್ ಶಾಪಿಗೆ ಪಾಟೀಲ್ ಪ್ರತಿನಿತ್ಯ ಬರುತ್ತಿದ್ದವನು ಸಂಜೆಯಾದರೆ ಸಾಕು ಆತನ ಅಂಗಡಿಯ ತಾರಸಿ ಮೇಲೆ ವಿಸ್ಕಿ ಪಾರ್ಟಿ ಶುರು ಹಚ್ಚಿಕೊಳ್ಳುತ್ತಿದ್ದ. ಪಕ್ಕದಲ್ಲೇ ಮಂಗಳೂರು ಕಡೆಯ ಆಚಾರಿಯೊಬ್ಬನ ಜ್ಯುವೆಲ್ಲರಿ ಶಾಪಿತ್ತು. ಆತನಿಗೊಬ್ಬಳು ಸುಂದರ ಪತ್ನಿ. ಅದೇನಾಯಿತೋ ಏಕಾಏಕಿ ಆಚಾರಿಯ ಪತ್ನಿ ನಾಪತ್ತೆಯಾದಳು. ಕೊನೆಗೆ ನರಗುಂದದ ಜನಕ್ಕೆ ಗೊತ್ತಾಗಿದ್ದೇನೆಂದರೆ ಪಾಟೀಲರು ಧಾರವಾಡದಲ್ಲೊಂದು ಮನೆ ಮಾಡಿ ಆಚಾರಿಯ ಪತ್ನಿಯ ಕಷ್ಟಕಾರ್ಪಣ್ಯವನ್ನೆಲ್ಲ ನಿವಾರಿಸಿದ್ದರು!

ಆನಂತರ ನರಗುಂದಕ್ಕೆ ಬಂದವಳು ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ (ಹೆಸರು ಬದಲಿಸಿದೆ). ಪಾಟೀಲರಿಗೆ ಈಕೆಯ ಬಗ್ಗೆ ವಿಶೇಷ ಮುತುವರ್ಜಿ. ತಾವೇ ಮನೆ ಮಾಡಿದ್ದೂ ಅಲ್ಲದೆ ಮೇಡಮ್ ಯೋಗಕ್ಷೇಮ ವಿಚಾರಿಸುವುದು, ಹೊತ್ತಿಲ್ಲದ ಹೊತ್ತಲ್ಲಿ ಹೋಗಿ ಕಷ್ಟಸುಖ ವಿಚಾರಿಸುವುದು ಮಾಡಿದ ಫಲವಾಗಿ ಮಂಜುಳಾರ ಪೋಷಕರೇ ನಿಂತು ವರ್ಗಾವಣೆ ಮಾಡಿಸಬೇಕಾಯ್ತು.

ಸದ್ಯ ಲಯನ್ಸ್ ಸ್ಕೂಲಿನ ಟೀಚರ್ ಒಬ್ಬಳ ಪಾಡೂ ಇದೇ. ಬದುಕಲು ಬೇರೆ ದಾರಿಯಿಲ್ಲ, ಇಲ್ಲಿದ್ದು ಪಾಟೀಲರ ಋಣವನ್ನು ಸಹಿಸುವಂತಿಲ್ಲ. ಇದೆಲ್ಲವನ್ನೂ ಬದಿಗಿಟ್ಟು ನೋಡಿದಾಗಲೂ ಮಂತ್ರಿ ಪಾಟೀಲರ ರಸಿಕತೆ ಬಗ್ಗೆ ಸಾಕಷ್ಟು ದೃಷ್ಟಾಂತಗಳು ಕೇಳಿಬರುತ್ತವೆ. ಈ ಪೈಕಿ ಒಂದು ಚಿತ್ರನಟಿಯೊಬ್ಬಳ ಬಗ್ಗೆ ಪಾಟೀಲರಿಗಿರುವ ಅಭಿಮಾನ. ಹಿಂದೆ ಕಾಶಿನಾಥ್ ಚಿತ್ರದಲ್ಲಿ ನಾಯಕಿಯಾಗಿದ್ದು ಈಗ ಟೀವಿ ಧಾರಾವಾಹಿಯಲ್ಲಿ ನಟಿಸುತ್ತಿರುವ ಈ ನಟಿಗೆ ಬೆಂಗಳೂರಿನಲ್ಲಿ ಮನೆ ಕಟ್ಟಿಸಲು ಮಂತ್ರಿ ಪಾಟೀಲರು ತನುಮನದಿಂದ ನೆರವಾಗಿದ್ದಾರಂತೆ.

ಮಂತ್ರಿವರ್ಯರ ಈ ಮಹಿಳಾ ಕಾಳಜಿ ಅವರ ಆಪ್ತಸಂಬಂಧಿಕರ ಪತ್ನಿಯರನ್ನೂ ಬಿಟ್ಟಿಲ್ಲವಂತೆ!

ಎಷ್ಟೆಂದರೂ ಗಾಡ್‌ಫಾದರ್ ಯಡಿಯೂರಪ್ಪ ಕೂಡ ಹೆಚ್ಚೂಕಮ್ಮಿ ಇದೇ ಸ್ವಭಾವದ, ಇದೇ ಶೈಲಿಯ ಮಹಿಳೋದ್ಧಾರಕನಲ್ಲವೆ? ಶಿಷ್ಯ ಸಿ.ಸಿ. ಪಾಟೀಲರ ರಸಿಕತೆ, ಮಹಿಳಾ ಕಾಳಜಿ, ಅಸಂಖ್ಯಾತ ಮಹಿಳಾಮಣಿಗಳಿಗೆ ಅವರು ಸಲ್ಲಿಸಿದ ಸೇವೆ ಎಲ್ಲವನ್ನೂ ಪರಿಗಣಿಸಿಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಮಂತ್ರಿ ಮಾಡಿದ್ದಾರೆ.

ಪಾಟೀಲರ ಕಾಳಜಿಯಿಂದಾಗಿ ಕಲ್ಯಾಣವಾದ ಮಹಿಳೆಯರೆಷ್ಟು ಮತ್ತು ಅವರಿಗೆ ಪ್ರಾಪ್ತಿಯಾದ ಮಕ್ಕಳೆಷ್ಟು ಎಂಬ ಅಂಕಿಅಂಶವನ್ನೂ ಮಾನ್ಯ ಮಂತ್ರಿಗಳೇ ಕೊಡಬೇಕಲ್ಲವೇ?

❖



ನಂಗೆ ಲೈಟೂ ನೀಲಿದೇ ಬೇಕು...

ಅಯ್ಯೋ ರಾಮ...!! ಇದು ಕಾಮ ಕಮಲ

ಸಂಘ ಪರಿವಾರದ ಬಂಡುಕೋರ ಶ್ರೀರಾಮಸೇನೆಯಂತೂ ಪಬ್‌ಗಳ ಮೇಲೆ ದಾಳಿ ನಡೆಸಿ ಸಿಕ್ಕಸಿಕ್ಕ ಹೆಣ್ಣುಮಕ್ಕಳ ಮೇಲೆ ದಾಳಿ ನಡೆಸುತ್ತದೆ. ಆದರೆ ಸಂಘ ಪರಿವಾರದ ಸರ್ಕಾರದ ಮಂತ್ರಿಗಳಾದರೂ ಎಂಥವರು? ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ಜೊತೆ ಕಾಮಕೇಳಿ ನಡೆಸಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ. ಹಾಲಪ್ಪ ಗೆಳೆಯನ ಪತ್ನಿಯ ಮೇಲೆ ಅತ್ಯಾಚಾರವೆಸಗಿ ಜೈಲುಪಾಲಾದ. ಕೈಗಾರಿಕಾ ಮಂತ್ರಿ ನಿರಾಣಿ ಕೆಲಸ ಕೇಳಿಕೊಂಡು ಬಂದ ಟೀವಿ ವರದಿಗಾರ್ತಿಗೇ ಸೆಕ್ಸ್ ಮೆಸೇಜು ಕಳಿಸಿದ. ಈಗ ಮೂವರು ಮಂತ್ರಿಗಳು ಸದನದಲ್ಲೇ ಕೂತು ಸೆಕ್ಸ್ ಚಿತ್ರ ಸವಿಯುವಷ್ಟು ಸುಧಾರಿಸಿದ್ದಾರೆಂದರೆ ಬಿಜೆಪಿಯ ರಾಮರಾಜ್ಯದ ಪರಿಕಲ್ಪನೆ ಇನ್ನೆಷ್ಟು ಭಯಂಕರ?

• ರಾ. ಸೋಮನಾಥ್

ಒಬ್ಬ ಮಂತ್ರಿ ಗೆಳೆಯನ ಪತ್ನಿಯ ಮೇಲೇ ಅತ್ಯಾಚಾರ ವೆಸಗಿ ಜೈಲು ಪಾಲಾಗಿ ಮಂತ್ರಿ ಪದವಿಯನ್ನೂ ಕಳಕೊಂಡ. ಮತ್ತೊಬ್ಬ ಮಂತ್ರಿ ಯಾರೋ ವೈದ್ಯರೊಬ್ಬರ ಮಗಳನ್ನು ಹಾರಿಸಿಕೊಂಡು ಬಂದು ಡಾಲರ್ಸ್ ಕಾಲನಿಯಲ್ಲಿ ಬಂಗಲೆ ಮಾಡಿ ಇಟ್ಟದ್ದೂ ಅಲ್ಲದೆ ತನ್ನದೇ ಒಡೆತನ ಟಿವಿಗೆ ಕೆಲಸ ಕೇಳಿಕೊಂಡು ಬಂದ ವರದಿಗಾರ್ತಿಗೇ ಸೆಕ್ಸ್ ಮೆಸೇಜುಗಳನ್ನು ಕಳಿಸಿ ಸಿಕ್ಕಿಬಿದ್ದ. ಇನ್ನೊಬ್ಬ ಮಂತ್ರಿ ತನ್ನದೇ ಇಲಾಖೆಯ ಐಎಎಸ್ ಮುಖ್ಯಸ್ಥೆಯ ಜೊತೆ ಚಕ್ಕಂದ ನಡೆಸಿ ತಗುಲಾಕಿಕೊಂಡು ಮಾಜಿಯಾದ. ಮಗದೊಬ್ಬ ಮಂತ್ರಿ ಇದೆಲ್ಲಕ್ಕೂ ಮೊದಲೇ ನರ್ಸ್ ಒಬ್ಬಳ ಜೊತೆ ಕಾಮಕೇಳಿ ನಡೆಸಿ ಕೊನೆಗೆ ಅದೇ ಅರ್ಹತೆಯ ಮೇರೆಗೆ ಮಂತ್ರಿಯೂ ಆದ. ಈಗ ಮೂವರು ಮಂತ್ರಿಗಳು ವಿಧಾನಸಭೆಯ ಕಲಾಪದಲ್ಲೇ ಬ್ಲೂಫಿಲ್ಮ್ ವೀಕ್ಷಿಸಿ ಇಬ್ಬರೂ ಇತಿಹಾಸ ಕಂಡರಿಯದ ಪಾಪವೊಂದರ ಕಾರಣಪುರುಷರಾಗುತ್ತಿದ್ದಾರೆ.

ರಾಜ್ಯದ ಜನತೆ ಎಂತೆಂಥದೋ ಸರ್ಕಾರಗಳನ್ನು ಕಂಡಿದ್ದಾರೆ. ಸತತ ಮೂರು ವರ್ಷಗಳ ಕಾಲ ಭೀಕರ ಬರಗಾಲ ಬಂದು ಜನ ಹಸಿದು ಸಾಯದಿರಲಿ ಎಂದು ಕೂಲಿಗಾಗಿ ಕಾಳು ಯೋಜನೆ ತಂದರೆ ಆ ಕಾಳುಗಳನ್ನೇ ಕದ್ದು ಮಾರಿಕೊಂಡ ಕೃಷ್ಣರ ಸರ್ಕಾರ, ಮುಖ್ಯಮಂತ್ರಿ ಕಚೇರಿಯೇ ವರ್ಗಾವರ್ಗಿಯ ಅಡ್ಡೆಯಾದ ಧರಂಸಿಂಗ್ ಸರ್ಕಾರ, ಅಲೆಕ್ಸಾಂಡರ್ ಎಂಬ ಐಎಎಸ್ ಅಟ್ಟಹಾಸದ ಬಂಗಾರಪ್ಪ ಸರ್ಕಾರ, ಮೋಜು, ಮದಿರೆಯಲ್ಲಿ ಮುಳುಗಿ ಹೋದ ಪಟೇಲ್ ಸರ್ಕಾರ- ಹೀಗೆ ಯಾವ್ಯಾವ ಸರ್ಕಾರ ಗಳು ಯಾವ್ಯಾವ ಕುಖ್ಯಾತಿಗೆ ಸಿಲುಕಿ ಪತನಗೊಂಡವೋ ಆ ಎಲ್ಲಾ ದುರಾಚಾರಗಳನ್ನು ಒಂದು ತಕ್ಕಡಿಯಲ್ಲಿಟ್ಟರೂ ಸದ್ಯದ ಬಿಜೆಪಿ ಸರ್ಕಾರದ ಪಾಪದ ಭಾರವೇ ಭಯಂಕರ ತೂಕವಾಗುತ್ತಿತ್ತು.

ಬಹುಶಃ ಇದೇ ಫೆಬ್ರವರಿ 7 ರ ಮಂಗಳವಾರ ಮಧ್ಯಾಹ್ನ ವಿಧಾನಸಭೆಯಲ್ಲಿ ನಡೆದದ್ದು ಕೇಸರಿ ಪಾಪದ ಪರಮಾವಧಿ!

ಅದು ನಾಡಿನ ಬರಗಾಲ ಮತ್ತು ಉತ್ತರ ಕರ್ನಾಟಕದ ನಿರ್ಗತಿಕರ ದುರ್ಗತಿ ಕುರಿತಂತೆ ನಡೆಯುತ್ತಿದ್ದ ಕಲಾಪ. ಸದನದ ನಿಯಮ 69 ರ ಪ್ರಕಾರ ಜೆಡಿಎಸ್‌ನ ಬಹುತೇಕ ಶಾಸಕರು ನಾಡಿನ ಬರಪರಿಸ್ಥಿತಿ ಕುರಿತಂತೆ ವಿಶೇಷ ಚರ್ಚೆಯಲ್ಲಿ ತೊಡಗಿದ್ದರು. ಶಾಸಕರಾದ ವೆಂಕಟೇಶ್ ರಾವ್ ನಾಡಗೌಡ ಮತ್ತು ತುರುವೇಕೆರೆ ಶಾಸಕ ಎಂ.ಟಿ. ಕೃಷ್ಣಪ್ಪ ರಾಜ್ಯದ ಬರಪರಿಸ್ಥಿತಿಯನ್ನು ಕುರಿತಂತೆ ಸಮಗ್ರ ಮಾಹಿತಿ ನೀಡುತ್ತಿದ್ದರು. ಇಂಥದೊಂದು ಚರ್ಚೆಗೆ ಇವತ್ತಿಗೂ ಭೀಕರ ಬರಗಾಲದಲ್ಲಿ ಬೇಯುತ್ತಿರುವ ಅಥಣಿಯಿಂದ ಗೆದ್ದು ಬಂದ ಸಹಕಾರ ಸಚಿವ ಲಕ್ಷ್ಮಣ ಸವದಿ ಮತ್ತು ಬೆಂಗಾಡಿನಂತಿರುವ ನರಗುಂದದ ಶಾಸಕ ಸಿ.ಸಿ. ಪಾಟೀಲ್ ಸಹಜವಾಗೇ ತಲೆಕೆಡಿಸಿಕೊಳ್ಳಬೇಕಿತ್ತಲ್ಲವೆ?

ಲಕ್ಷ್ಮಣ ಸವದಿ ಸಹಕಾರಿ ಮಂತ್ರಿ ಮತ್ತು ಸಿ.ಸಿ. ಪಾಟೀಲ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ!

ಕಳ್ಳ ನೋಟದ ಸವದಿ

ವಿಧಾನಸಭೆಯ ಅಟ್ಟಣಿಗೆಯಲ್ಲಿದ್ದ ಟೀವಿ ಕ್ಯಾಮರಾಮನ್‌ಗಳು ಮತ್ತು ಪತ್ರಿಕಾ ವರದಿಗಾರರತ್ತ ಪದೇಪದೇ ಅನುಮಾನಾಸ್ಪದವಾಗಿ ನೋಡುತ್ತಾನೆ ಲಕ್ಷ್ಮಣ ಸವದಿ. ಬರಪರಿಸ್ಥಿತಿ ಕುರಿತು ಚರ್ಚೆ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ಹಿಂದಿದ್ದ ಟೀವಿ ವರದಿಗಾರರತ್ತ ತಿರುತಿರುಗಿ ನೋಡಿದಾಗಲೇ ಟೀವಿ ವರದಿಗಾರರಿಗೆ ಏನೋ ಗುಮಾನಿ. ಹಾಗೇ ಕಳ್ಳನೋಟ ಬೀರಿದ ಲಕ್ಷ್ಮಣ ಸವದಿ ತಮ್ಮ ಜೇಬಿನಿಂದ ಐಫೋನ್ ತೆಗೆದು ಅದನ್ನು ಟೇಬಲ್ಲಿನ ಸಂದಿಗೆ ತುರುಕಿ ಆನ್ ಮಾಡುತ್ತಾನೆ. ಏನೋ ಮೆಸೇಜ್ ಓದುವಂತೆ ನೋಡಲಾರಂಭಿಸುತ್ತಾರೆ. ಇದು ಮಹಡಿಯಿಂದ ಕಲಾಪ ವೀಕ್ಷಿಸುತ್ತಿದ್ದ ಸುವರ್ಣಾ ಟೀವಿಯ ರಾಜಕೀಯ ವರದಿಗಾರ ವೀರೇಂದ್ರ ಉಪ್ಪುಂದ ಕುತೂಹಲಕ್ಕೆ ಕಾರಣ ವಾಗುತ್ತದೆ. ಏನೋ ಅನುಮಾನವೆನ್ನಿಸಿ ತಮ್ಮ ಕ್ಯಾಮರಾಮನ್ ಪ್ರಶಾಂತ್‌ಗೆ ಸವದಿ ವೀಕ್ಷಿಸುತ್ತಿದ್ದ ಐಫೋನ್‌ನತ್ತ ಝೂಮ್ ಮಾಡುವಂತೆ ಹೇಳುತ್ತಾರೆ.

ಆ ಸೂಕ್ಷ್ಮಗ್ರಾಹಿ ಕ್ಯಾಮರಾ ಮಂತ್ರಿ ಸವದಿಯ ತಲೆಯನ್ನೂ ಮೀರಿ ಅದರ ಕೆಳಗಿದ್ದ ಟೇಬಲ್ ಸಂದಿಯ ಐಫೋನ್‌ನ ಪರದೆಯನ್ನು ಸ್ಪಷ್ಟವಾಗಿ ಚಿತ್ರೀಕರಿಸುತ್ತಿದ್ದಂತೆ ಅಲ್ಲಿದ್ದ ಟೀವಿಯವರ ಮುಖದಲ್ಲಿ ವಿಲಕ್ಷಣ ಕಳೆ. ಮೊದಲು ವಿದೇಶಿ ಜೋಡಿಯೊಂದು ಅಶ್ಲೀಲ ಕಾಮಕೇಳಿಯಲ್ಲಿ ತೊಡಗಿದ ದೃಶ್ಯ ನೋಡುತ್ತಿದ್ದ ಸವದಿ ತಮ್ಮ ಫೋನ್‌ನ ಪರದೆಯಲ್ಲಿ ವಿವಿಧ ದೃಶ್ಯಾವಳಿಗಳನ್ನು ಒಂದೊಂದು ಸರಿಸುತ್ತಾ ನಿರ್ದಿಷ್ಟ ಒಬ್ಬಳು ಯುವತಿಯ ಚಿತ್ರದ ಮೇಲೆ ಬೆರಳಿಡುತ್ತಾನೆ. ಅದು ಪಕ್ಕಾ ಇಂಡಿಯನ್ ಕಾಮಕೇಳಿ. ಯುವತಿಯೊಬ್ಬಳು ತನ್ನ ಒಂದೊಂದೇ ಉಡುಗೊರೆಯನ್ನು ಕಿತ್ತೆಸೆಯುತ್ತಾ ನರ್ತಿಸುತ್ತಿದ್ದಾಳೆ. ಹಾಗೇ ನರ್ತಿಸುತ್ತಲೇ ಬೆತ್ತಲಾಗುವ ಆಕೆಯ ಜೊತೆ ಮೂರ್ನಾಲ್ಕು ಮಂದಿ ಕಾಮುಕರು ಒಬ್ಬೊಬ್ಬರಾಗಿ ಅಸಹ್ಯಕ್ಕಿಳಿಯುತ್ತಾರೆ.

ಮಂತ್ರಿ ಲಕ್ಷ್ಮಣ ಸವದಿ ಸದನದ ಬರಪರಿಸ್ಥಿತಿ ಕುರಿತ ಚರ್ಚೆಯತ್ತ ರವಷ್ಟೂ ಗಮನಹರಿಸದೇ ಟೇಬಲ್ ಸಂದಿಯಿಂದ ತನ್ನ ಐಫೋನಿನಲ್ಲಿ ಬ್ಲೂಫಿಲ್ಮ್ ವೀಕ್ಷಿಸುತ್ತಿದ್ದರೆ ಪಕ್ಕದಲ್ಲೇ ಕೂತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಸಿ.ಸಿ. ಪಾಟೀಲ್ ಬಾಗಿದ್ದೇ ಸವದಿಯ ಐಫೋನಿನ ದೃಶ್ಯಾವಳಿಯನ್ನು ತಮ್ಮತ್ತ ತಿರುಗಿಸಿಕೊಂಡು ನೋಡುತ್ತಾನೆ. ಅಷ್ಟಕ್ಕೂ ತೃಪ್ತರಾಗದೇ ಅದನ್ನು ಕೆಲಕ್ಷಣ ತಮ್ಮ ಕೈಗೆತ್ತಿಕೊಂಡು ವೀಕ್ಷಿಸುತ್ತಾನೆ. ಹಾಗೇ ಸಿ.ಸಿ. ಪಾಟೀಲ್ ಕೈಗೆತ್ತಿಕೊಂಡು ನೋಡುತ್ತಿದ್ದ ಕಾಮಕೇಳಿ ದೃಶ್ಯಾವಳಿ ತನಗೆಲ್ಲಿ ತಪ್ಪಿಹೋಗುತ್ತೋ ಎಂದು ಆತುರಕ್ಕೆ ಬಿದ್ದ ಲಕ್ಷ್ಮಣ ಸವದಿ ಮತ್ತೆ ಸಿ.ಸಿ. ಪಾಟೀಲರ ಕೈಯಿಂದ ಕಿತ್ತುಕೊಂಡು ಟೇಬಲ್ ಸರದಿಯಲ್ಲಿ ತನ್ನ ತೊಡೆಯ ಮೇಲಿಟ್ಟುಕೊಂಡು ದೃಶ್ಯಾವಳಿಯಲ್ಲಿ ತಲ್ಲೀನರಾಗುತ್ತಾನೆ.

ಕಿತ್ತುಕೊಂಡ ಪಾಟೀಲ

ಐಫೋನ್‌ನ ತೆರೆಮೇಲೆ ನರ್ತಿಸುತ್ತಿದ್ದ ಯುವತಿಯ ಒಂದೊಂದೇ ವಸ್ತ್ರ ಕಮ್ಮಿಯಾಗುತ್ತಿದ್ದಂತೆ ಕಾಮಕೇಳಿಯ ಅಸಹ್ಯವೂ ವಿಪರೀತಕ್ಕೆ ಹೋಗುತ್ತದೆ. ಆದರೆ ಇದು ಪಕ್ಕ ಕೂತಿದ್ದ ಮಂತ್ರಿ ಪಾಟೀಲರನ್ನು ಮತ್ತಷ್ಟು ಉದ್ರೇಕಕ್ಕೀಡು ಮಾಡುತ್ತದೆ. ಅವರು ಮತ್ತಷ್ಟು ಬಾಗಿ ಇಣುಕಿ ಇಣುಕಿ ನೋಡಲಾರಂಭಿಸುತ್ತಾ ನಾಡಿನ ಬರಪರಿಸ್ಥಿತಿ, ರೈತರ ಕಷ್ಟಕಾರ್ಪಣ್ಯ, ಉತ್ತರ ಕರ್ನಾಟಕದ ಬರಪೀಡಿತ ತಾಲ್ಲೂಕುಗಳ ಜನರ ದುರ್ಗತಿ ಮತ್ತು ಸಿಂಧಗಿಯಲ್ಲಿ ಆರೆಸ್ಸೆಸ್ ಪಾಕಿಸ್ತಾನದ ಬಾವುಟ ಹಾರಿಸಿ ಅದನ್ನು ಶ್ರೀರಾಮಸೇನೆಯ ತಲೆಗೆ ಕಟ್ಟಿ ಮಾಡಿದ ಅನಾಚಾರದ ಕುರಿತು ಇಡೀ ಸದನದಲ್ಲಿ ಗಂಭೀರವಾಗಿ ಚರ್ಚೆಯಲ್ಲಿ ತೊಡಗಿದ್ದರೆ ಸಹಕಾರ ಮಂತ್ರಿ ಲಕ್ಷ್ಮಣ ಸವದಿ ಪರಮ ಕೊಳಕು ಕಾಮಕೇಳಿಯನ್ನು ತದೇಕಚಿತ್ತರಾಗಿ ಸವಿಯುತ್ತಿದ್ದಾನೆ. ಪಕ್ಕದಲ್ಲೇ ಕೂತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಸಿ.ಸಿ. ಪಾಟೀಲ್ ಉದ್ರೇಕಗೊಂಡು ಇದನ್ನು ಇಣುಕಿಣುಕಿ ನೋಡುವುದು





ಬಿಜೆಪಿಯಲ್ಲೇ ಈಗಲೂ ಇರುವ ಹೀರೋಗಳು....

ಪೋಲಿ ಪಾಲೇಮಾರ್‌ನ ಅಸಲಿ ಅವತಾರ ಅನಾವರಣ!!

ಪಾಲೇಮಾರ್‌ನ ಲ್ಯಾಂಡ್ ಆಫೀಸಿನಲ್ಲಿದ್ದ ಹುಡುಗಿಯೊಬ್ಬಳು ನೇಣು ಹಾಕಿಕೊಂಡಾಗ, ಇನ್ನಿಬ್ಬರು ಅಪಘಾತದಲ್ಲಿ ಸತ್ತಾಗ ಆತನ ಖಾಸಗಿ ತೆವಲು-ಸಪ್ಲೈ ದಂಧೆ ಬಗ್ಗೆ ತರತರದ ಕತೆ ಕೇಳಿಬಂದಿತ್ತು. ಮಂಗಳೂರಲ್ಲಿ ಡೀವಿ ಮಾಡಿಕೊಂಡಿರುವ ಹಲವು ಬೇನಾಮಿ ಬಿಲ್ಡಿಂಗ್-ಕಾಂಪ್ಲೆಕ್ಸ್ ನಿರ್ಮಾಣ- ಖರೀದಿಯಲ್ಲಿ ಪಾಲೇಮಾರ್ 'ಪವಾಡ' ಅಡಗಿದೆ. ಡೀವಿ ಮಗನೂ ರಿಯಲ್ ಎಸ್ಟೇಟ್ ವ್ಯವಹಾರಸ್ಥ. ಈ ಕಿರಿಯ ಭೂ ವ್ಯಾಪಾರಿಗೆ ಹಿರಿಯ ಲ್ಯಾಂಡ್ ಲಿಂಕ್ ಡಾನ್ ಪಾಲೇಮಾರ್‌ನೊಂದಿಗೆ ಬಿಸಿನೆಸ್ ಸಂಬಂಧವಿದೆ.

• ನಹುಷ

ಅವಿಭಜಿತ ದಕ್ಷಿಣ ಕನ್ನಡದ ಜನರು ನಾಚಿಕೆ-ಅಸಹ್ಯದಿಂದ ತಲೆತಗ್ಗಿಸಿ ಕುಂತಿದ್ದಾರೆ! ಇಂಥ ಹೀನಾತಿಹೀನ ಸುಳಿಯ ಆಸಾಮಿಯನ್ನಾ ನಾವು ಶಾಸಕನಾಗಿ ಮಾಡಿದ್ದು? ಆತ ಪವಿತ್ರ ವಿಧಾನಸಭೆಯಲ್ಲೇ ಕಾಮಕಲಾಪ ನಡೆಸುವ ಭಾಗ್ಯಕ್ಕಾ ಮಂತ್ರಿ ಮಾಡಿದ್ದು? ಎಂದು ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಅಷ್ಟಕ್ಕೂ ಕಂಡ-ಕಂಡಲ್ಲಿ ಕೃಷ್ಣಾವತಾರ ಪ್ರದರ್ಶಿಸುತ್ತಿದ್ದ ಪೋಲಿ ಪಾಲೇಮಾರ್ ಅಧಿವೇಶನದಲ್ಲಿ ಮಿತ್ರ ಮಂತ್ರಿಗಳಿಗೆ ನೀಲಿ ಚಿತ್ರ ನೀಡಿ ಸಿಕ್ಕಿಬಿದ್ದಿದ್ದರಲ್ಲಿ ಆಶ್ಚರ್ಯವೇನಿಲ್ಲ! ಆತನ ಪೂರ್ವಾಶ್ರಮದ ಅಸಲಿ ವರಸೆಯೊಂದು ಅಧಿಕೃತವಾಗೇ ಅನಾವರಣ ಆಗಿದೆಯಷ್ಟೇ!! ಚಟದಾರ ಸಚಿವದ್ವಯರಾದ ಲಕ್ಷ್ಮಣ ಸವದಿ ಮತ್ತು ಸಿ.ಸಿ.ಪಾಟೀಲರಿಗೆ ಅಧಿವೇಶನದಲ್ಲಿ 'ಮೂಡ್' ಅರಳಿಸಲು ವಸ್ತು ಒದಗಿಸಿದ ಪಾಲೇಮಾರನ ಮೊಬೈಲ್‌ನಲ್ಲಷ್ಟೇ ಅಲ್ಲ, ರಕ್ತ-ಮಾಂಸದ ಕಣ-ಕಣದಲ್ಲೂ ಇಂಥ ತಲೆಹಿಡುಕ ತೆವಲುಗಳೇ ತುಂಬಿಕೊಂಡಿವೆ.

ಮಂಗಳೂರು ಉತ್ತರ ಕ್ಷೇತ್ರದಲ್ಲಿ ಹಡಬೆ ಹಣ ಮತ್ತು ಹಿಂದುತ್ವದ ಹರಾಮಿ ಹಿಕಮತ್ತಿನಿಂದ ಎರಡೆರಡು ಬಾರಿ ಶಾಸಕನಾದ ಪಾಲೇಮಾರ್‌ಗೆ ಸಪ್ಲೈ ರಾಜಕಾರಣವೇ ಸಕಲ ಕ್ಯಾಲಿಬರ್! ಒಂದು ಕಾಲದಲ್ಲಿ ಟ್ಯಾಕ್ಸಿ ಡ್ರೈವರ್ ಆಗಿದ್ದ ಈ ಗೋಲ್‌ಮಾಲ್ ಗಿರಾಕಿ ತೊಗಲೋದ್ಯಮದ ಲಾಡ್ಜ್ ಒಂದರ ಮುಂದೆ ನಿಂತು ಗಿರಾಕಿ ಕುದುರಿಸುವ ಜಂಜಾಟದ ಜೀವನ ಸಾಗಿಸುತ್ತಿದ್ದ. ಆ ನಂತರ ಬಸ್ ಏಜೆಂಟನೂ ಆದ ಪಾಲೇಮಾರ್ ಖತರ್‌ನಾಕ್ ರಿಯಲ್ ಎಸ್ಟೇಟ್ ಉದ್ಯಮಿಯಾದ ಕತೆ ರೋಚಕವಾಗಿದೆ. ಮರ್ಕಟ ಸ್ವಾಮಿ ಎಂಬ ಬೂಟಾಟಿಕೆ ಕಾವಿ ಕ್ರಿಮಿಯೊಬ್ಬ ಮಾಟ-ಮಂತ್ರ-ತಂತ್ರಗಾರಿಕೆ ಪಾಲೇಮಾರನ ಭೂ ಅವ್ಯವಹಾರದಲ್ಲಿ ನಿರ್ಣಾಯಕ ಪಾತ್ರವಾಡಿದ್ದು ಮಂಗಳೂರಲ್ಲಿ ಎಂಥ ಗಾಂಪನಿಗೂ ಗೊತ್ತಿರುವ ರಹಸ್ಯ. ಈ ಮರ್ಕಟ ಸ್ವಾಮಿ ಅಮಾಯಕರಲ್ಲಿ ದೈವ-ಭೂತ-ನಾಗದ ಭೀತಿ ಬಿತ್ತಿ ಅವರು ತಮ್ಮ ಬೆಲೆಬಾಳುವ



ಜಾಗವನ್ನು ಪಾಲೇಮಾರ್‌ಗೆ ಅಗ್ಗದಲ್ಲಿ ಮಾರುವಂತ ಸನ್ನಿವೇಶ ಸೃಷ್ಟಿಸುತ್ತಿದ್ದ. ಪಾಲೇಮಾರ್‌ನ ಲ್ಯಾಂಡ್ ಆಫೀಸಿನಲ್ಲಿದ್ದ ಹುಡುಗಿಯೊಬ್ಬಳು ನೇಣು ಹಾಕಿಕೊಂಡಾಗ, ಇನ್ನಿಬ್ಬರು ಅಪಘಾತದಲ್ಲಿ ಸತ್ತಾಗ ಆತನ ಖಾಸಗಿ ತೆವಲು-ಸಪ್ಲೈ ದಂಧೆ ಬಗ್ಗೆ ತರತರದ ಕತೆ ಕೇಳಿಬಂದಿತ್ತು.

ಆ ಬಳಿಕ ಲೇಔಟ್-ಬಿಲ್ಡರ್ ಆದ ಪಾಲೇಮಾರ್ ಸಂಘ ಪರಿವಾರದ ಹಿಂದುತ್ವದ ಹಿಂಸೋತ್ಸವಕ್ಕೆಲ್ಲ ಫೈನಾನ್ಷಿಯರ್ ಆಗಿಹೋದ. ಬಿಜೆಪಿಯ ದಿಲ್ಲಿ ಮಾಂಡಲೀಕರಲ್ಲಿ ಒಬ್ಬನಾದ ಅನಂತಕುಮಾರನ ಹುಡ್ಕೋ ಸ್ಕ್ಯಾಂಡಲನ್ ಪವರ್‌ಫುಲ್ ಫಲಾನುಭವಿ ಈ ಪಾಲೇಮಾರ್. ಹುಡ್ಕೋದಲ್ಲಿ ಕೋಟ್ಯಂತರ ಹೊಡೆದುಕೊಂಡಿದ್ದ ಪಾಲೇಮಾರ್‌ಗೆ ಆತನ

ಚಪಲ ತಾಳಲಾರದೆ ತಾನೇ ಕಿತ್ತುಕೊಂಡು ಿಯನ್ನು ಸವಿಯುತ್ತಾನ!

ನದ ಪಾವಿತ್ರ್ಯ ಹಾಳಾಗಲಿ, ಬಿಜೆಪಿಯ ಸೋಕಾಲ್ಡ್ . ಆರೆಸ್ಸೆಸ್ ಸಂಸ್ಕೃತಿ ಹಿಂದುತ್ವ, ರಾಮರಾಜ್ಯದ ಎಲ್ಲಾ ಮಣ್ಣಾಂಗಟ್ಟಿ. ಕನಿಷ್ಠ ತಮ್ಮ ಕ್ಷೇತ್ರದ ಸ್ಥಿತಿ, ತಮಗೆ ಓಟು ಕೊಟ್ಟ ಜನರ ಯಾದರೂ ಮನಸೆಳೆಯಬೇಕಿತ್ತಲ್ಲವೆ.

ತ್ರಿಗಳಿಬ್ಬರು ಇಂಥಾದ್ದೊಂದು ವಿಕೃತ ದೃಶ್ಯಾವಳಿ



ಟೀವಿ ಕ್ಯಾಮೆರಾದಲ್ಲಿ ಸೆರೆಯಾಗುತ್ತಿದ್ದಂತೆ ಕೇವಲ ಾಳಗೆ ಟೀವಿ ಪರದೆಯ ಮೇಲೆ ಬಿಜೆಪಿ ಸರ್ಕಾರದ ಹರಾಜಾಗಿತ್ತು. ಜನ ದಂಗಾಗಿಹೋದರು. ಸುದ್ದಿ ದ ಬಾಯಿಗೆ ಹೇಗೆ ಹರಡಿತೆಂದರೆ ಕೇವಲ ಟೆಯೊಳಗೆ ಕರ್ನಾಟಕದ ಬಹುತೇಕ ಟೀವಿ ಳ ಮೇಲೆಲ್ಲ ಕನ್ನಡದ ಸುದ್ದಿ ಚಾನಲ್ಲುಗಳೇ ುತ್ತಿದ್ದವು. ಅತ್ತ ಟೀವಿ ನಿರೂಪಕರು ಈ ಬಗ್ಗೆ ಕೇಳಿದರೆ ಸವದಿ ಮೊದಲೇ ಫೋಣಿಸಿಟ್ಟಿದ್ದ ಕಥೆಯೆ ಟ್ಟ. ಅದು ಎಷ್ಟೊಂದು ಬಾಲಿಶವಾಗಿತ್ತೆಂದರೆ; ನಮ್ಮ ಯಲ್ಲಿ ಉಡುಪಿಯಲ್ಲಿ ನಡೆದ ರೇವ್ ಪಾರ್ಟಿ ಬಗ್ಗೆ ಧ ಪಕ್ಷಗಳು ಚರ್ಚೆ ಮಾಡಿಬಿಟ್ರೆ, ಅದಕ್ಕೆ ಬೇಕಲ್ವಾ? ಅದಕ್ಕೇ ಇರಾನ್ ದೇಶದಲ್ಲಿ ಇಂಥ ಗಳು ಏನಾಗ್ತದೆ ಅಂತ ನಾನೂ ತಿಳಕೋತಾ ಇದ್ದೆ. ಯುವಕರು ಯುವತಿಯೊಬ್ಬಳ ಮೇಲೆ ರೇಪ್ ರೆ. ಆನಂತರ ಆಕೆಯ ರುಂಡ ಕತ್ತರಿಸಿ ಕೊಲೆ ರೆ. ಹಾಗೇ ರೇಪ್ ಮಾಡಿ ಕೊಲೆ ಮಾಡಿದವರನ್ನು ವಲ್ಲಿ ಪೊಲೀಸರು ನಡುರಸ್ತೆಯಲ್ಲಿ ನಿಲ್ಲಿಸಿ ಕಲ್ಲು ಯುತ್ತಾರೆ. ಆ ನಂತರ ಅವರನ್ನೂ ನಡುರಸ್ತೆಯಲ್ಲಿ ತಲೆ ತ್ತಾರೆ. ಇದನ್ನೇ ನಾನು ನೋಡ್ತಾ ಇದ್ದೆ. ಅದರಲ್ಲಿ ಏನು ಈ ಥರದ ದೃಶ್ಯವೊಂದು ನನ್ನ ಬಳಿ ಇದೆ ಎಂದು ಲೇಮಾರರು ತೋರಿಸಿ ಅದನ್ನು ನನ್ನ ಮೊಬೈಲಿಗೆ . ಅದು ಹೇಗಿದೆ ಅಂತ ನಾನು ಅಸೆಂಬ್ಲಿಯಲ್ಲಿ ಕೂತು ಇದ್ದೆ. ಇದರಲ್ಲಿ ಯಾವುದೇ ತಪ್ಪಿಲ್ಲ.....!

ಇರಾನಿನ ದೃಶ್ಯವೇ?

ಮ ತನ್ನ ಕಾಮಕಲಾಪದ ಕುರಿತು ಸವದಿ ನೀಡಿದ ಿ. ಜೊತೆಗೇ ಸಿ.ಸಿ. ಪಾಟೀಲ್ ಕೂಡ ನಾವು ರೇವ್ ಯ ದೃಶ್ಯಾವಳಿಯನ್ನು ನೋಡ್ತಾ ಇದ್ವಿ. ವಿದೇಶದಲ್ಲಿ ದೆ ಏನೆಲ್ಲಾ ಅನಾಹುತವಾಗ್ತಾ ಇದೆ ಅಂತ ್ಳೋದಕ್ಕೆ ನಾನೂ ಕೂಡ ಸವದಿಯ ಜೊತೆಗೆ ಅದನ್ನ ತ್ತಿ ಇದ್ದೆ. ಅಧ್ಯಯನದ ದೃಷ್ಟಿಯಿಂದ ನೋಡಿದ್ರೆ ಅದರಲ್ಲಿ ತಪ್ಪೇನಿದೆ? ಎಂದು ಬಿಟ್ಟ.

ಅಕ್ಕಪಕ್ಕ ಕೂತು ಸೆಕ್ಸ್ ಫಿಲಂ ಸವಿದವರಿಬ್ಬರೂ ನೀಡಿದ ಈ ಪ್ರತಿಕ್ರಿಯೆಯೇ ಅವರ ಪಾಪಕ್ಕೆ ಪುರಾವೆಯಂತಿತ್ತು. ಸಚಿವದ್ವಯರ ಈ ಮಾತಿನ ಸತ್ಯಾಸತ್ಯತೆಯನ್ನು ಕೆದಕ ಹೊರಟ ಟೀವಿಗಳು ತಮ್ಮ ಕ್ಯಾಮೆರಾ ಸೆರೆಹಿಡಿದ ದೃಶ್ಯಾವಳಿಯನ್ನು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅದೊಂದು ಶುದ್ಧ ಭಾರತೀಯ ಕಾಮಾಲಾಪನೆಯಾಗಿತ್ತು. ಸವದಿಯ ಮೊಬೈಲಿನಲ್ಲಿದ್ದ ಆ ಯುವತಿಯ ಚಿತ್ರವನ್ನು ಮತ್ತಷ್ಟು ಕೆದಕಿದ ಯಾರಿಗಾದರೂ ಯೂಟ್ಯೂಬ್‌ನಲ್ಲಿದ್ದ ಅದರ ಅಸಲೀ ವೀಡಿಯೋ ಸಿಕ್ಕಿಬಿಡುತ್ತಿತ್ತು. ಇರಾನಿನಲ್ಲಿ ಯಾರಾದರೂ ಹೆಣ್ಣುಮಕ್ಕಳು ಸೀರೆ, ರವಿಕೆ ತೊಡುವುದುಂಟಾ? ಕಾಮ ಕೇಳಿಯ ದೃಶ್ಯದಲ್ಲಿದ್ದ ಯಾವ ಪುರುಷನೂ ಇರಾನಿಯಂತಿರಲಿಲ್ಲ. ಹಾಗೊಮ್ಮೆ ಭಾರತೀಯ ಕಾಮುಕರು ಸೀರೆ ತೊಟ್ಟಿದ್ದ ಆ ಯುವತಿಯನ್ನು ಇರಾನ್ ದೇಶಕ್ಕೆ ಕರೆದೊಯ್ದು ಅಲ್ಲಿ ಮೆರೆದ ತಮ್ಮ ಪೌರುಷದ ವೀಡಿಯೋ ತೆಗೆದು ಈ ದೇಶದಲ್ಲಿ ಇಂಟರ್‌ನೆಟ್ಟಿಗೆ ಬಿಟ್ಟರೆಂದಿಟ್ಟುಕೊಂಡರೂ ಅದು ಸಾಧ್ಯವೇ? ಈ ಪುರುಷಾರ್ಥಕ್ಕೆ ಯಾರಾದರೂ ಏಕೆ ಇರಾನ್ ದೇಶಕ್ಕೆ ಹೋಗುತ್ತಾರೆ?

ಸವದಿಯ ಕತೆ ಎಷ್ಟೊಂದು ಹಾಸ್ಯಾಸ್ಪದವಾಗಿತ್ತೆಂದರೆ ಇರಾನ್, ಅತ್ಯಾಚಾರ, ಕೊಲೆ, ಜನ ಕಲ್ಲು ಹೊಡೆಯುವುದು, ನಡುರಸ್ತೆಯಲ್ಲಿ ಕೊಲ್ಲುವುದು ಯಾವುದೂ ಆ ವೀಡಿಯೋದಲ್ಲಿ ಇಲ್ಲವೇ ಇಲ್ಲ. ಅದೇ ಹೊತ್ತಿಗೆ ಮತ್ತೊಬ್ಬ ಮಂತ್ರಿ ಕೃಷ್ಣ ಪಾಲೇಮಾರ್ ನಾನು ಸವದಿಯ ಮೊಬೈಲಿಗೆ ಆ ದೃಶ್ಯ ಕಳಿಸಿಯೇ ಇಲ್ಲ. ಸವದಿ ಬಳಸಿದ್ದು ನನ್ನ ಮೊಬೈಲೇ ಅಲ್ಲ ಎಂದು ಇನ್ನೊಂದು ಹೇಳಿಕೆ ಕೊಟ್ಟ. ಇದು ಕೆಲವೇ ಕ್ಷಣದಲ್ಲಿ ದೇಶದ ಎಲ್ಲಾ ನ್ಯೂಸ್ ಚಾನಲ್‌ಗಳಲ್ಲಿ ಸುದ್ದಿಯಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಗಡ್ಕರಿಯೇ ತಡಬಡಾಯಿಸಿಬಿಟ್ಟರು.

ಬೀದರ್‌ನಲ್ಲಿದ್ದ ಯಡಿಯೂರಪ್ಪ, ಚಿಕ್ಕಮಗಳೂರಿನಲ್ಲಿದ್ದ ಸಿ.ಎಂ. ಸದಾನಂದ ಗೌಡ ಮತ್ತು ಶಿವಮೊಗ್ಗದಲ್ಲಿದ್ದ ಈಶ್ವರಪ್ಪ ತಮ್ಮೆಲ್ಲಾ ಪ್ರವಾಸವನ್ನು ಮೊಟಕುಗೊಳಿಸಿದ್ದೇ ಬೆಂಗಳೂರಿಗೆ ಧಾವಿಸಿಬರುತ್ತಿದ್ದರೆ, ಮತ್ತೊಂದೆಡೆ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಸವದಿಯ ಮನೆಗೆ ದಾಳಿಯಿಟ್ಟರು. ಅಲ್ಲಿಗೆ ಮೂವರೂ ಸಚಿವರ ಹಣೆಬರಹ ನಿಗದಿಯಾಗಿತ್ತು.

ಹಾಲಪ್ಪ ಗೆಳೆಯನ ಪತ್ನಿಯ ಮೇಲೇ ಅತ್ಯಾಚಾರವೆಸಗಿದರೆ ಸವದಿ ಮತ್ತು ಪಾಟೀಲ್ ಆ ಕೆಲಸವನ್ನು ಪ್ರಜಾತಂತ್ರದ ಮೇಲೇ ಎಸಗಿದ್ದರು. ಇಲ್ಲಿ ಬಯಲಾದ ಮತ್ತೊಂದು ಸತ್ಯವೆಂದರೆ ಬ್ಲೂಫಿಲ್ಮ್ ವೀಕ್ಷಣೆಗೆ ಬಳಸಿದ್ದು ಮತ್ತೊಬ್ಬ ಮಂತ್ರಿ ಪಾಲೇಮಾರ್‌ನ ಐಫೋನ್‌ನ್ನು!



ಇದು ಕಾಮ ಕಮಲ

ಮಂತ್ರಿ ಪಾಲೇಮಾರ್ ತನ್ನ ಮೊಬೈಲಿನಲ್ಲಿ ಈಪಾಟಿ ಬ್ಲೂಫಿಲ್ಮುಗಳನ್ನು ಏಕೆ ಸಂಗ್ರಹಿಸಿ ಇಟ್ಟುಕೊಂಡಿದ್ದ? ಇಂಥ ಸೆಕ್ಸ್ ಚಿತ್ರಗಳನ್ನು ನೋಡಲೆಂದೇ ದುಬಾರಿಯ ಐಫೋನನ್ನು ಪಾಲೇಮಾರ್ ಬಳಸುತ್ತಿದ್ದನೆ? ತನ್ನ ಇಲಾಖೆಯ ಆಗುಹೋಗುಗಳು, ಅಂಕಿಅಂಶಗಳ ಬದಲಿಗೆ ಇಂಥ ಕಾಮಕೇಳಿಯ ದೃಶ್ಯಗಳನ್ನೇ ಹೆಕ್ಕಿ ಜೋಪಾನ ಮಾಡಿದ್ದ ಪಾಲೇಮಾರ್ ಅಭಿರುಚಿ, ಆಸಕ್ತಿ ವಿಕೃತಿ ಇನ್ನೆಂಥದ್ದು?

ವಿಪರ್ಯಾಸವೆಂದರೆ ಈ ಮೂವರೂ ಮಂತ್ರಿಗಳಿಗೆ ಮದುವೆಯಾದ ಮಕ್ಕಳಿದ್ದಾರೆ. ಅದರಲ್ಲೂ ಸವದಿ ಮತ್ತು ಪಾಟೀಲ್ ತಮ್ಮಿಬ್ಬರು ಹೆಣ್ಣುಮಕ್ಕಳ ಮದುವೆಯನ್ನು ಮುಗಿಸಿದ್ದಾರೆ. ವೀಕ್ಷಿಸುತ್ತಿದ್ದ ಸೆಕ್ಸ್ ಚಿತ್ರದಲ್ಲಿ ಬೆತ್ತಲಾಗುವ ಆ ಯುವತಿ ಕೂಡ ಅವರ ಮಕ್ಕಳ ವಯಸ್ಸಿನವಳೆ. ಯಾರೋ ಕಾಂಗ್ರೆಸ್-ಜೆಡಿಎಸ್ ಇತ್ಯಾದಿ ಪಕ್ಷಗಳವರು ಈ ಕೃತ್ಯವೆಸಗಿದ್ದರೆ, ಆ ಮಾತು ಬೇರೆ. ಆದರೆ ಈ ಮೂವರೂ ಭಾರತೀಯ ಸಂಸ್ಕೃತಿ, ಹಿಂದೂತ್ವ, ಆರೆಸ್ಸೆಸ್ ಆದರ್ಶ, ರಾಮರಾಜ್ಯದ ಗುರಿ ಹೊತ್ತ ಸಂಘ ಪರಿವಾರದ ಮಂತ್ರಿಗಳು. ಹೆಣ್ಣೆಂದರೆ ಸೀತಾಮಾತೆ ಎಂದೇ ಆರೆಸ್ಸೆಸ್ ಪ್ರತಿಪಾದಿಸುತ್ತದೆ. ಭಜರಂಗ ದಳ ಪ್ರತಿ ವ್ಯಾಲಂಟೈನ್ಸ್ ಡೇ ಅಂದರೆ ಪ್ರೇಮಿಗಳ ದಿನಾಚರಣೆಯಂದು ಜೊತೆಜೊತೆ ಕಾಣಿಸಿಕೊಂಡರೂ ಸಾಕು ಆ ಜೋಡಿಗಳ ಮೇಲೆ ಹಲ್ಲೆ ನಡೆಸುತ್ತದೆ.

ಇನ್ನು ಸಂಘ ಪರಿವಾರದ ಬಂಡುಕೋರ ಶ್ರೀರಾಮಸೇನೆಯಂತೂ ಪಬ್‌ಗಳ ಮೇಲೆ ದಾಳಿ ನಡೆಸಿ ಸಿಕ್ಕಸಿಕ್ಕ ಹೆಣ್ಣುಮಕ್ಕಳ ಮೇಲೆ ದಾಳಿ ನಡೆಸುತ್ತದೆ. ಆದರೆ ಸಂಘ ಪರಿವಾರದ ಸರ್ಕಾರದ ಮಂತ್ರಿಗಳಾದರೂ ಎಂಥವರು? ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ಜೊತೆ ಕಾಮಕೇಳಿ ನಡೆಸಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ. ಹಾಲಪ್ಪ ಗೆಳೆಯನ ಪತ್ನಿಯ ಮೇಲೆ ಅತ್ಯಾಚಾರವೆಸಗಿ ಜೈಲುಪಾಲಾದ. ಕೈಗಾರಿಕಾ ಮಂತ್ರಿ ನಿರಾಣಿ ಕೆಲಸ ಕೇಳಿಕೊಂಡು ಬಂದ ಟೀವಿ ವರದಿಗಾರ್ತಿಗೇ ಸೆಕ್ಸ್ ಮೆಸೇಜು ಕಳಿಸಿದ. ಈಗ ಮೂವರು ಮಂತ್ರಿಗಳು ಸದನದಲ್ಲೇ ಕೂತು ಸೆಕ್ಸ್ ಚಿತ್ರ ಸವಿಯುವಷ್ಟು ಸುಧಾರಿಸಿದ್ದಾರೆಂದರೆ ಬಿಜೆಪಿಯ ರಾಮರಾಜ್ಯದ ಪರಿಕಲ್ಪನೆ ಇನ್ನೆಷ್ಟು ಭಯಂಕರ?

ಸದ್ಯ ಬಿಜೆಪಿ ಮೂಲಗಳೇ ಹೇಳುವಂತೆ ಪಾಲೇಮಾರ್ ಹೊರತಾಗಿ ಸಿ.ಸಿ. ಪಾಟೀಲ್ ಮತ್ತು ಸವದಿ ಇಬ್ಬರೂ ಯಡಿಯೂರಪ್ಪನವರ ಪಕ್ಕಾ ಬೆಂಬಲಿಗರು. ತನ್ನ ಗಾದಿ ಮೇಲೆ ಕಣ್ಣಿಟ್ಟ ಯಡ್ಡಿಯ ಇಬ್ಬರು ಬಂಟರನ್ನು ಸಚಿವ ಸಂಪುಟದಿಂದ ಯಾವುದೇ ತಲೆನೋವಿಲ್ಲದೇ ತೊಲಗಿಸಿದ ಸಿ.ಎಂ. ಸದಾನಂದ ಗೌಡ ಒಳಗೊಳಗೇ ಖುಷಿಪಟ್ಟರೆ, ಸದಾನಂದ ಗೌಡರ ಕ್ಲೀನ್ ಇಮೇಜ್‌ಗೆ ಈ ಮೂಲಕ ಅಂತರರಾಷ್ಟ್ರೀಯವಾಗಿ ಕಳಂಕ ಬಂತಲ್ಲ ಎಂದು ಯಡ್ಡಿಗೂ ಒಳಗಿಂದೊಳಗೇ ಸಂತೋಷವಂತೆ. ಇನ್ನು ರಾಜ್ಯಾಧ್ಯಕ್ಷ ಈಶ್ವರಪ್ಪ ಯಡ್ಡಿ ಮತ್ತು ಸದಾನಂದ ಗೌಡ ಇಬ್ಬರ ಹೆಸರಿಗೂ ರಾಡಿ ಅಂಟಿಕೊಂಡಿದ್ದು ಎತ್ತಿಂದೆತ್ತ ಬಂದರೂ ತನಗೇ ಲಾಭ ಎಂದು ಲೆಕ್ಕ ಹಾಕುತ್ತಿದ್ದಾರಂತೆ. ಸ್ಪೀಕರ್ ಬೋಪಯ್ಯ ತನ್ನ ವಿರುದ್ಧ ಸುಪ್ರೀಂಕೋರ್ಟ್ ಹಾಕಿದ ಛೀಮಾರಿಯಿಂದ ಪಾರಾಗಲು ಈ ಮೂವರು ಮಂತ್ರಿಗಳನ್ನು ಸದನ ದಿಂದ ಹೊರಗಿಡುವ ಮೂಲಕ ವಿರೋಧ ಪಕ್ಷಗಳನ್ನು ಮೆಚ್ಚಿಸಲು ಇದೇ ಸುವರ್ಣಾವಕಾಶವೆಂದು ಖುಷಿಪಟ್ಟರೆ, ಮಂತ್ರಿ ರೇಣುಕಾಚಾರ್ಯ ಮತ್ತು ಹಾಲಪ್ಪ ಇಬ್ಬರೂ ತಮ್ಮ ಜೊತೆ ಇನ್ನೂ ಮೂವರು ಸೇರಿಕೊಂಡರಲ್ಲ ಎಂದು ಹಾಲು ಕುಡಿಯುತ್ತಾರೆ!





ಕೇಸರಿ ಕೆಸರಲ್ಲಿ ಅರಳಿದ ಕಮಲಕ್ಕೆ ಈಗ ಕಾಮದ ದುರ್ಗಂಧ!

✿

ು 'ತಥಾಸ್ತು' ಅಂದಿದ್ದರಂತೆ! ಹಾಗೆಯೇ ಅಷ್ಟೂ ಪಕ್ಷದ ರಂಗೀಲಾ ರಣಿಗಳ ಗೆಣೆಗಾರಿಕೆಯೂ ಆತ ತೊಗಲು ತಂತ್ರದಿಂದಲೇ ಸಿಕೊಂಡಿದ್ದ. ಕರಾವಳಿ ಬಿಜೆಪಿ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ ಕೃಪಾಶೀರ್ವಾದವೂ ಪಾಲೇಮಾರ್‌ಗೆ ಕುರುಡು ಕಾಂಚಾಣ ಯಿಂದಲೇ ದಕ್ಕಿತ್ತು.

ಾವಾಗ ಕಲ್ಲಡ್ಕರ ಹಿಂದೂತ್ವದ ಅಭಿಯಾನಕ್ಕೆಲ್ಲ ಪಾಲೇಮಾರ್ ತನ್ನ ಸು ಹರಿಸತೊಡಗಿದನೋ ಆಗಾತ ಬಿಜೆಪಿಯ ಬೆಲೆಬಾಳುವ ಮಂತ್ರಿಯೂ ಆಗಿಹೋದ. ಹಿಂದುಳಿದ ರಾಮಕ್ಷತ್ರಿಯ (ಶೇರುಗಾರ) ಾಯದ ಪಾಲೇಮಾರ್ ಕಲ್ಲಡ್ಕ ಭಟ್ಟನ ಪಾದಪೂಜೆ ಮಾಡಿಯೇ ಡು ಬಾರಿ ಬಿಜೆಪಿ ಟಿಕೆಟ್ ಪಡೆದು ಧನಾಧಾರಿತ ರಾಜಕಾರಣ ಮಾಡಿ ಗಿರುವಾತ. ಅದೇ ಹೊತ್ತಿಗೆ ಮಂಗಳೂರು ಎಂಪಿ ಆಗಿದ್ದ-ದಿಲ್ಲಿ ದೋಸ್ತಿಯಿದ್ದ ಡಿ.ವಿ. ಸದಾನಂದ ಗೌಡರ ಅಚ್ಚುಮೆಚ್ಚಿನ ಾಯಿ ಆಗಿದ್ದ. ರಾಜಕೀಯವಾಗಷ್ಟೇ ಅಲ್ಲ ವ್ಯವಹಾರಿಕ ನಂಟೂ ಮಾರ್-ದೀವಿ ಮಧ್ಯದಲ್ಲಿತ್ತು. ಮಂಗಳೂರಲ್ಲಿ ದೀವಿ ಕೊಂಡಿರುವ ಹಲವು ಬೇನಾಮಿ ಬಿಲ್ಡಿಂಗ್-ಕಾಂಪ್ಲೆಕ್ಸ್ ನಿರ್ಮಾಣ- ಯಲ್ಲಿ ಪಾಲೇಮಾರ್ 'ಪವಾಡ' ಅಡಗಿದೆ. ದೀವಿ ಮಗನೂ ರಿಯಲ್ ವ್ಯವಹಾರಸ್ಥ. ಈ ಕಿರಿಯ ಭೂ ವ್ಯಾಪಾರಿಗೆ ಹಿರಿಯ ಲ್ಯಾಂಡ್ ದಾದಾ ಪಾಲೇಮಾರ್‌ನೊಂದಿಗೆ ಬಿಸಿನೆಸ್ ಸಂಬಂಧವಿದೆ.

ೀವಿ ಇಲೆಕ್ಷನ್‌ಗೆ ನಿಂತಾಗೆಲ್ಲ ಪಾಲೇಮಾರ್ ದೇಣಿಗೆ ನೀಡೋದು . ಹಿಂದೂ ಗ್ಯಾಂಗುಗಳಿಗೆ-ಬಿಜೆಪಿಗೆ ಹಣದ ಅಡಚಣೆಯಿದ್ದಾಗ ಮಾರ್ ಹಣ ಹರಿಸುತ್ತಿದ್ದಂತೆಯೇ ದೀವಿಗೆ ಆರ್ಥಿಕ ಕೊರತೆಯಿದ್ದಾಗಲೂ ಧಾರಾಳತನ ತೋರಿಸುತ್ತ ಬಂದಿದ್ದ. ಹೀಗಾಗಿ ದೀವಿಗೆ ಕನ್ನಡದಲ್ಲಿ ಪಾಲೇಮಾರ್‌ನಷ್ಟು ಪ್ರೀತಿಯ ಪೂಜಾರಿ ಮತ್ತೊಬ್ಬನಿಲ್ಲ. ಪಾಲೇಮಾರ್‌ನನ್ನು ಯಡ್ಡಿ ಕ್ಯಾಬಿನೆಟ್‌ಗೆ ಸೇರಿಸಿದ್ದೇ ದೀಪಿ ಸ್ಟ್ರಾಟಜಿ. ಕಲ್ಲಡ್ಕದ ಕೃಪಾಕಟಾಕ್ಷ, ಅಂದು ಪಾಲೇಮಾರ್ ಹರ ಆಣಿಗೊಳಿಸಿದ್ದೇ ದೀಪಿ.

ಮೂರ್ಮೂರು ಬಾರಿ ಶಾಸಕನಾಗಿದ್ದ ಮಂಗಳೂರಿನ ಕೊಂಕಣಿ ಯೋಗೀಶ್ ಭಟ್ಟ ಮತ್ತು ಸುಳ್ಯದ ಬಲಿತ ದಲಿತ ಅಂಗಾರನಿ ವಂಚಿಸಿ ಪೆದ್ದು ಪಾಲೇಮಾರ್‌ಗೆ ಮಂತ್ರಿಗಿರಿ ಭಾಗ್ಯ ಬಂದಿದ್ದರ ಹಿಂದೆ ದೀವಿ ಮಹಿಮೆಯಿತ್ತು.

ಗ್ರಾಮ ಪಂಚಾಯತ್‌ದ ಮೆಂಬರಿಗೂ ಯೋಗ್ಯತೆಯಿಲ್ಲದ ಪಾಲೇಮಾರ್ ಮಂತ್ರಿಯಾಗಿದ್ದು ದಕ್ಷಿಣ ಕನ್ನಡದ ದುರಂತವೆಂದೇ ಅಂದು ಜನ ಮಾತಾಡಿಕೊಂಡಿದ್ದರು. ಈ ದೌರ್ಭಾಗ್ಯ ದೀವಿ ಸಿಎಂ ಆದಾಗ ರಿಪೀಟ್ ಆಯ್ತು. ನೆಲ-ಮುಗಿಲು ಒಂದು ಮಾಡಿ ಯಡ್ಡಿ ಸರ್ಕಾರಕ್ಕೆ ಪಾಲೇಮಾರ್‌ನ ಸೇರಿಸಿದ್ದ ದೀವಿ ಸ್ವತಃ ತಾನೇ ಸಿಎಂ ಆದಾಗ ಸಕಲ ಸೌಭಾಗ್ಯ ಕರುಣಿಸುವ ಧನವಂತ ದೋಸ್ತನನ್ನು ಮರೆಯಲು ಸಾಧ್ಯವಾ? ದೀವಿ ಶಿಷ್ಯ ಪಾಲೇಮಾರ್ ಮಂತ್ರಿಗಿರಿ ದರ್ಬಾರಿನಲ್ಲಿ ದಕ್ಷಿಣ ಕನ್ನಡಕ್ಕೆ ದರಿದ್ರ ಹಿಡಿದುಹೋಗಿತ್ತು. ಪಬ್-ಚರ್ಚ್ ಮೇಲೆ ಪೈಶಾಚಿಕ ಮತಾಂಧ ದಾಳಿ, ಕೋಮು ಕಿತಾಪತಿ, ಸರ್ಕಾರಿ ಕಚೇರಿಗಳಲ್ಲಿ ಲಂಚಾವತಾರ, ರೈತ-ಮೀನುಗಾರರ-ಅಡಿಕೆ ತೋಟಿಗರ ಬವಣೆ, ಎಸ್‌ಇಝೆಡ್ ರಗಳೆ, ಅನೈತಿಕ ಪೊಲೀಸ್‌ಗಿರಿ, ಅಕ್ರಮ ಮರಳುಗಾರಿಕೆ.... ಇಂಥ ಎಲ್ಲ ಅವ್ಯವಹಾರ-ಅವಾಂತರ-ಅಕ್ರಮಗಳಲ್ಲಿ ಮಂತ್ರಿ ಪಾಲೇಮಾರ್ ಸಾಹೇಬರ 'ಸಾಥ್' ಇದ್ದೇ ಇರುತ್ತಿತ್ತು.

ಬಿಲ್ಡರ್ ಮಂತ್ರಿಜೀ ಸಾಮ್ರಾಜ್ಯದಲ್ಲಿ ಲ್ಯಾಂಡ್ ಮಾಫಿಯಾ ಮಂಗಳೂರು ನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರದಲ್ಲೆಲ್ಲ ಹಾವಳಿ ಎಬ್ಬಿಸಹತ್ತಿತ್ತು. ಈ ಅಕ್ರಮ ಬಿಲ್ಡರ್ಸ್, ರಿಯಲ್ ಎಸ್ಟೇಟ್ ಖದೀಮರ ದಾದಾಗಿರಿಯಿಂದ ಜನಸಾಮಾನ್ಯರು ತತ್ತರಿಸಿ ಹೋದರು. ತಮ್ಮವನೇ ಮಂತ್ರಿ ಮಾಂಡಲೀಕನಾಗಿರುವಾಗ ದೋ ನಂಬರ್ ದಂಧೆಗಾರರಿಗೆ ಯಾರ ಭಯ? ಈ ಪಾಲೇಮಾರ್ ಮಂತ್ರಿಗಿರಿಯಲ್ಲಿ ಒಳ್ಳೆಯದು ಮಾಡಿದ್ದು ಇದೀ ಕರಾವಳಿಯಲ್ಲಿ ಎಲ್ಲೂ ಕಾಣಿಸದು. ಬೇಲೇಕೇರಿ ಅದಿರು ಕಳ್ಳ ಸಾಗಾಣಿಕೆಯಲ್ಲಿ ಈ ಬಂದರು ಮಂತ್ರಿಯ ಪಾಲೂ ಇತ್ತು. ಈತ ಅದಿರು ಕಳ್ಳ ಸಾಗಾಣಿಕೆದಾರರಿಗೆ ಸಹಕರಿಸುತ್ತಿಲ್ಲ ಎಂಬ ಸಿಟ್ಟಿಂದ ದಕ್ಷ ಅರಣ್ಯಾಧಿಕಾರಿ ಗೋಕುಲ್‌ರ ಸಸ್ಪೆಂಡ್‌ಗೆ ಹವಣಿಸಿದಾಗ ಅಂದು ಲೋಕಾಯುಕ್ತರಾಗಿದ್ದ ನ್ಯಾ. ಸಂತೋಷ್ ಹೆಗ್ಡೆ ಕೆರಳಿ ಲೋಕಾಯುಕ್ತ ಸ್ಥಾನಕ್ಕೇ ರಾಜೀನಾಮೆ ಬಿಸಾಕಿದ್ದು ದೊಡ್ಡ ಗೌಜಿಗೆ ಕಾರಣವಾಗಿತ್ತು.

ಎರಡನೇ ಬಾರಿ ಪಾಲೇಮಾರ್ ಮಂತ್ರಿಯಾದಾಗಂತೂ ಆತನ 'ಗುರುದೇವ' ಕಲ್ಲಡ್ಕ ಭಟ್ಟನ ಮತಾಂಧ ಭಂಡಾಟ ಮಿತಿಮೀರಿಹೋಯ್ತು. ಹೆಸರಿಗಷ್ಟೇ ಮಂತ್ರಿಯಾಗಿದ್ದ ಪಾಲೇಮಾರ್ ಬಹಿರಂಗವಾಗೇ ಕಲ್ಲಡ್ಕ ಭಟ್ಟನ ಕೋಮು ಕಿತಾಪತಿಯ ಭಾಷಣ ಸಮರ್ಥಿಸುವ ದಿವಾಳಿಕೋರ ಸ್ಥಿತಿ ತಲುಪಿಬಿಟ್ಟಿದ್ದ. ದಕ್ಷಿಣ ಕನ್ನಡದ ಕೋಟ್ಯಂತರ ರೂಪಾಯಿ ಪಹಿಂವಾಟಿನ ಅಕ್ರಮ ಮರಳುಗಾರಿಕೆಯ ಕಿಂಗ್‌ಪಿನ್ನೇ ಈ ಪಾಲೇಮಾರ್! ವಕೀಲ ಪ್ರೀತಮ್ ಎಂಬ ಬಿಲ್ಲವರ ಹುಡುಗನ ಕಣ್ಮರೆಯಾಗಿ ವರ್ಷಗಳೇ ಕಳೆದುಹೋದರೂ ಆತನ ಪತ್ತೆಯಾಗಿಲ್ಲ. ಪ್ರೀತಮ್ ಮಂತ್ರಿ ಪಾಲೇಮಾರ್‌ನ ಜಾತಿಬಂಧು ಅರಣ್ಯ ಅಧಿಕಾರಿಯೊಬ್ಬನ ಮಗಳನ್ನು ಪ್ರೀತಿಸಿದ್ದೇ ಪ್ರಮಾದವಾಗಿತ್ತು. ಪ್ರೀತಮ್‌ನ ನಾಪತ್ತೆಯ ಕೇಸಲ್ಲಿ ಪೊಲೀಸರು ನಿಷ್ಕ್ರಿಯರಾಗಲು ಪಾಲೇಮಾರ್ ಮಂತ್ರಿಗಿರಿ ಪವರೇ ಕಾರಣ ಎಂಬುದು ಮಂಗಳೂರಲ್ಲಿ ಎಲ್ಲರಿಗೂ ಗೊತ್ತು.

ಮಂತ್ರಿಯಾದರೂ ಹೀನ ಚಾರಿತ್ರ್ಯದ ಪಾಲೇಮಾರ್ ಹುಟ್ಟುಗುಣ ಮಾತ್ರ ಬಿಡಲೇ ಇಲ್ಲ. ಜೀವನದ ಮೂಲ ಕಸುಬನ್ನೇ ಅಸೆಂಬ್ಲಿಯಲ್ಲೂ ಮಾಡಿದ್ದಾನೆ. ಮಾಡಬಾರದ ಪಾತಕವೆಲ್ಲಾ ಮಾಡಿ ಧನಬಲ-ಸುಸ್ಕೈ ಶಕ್ತಿಯಿಂದ ದಕ್ಕಿಸಿಕೊಳ್ಳುತ್ತಿದ್ದ ಪಾಲೇಮಾರ್‌ಗೆ ಬ್ಲೂಫಿಲ್ಮ್ ಗೆಳೆಯ ಮಂತ್ರಿಗಳಿಗೆ ಕೊಟ್ಟು ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು ದಕ್ಷಿಣ ಕನ್ನಡ ಪುಣ್ಯ! ಕಾಮಕಾಂಡದಲ್ಲಾದರೂ ಸಿಕ್ಕಿಬಿದ್ದು ಶನಿ ಮಂತ್ರಿಗಿರಿಯಿಂದ ತೊಲಗಿತಲ್ಲ ಎಂದು ಕರಾವಳಿಯ ಮಂದಿ ನಿಟ್ಟುಸಿರು ಬಿಡುತ್ತಿದ್ದಾರೆ.

ಶೀಲ-ಸಂಸ್ಕೃತಿ-ನೈತಿಕತೆಯ ಬಗ್ಗೆ ಉದ್ದುದ್ದ ನಕಲಿ ಭಾಷಣ ಬಿಗಿಯುವ ಪಾಲೇಮಾರ್‌ನ ಭಾಗ್ಯದಿ ದಕ್ಷಿಣ ಕನ್ನಡ ಹಿಂದೂವಾದಿಗಳ ಬಣ್ಣ ಬಯಲಾಗಿಸಿಬಿಟ್ಟಿದೆ. ಎಷ್ಟೆಂದರೂ ಪಾಲೇಮಾರ್ ಹಿಂದೂತ್ವದ ಐತಿಹಾಸಿಕ ಸಂಕೇತ, ಅಲ್ಲವಾ?

ಮಂಗಳೂರು

ಬಾಗಿಲು ಮುಚ್ಚಲಿರುವ ಅತ್ರಿ ಬುಕ್ ಸೆಂಟರ್

ಮಂಗಳೂರಿನಲ್ಲಿ ಅಶೋಕವರ್ಧನ್ ತಮ್ಮ ಅತ್ರಿ ಬುಕ್ ಸೆಂಟರ್ ನಿಲ್ಲಿಸುತ್ತಾರೆ ಎಂಬ ಸುದ್ದಿಯನ್ನು ಸ್ವತಃ ಅವರೇ ತಮ್ಮ ಬ್ಲಾಗಿನಲ್ಲಿ ಬರೆದುಕೊಂಡಿದ್ದಾರೆ.

2002ನೇ ಇಸವಿ ಇರಬೇಕು. ಕನ್ನಡ ಸಾಹಿತ್ಯದ ದಿಗ್ಗಜ ಹಾಮಾನಾ ತೀರಿಕೊಂಡಿದ್ದರು: ತಮ್ಮ ಮೈಸೂರಿನ ಮನೆ 'ಗೋಧೂಳಿ'ಯ ಪಡಸಾಲೆ, ರೂಮುಗಳನ್ನು ದಾಟಿ ಅಡುಗೆಮನೆಗೂ ನುಗ್ಗಿಬಿಡಬಹುದಾದಷ್ಟು ಪುಸ್ತಕ ಸಂಗ್ರಹಿಸಿಕೊಂಡವರು ಹಾಮಾನಾ. ತಮ್ಮ ವಿಲ್‌ನಲ್ಲಿ ಪುಸ್ತಕ ಸಂಗ್ರಹ ಧರ್ಮಸ್ಥಳದ ಹೆಗ್ಗಡೆಯವರಿಗೆ ಸಲ್ಲಬೇಕೆಂದು ಬರೆದಿಟ್ಟಿದ್ದರು. ಹಾಗೆ ಲಾರಿಗಟ್ಟಲೆ ಪುಸ್ತಕ ಮೈಸೂರಿನಿಂದ ಹೊರಟು ಉಜಿರೆಯ SDM ಕಾಲೇಜಿನ ಗ್ರಂಥಾಲಯದ ಅಟ್ಟ ತಲುಪಿಕೊಂಡಿತು.



ಹಾಮಾನಾರಲ್ಲಿ ಇಷ್ಟೊಂದು ಪುಸ್ತಕ ಸಂಗ್ರಹವಾಗಿದ್ದು ಹೇಗೆ? ಇದಕ್ಕೆ ಉತ್ತರ ಎಂಬಂತೆ ಅಶೋಕವರ್ಧನ್ ಖಾಸಗಿಯಾಗಿ ಪ್ರತಿಕ್ರಿಯಿಸಿದ್ದರು.

'ಪುಸ್ತಕ ಮಾರಾಟ-ಹೋರಾಟ' ಅಶೋಕವರ್ಧನ್‌ರವರೇ ಬರೆದು ಪ್ರಕಟಿಸಿದ ವಿಶಿಷ್ಟ ಪುಸ್ತಕ. ಈ ಪುಸ್ತಕದ ವಿವರ ಕೊಟ್ಟು ಅಶೋಕವರ್ಧನ್ ನೂರಾರು ಸಾಹಿತಿ-ಲೇಖಕರಿಗೆ ಅಂಚೆಕಾರ್ಡ್ ಹಾಕಿದ್ದರು. ಹಾಮಾನಾರ ಮರು ಟಪಾಲು ಬಂತು. 'ಹಿಂದೆಲ್ಲ ನೀವು ನೇರ ಪುಸ್ತಕವನ್ನೇ ಕಳುಹಿಸುತ್ತಿದ್ದಿರಿ, ಇದೇನು ಹೊಸ ಪರಿಪಾಠ? ಎಂದಿನಂತೆ (ಎಲ್ಲರಂತೆ?) ಪುಸ್ತಕವನ್ನೇ ಕಳುಹಿಸಿಕೊಡಬಹುದಿತ್ತಲ್ಲ?'

ಆ ಪತ್ರ ನೆನಪಿಸಿಕೊಳ್ಳುವ ಅಶೋಕವರ್ಧನ್ 'ಹಾಮಾನಾ ಹಿಂದಿನಂತೆ' 'ಗೌರವಪ್ರತಿ'ಯನ್ನೇ ನಿರೀಕ್ಷಿಸಿದ್ದರು. 'ಪುಸ್ತಕ ಮಾರಾಟ-ಹೋರಾಟ' ಅಂತ ಪುಸ್ತಕ ಬರೆದು ಅದನ್ನು ಗೌರವಪ್ರತಿಯಾಗಿ ಹಂಚುವುದು ಹೇಗೆ ಅನ್ನುವುದಷ್ಟೆ ಅವರ ಪ್ರಶ್ನೆಯಾಗಿರಲಿಲ್ಲ. 'ಹೀಗೆ ಬಂದು ಸೇರಿಕೊಂಡ ಪುಸ್ತಕಗಳ ರಾಶಿಯದು' ಎನ್ನುವ ಉತ್ತರವೂ ಅವರ ವಾದದಲ್ಲಿತ್ತು.

36 ವರ್ಷಗಳ ಕಾಲ ಅಶೋಕವರ್ಧನ್ 'ಅತ್ರಿ' ಮೂಲಕ ಪುಸ್ತಕ ವ್ಯಾಪಾರ ನಡೆಸಿದ್ದಾರೆ. ಮೂಲ ಮೈಸೂರಿನ ಅವರ ಮನೆಯ ಹೆಸರೂ 'ಅತ್ರಿ'. ಆ ಹೆಸರನ್ನೇ ಅವರು ಮಂಗಳೂರಿನ ಪುಸ್ತಕ ಮಳಿಗೆಗೂ ತಂದುಕೊಂಡರು. ಮೈಸೂರಿನ ಚಿರಪರಿಚಿತ ಗಣಿತ ಮೇಷ್ಟ್ರು GTM ತಮ್ಮ ಮೂವರು ಮಕ್ಕಳಿಗೆ ಆನಂದ, ಅಶೋಕ, ಅನಂತ ಎಂದು ಹೆಸರಿಟ್ಟರು. ಆ A3 (ATHREE)ನೇ ಅತ್ರಿ ಆದದ್ದು!


ಮಾರ್ಚ್ 31 ಅತ್ರಿ ಮಳಿಗೆಯ ಕೊನೆಯ ದಿನ ಎಂದು ವರ್ಧನ್ ಘೋಷಿಸಿದ್ದಾರೆ. 60 ವರ್ಷಕ್ಕೆ ಕಾಲಿಟ್ಟಿರುವ ಅವರು ಆಮೇಲಿನ ಜೀವನ wildlifeಗಾಗಿ ಎಂದಿದ್ದಾರೆ. ವನ್ಯಜೀವಿ ಕುರಿತಾದ ವರ್ಧನರ ಪ್ರೀತಿ ಅಸದೃಶವಾದದ್ದು.

ಸುಬ್ರಹ್ಮಣ್ಯ-ಸಕಲೇಶಪುರ ನಡುವಿನ ಬಿಸಲೇಘಾಟಿಯಲ್ಲಿ ಖಾಸಗಿ ಜಾಗ ಹಿಡಿದು ರೆಸಾರ್ಟ್ ಕಾಲೂರಲು ಬಂದಿತ್ತು, ಅದು ಆನೆಗಳ ಸಂಚಾರದ ಪ್ರದೇಶ. ರೆಸಾರ್ಟ್ ಕಾಲಿಟ್ಟರೆ ಏನೆಲ್ಲ ಅನಾಹುತ ಆದೀತೆಂದು ಮನಗಂಡು, ಸ್ನೇಹಿತರ ಜೊತೆ ಸೇರಿ ಆ 15 ಎಕರೆ ಜಾಗವನ್ನು ತಾವೇ ಖರೀದಿಸಿದರು. ಅದನ್ನು ಹಾಗೆಯೇ ಕಾಡಾಗಿ ಬಿಟ್ಟು ಬಂದವರು ವರ್ಧನ್.


ಅವರ ಈಗಿನ ಉತ್ತರಾರ್ಧ wildlifeಗೆ ಜೀವತುಂಬುವುದು ನಿಶ್ಚಿತ.

ಮಾರ್ಚ್ 31ರ ನಂತರ ಮಂಗಳೂರಿನ ಜ್ಯೋತಿ ಸರ್ಕಲ್ ಸಮೀಪದಲ್ಲಿ ಅತ್ರಿ ಪುಸ್ತಕ ಮಳಿಗೆ ಇರುವುದಿಲ್ಲ, ನವಕರ್ನಾಟಕದವರು ವ್ಯಾಪಾರ ಮುಂದುವರಿಸುವ ಸಾಧ್ಯತೆಗಳಿವೆ.

- ಕಾಲಂ 9 ಬ್ಲಾಗಿನಿಂದ



ಅತ್ರಿಯಲ್ಲಿ ಅಶೋಕವರ್ಧನ್ (ಬಲಕ್ಕೆ)



ನಮ್ಮ ಕರಿಬಸಣ್ಣ

ಅದೊಂದು ಅಪರೂಪದ ಭೂಪ್ರದೇಶ. ಆ ಜಾಗದಲ್ಲಿ ಮೂರು ತಾಲ್ಲೂಕಿನ ಗಡಿ ರೇಖೆಗಳು ಸಂಧಿಸುತ್ತವೆ. ತುರುವೇಕೆರೆ, ನಾಗಮಂಗಲ, ಚನ್ನರಾಯಪಟ್ಟಣ. ಇಂಥ ಅಪ್ಪಟ ಕನ್ನಡ ಪ್ರದೇಶದ ಬಾರೆಯ ಮೇಲೆ ನಿರ್ಮಿಸಿರುವ ಭೀರೇಶ್ವರ ದೇವಸ್ಥಾನ ಉದ್ಘಾಟನೆಗೊಂಡ ರಾತ್ರಿ ಅಲ್ಲಿ ಕರಿಬಸಯ್ಯನ ಹರಿಕಥೆಯಿತ್ತು. ಕರಿಬಸಯ್ಯನ ಬೀಗರಾದ ಮಂಜೇಗೌಡ ದೇವಸ್ಥಾನದ ಜೀರ್ಣೋದ್ಧಾರದ ರೂವಾರಿ ಅವತ್ತು ತಮ್ಮ ಬೀಗನ ಹರಿಕಥೆ ಏರ್ಪಡಿಸಿದ್ದವರೂ ಅವನೆ. ಆದರೆ ಹರಿಕಥೆ ಮೂರು ದಿನವಿರುವಂತೆ ಕರಿಬಸಯ್ಯ ತಾನೇ ಮಾಡಿಕೊಂಡ ಅಪಘಾತಕ್ಕೆ ತುತ್ತಾಗಿ ತುರ್ತುನಿಗಾ ಘಟಕದಲ್ಲಿದ್ದಾರೆಂಬ ಸುದ್ದಿ ಅಪ್ಪಳಿಸಿತು. ವಿಚಾರಿಸಲೆಂದು ನಾಗತಿಹಳ್ಳಿ ಚಂದ್ರಶೇಖರ್‌ಗೆ ಫೋನ್ ಮಾಡಿದಾಗ, "ಕರಿಬಸವಯ್ಯನ ಬಗ್ಗೆ ವೈದ್ಯರು ಅಂತಹ ಯಾವ ಭರವಸೆಯ ಮಾತನ್ನೂ ಆಡುತ್ತಿಲ್ಲ, ಇನ್ನೆರಡು ದಿನದಲ್ಲಿ ಆಪರೇಷನ್ ಮಾಡುತ್ತಾರಂತೆ. ಆದರೂ ಆತ ಮೊದಲಿನಂತಿರುವುದು ಕಷ್ಟ" ಎಂದ. ನಾನು ಕರಿಬಸಯ್ಯನ ಬೀಗರಿಗೆ ಸುಳ್ಳು ಹೇಳಿ "ಏನೂ ತೊಂದರೆಯಿಲ್ಲ, ಹುಷಾರಾಗಿ ಬರುತ್ತಾನಂತೆ" ಎಂದೆ.

ನನ್ನ ಮಾತನ್ನು ನಂಬಿದ ಅವರು ಅದ್ದೂರಿಯಿಂದ ಪೂರ ಮಾಡುವ ಕಾರ್ಯದಲ್ಲಿ ತೊಡಗಿದರು. ದೇವಸ್ಥಾನ ಉದ್ಘಾಟನೆಗೆ ಮೂರು ತಾಲ್ಲೂಕಿನ ಶಾಸಕರುಗಳಲ್ಲದೆ ಸಿದ್ಧರಾಮಯ್ಯನವರೂ ಬಂದಿದ್ದರು. ಕರಿಬಸಯ್ಯನ ಅಳಿಯ, ಮಗಳೂ ಕೂಡ ಮಗುವಿನೊಂದಿಗೆ ಹಾಜರಾಗಿದ್ದರಿಂದ ಅವನ ಆರೋಗ್ಯದ ಬಗ್ಗೆ ಯಾರಿಗೂ ಆತಂಕವಾಗಲಿಲ್ಲ.

ಅಲ್ಲಿ ಹಾಜರಿದ್ದ ನಲವತ್ತೊಂದು ದೇವರುಗಳೂ ಆಸೀನರಾಗಿ, ಕಾರ್ಯಕ್ರಮವೂ ಮುಗಿದು, ಎಲ್ಲರೂ ಊಟ ಮಾಡಿದ ನಂತರ ಅಜ್ಜಂಪುರದ ಗೆಳೆಯರೊಬ್ಬರು ನನಗೆ ಫೋನ್ ಮಾಡಿ "ಕರಿಬಸಣ್ಣ ಹೊರಟುಹೋದ" ಎಂದರು. ನಾನು ಬೀಗರಾದ ಮಂಜೇಗೌಡರಿಗೆ ಹೇಳಿದೆ ಅಷ್ಟೆ. ಆ ಕ್ಷಣದಿಂದ ಸುಮಾರು ಒಂದು ಗಂಟೆ ಅವಧಿಯಲ್ಲಿ ಸಾವಿರಾರು ಜನ ಮತ್ತು ನಲವತ್ತೊಂದು ದೇವರು ಖಾಲಿಯಾಗಿ ದೇವಸ್ಥಾನದ ಆವರಣವೇ ಸ್ಮಶಾನ ಸದೃಶವಾದ ತಾಣವಾಗಿಹೋಯ್ತು.

ಕರಿಬಸಣ್ಣ ಇಷ್ಟೊಂದು ಜನಪ್ರಿಯ ವ್ಯಕ್ತಿಯಾಗಿದ್ದನೆ ಎಂದು ನನಗೆ ಆಶ್ಚರ್ಯವಾಯ್ತು. ಈ ಕರಿಬಸಣ್ಣನನ್ನು ನಾನು ಮೊದಲು ನೋಡಿದ್ದು ನಾಗತಿಹಳ್ಳಿ ಚಂದ್ರಶೇಖರನ 'ಉಂಡುಹೋದ ಕೊಂಡು ಹೋದ' ಎಂಬ ಸಿನಿಮಾದಲ್ಲಿ, ಅದೇ ಅವನ ಮೊದಲ ಸಿನಿಮಾ. ಇಡೀ ಊರಿನ ಎಲ್ಲಾ ಕುಟುಂಬಗಳಿಗೂ ಇಲಾತಿಹಸು ಕೊಡುತ್ತೇನೆಂದು ಹೇಳಿ, ಮುಂಗಡವಾಗಿ ಹಣ ವಸೂಲು ಮಾಡುವ ವಂಚಕನ ಕತೆ. ಅದರಲ್ಲಿ ಕರಿಬಸಣ್ಣ ಮೋಚಿ ಅವನೂ ಒಂದು ಹಸುಕಟ್ಟಿ, ಹಾಲು ಕುಡಿಯುವ ಕನಸು ಕಾಣುತ್ತಾನೆ. ಏಕೆಂದರೆ ದಲಿತರು ಮಾರುವ ಹಾಲನ್ನು ಹಳ್ಳಿಯಲ್ಲಿ ಯಾರೂ ಕೊಳ್ಳುವುದಿಲ್ಲ, ಆದ್ದರಿಂದ ತನ್ನ ಮನೆಯಲ್ಲೂ ಹಾಲು ಮೊಸರಿನ ಸಮೃದ್ಧತೆ ನೆನೆದು ಕಷ್ಟಪಟ್ಟು ಸಂಪಾದಿಸಿ ಹಣದ ಗಂಟಿನೊಡನೆ ಓಡಿಬರುತ್ತಾನೆ. ಅಷ್ಟರಲ್ಲಾಗಲೇ ಊರ ಜನರು ಕೊಟ್ಟ ಹಣದ ಚೀಲದೊಂದಿಗೆ ವಂಚಕ ಬಸ್ಸಿನಲ್ಲಿರುತ್ತಾನೆ. ಅಲ್ಲಿಗೇ ಓಡಿಬಂದ ಕರಿಮಳಿ "ಸ್ವಾಮಿಯೋರೇ ನನಿಗೂ ಒಂದಸ ತಗಂಬನ್ನಿ" ಅಂತಾನೆ. ಕಾಸು ತೆಗೆದುಕೊಂಡ ವಂಚಕ ತಮಾಷೆ ದನಿಯಲ್ಲಿ "ನಾನೇನಾದ್ರು ಮೋಸ ಮಾಡಿದ್ರೆ?" ಎನ್ನುತ್ತಾನೆ. "ಅಯ್ಯೋ, ಹಸಿನ ದುಡ್ಡ ತಿಂದು ಯಾರಾದ್ರು ಬದುಕ್ಕರೆ" ಎಂದ ಕರಿಮಳಿ ನಂಬಿಕೆಯ ತರ್ಕವನ್ನ ಮುಂದಿಡುತ್ತಾನೆ. ಆದರೆ ವಂಚಕ ಊರಿಗೇ ನಾಮ ಹಾಕಿದ್ದಾನೆ ಎಂದು ಗೊತ್ತಾದಾಗ, ಕರಿಬಸಯ್ಯ ಥೇಟ್ ಕರಿಮಳಿಯಾಗಿ ಅಳುತ್ತಾನೆ. ಅದೂ ತನ್ನ ಮಗನನ್ನು ಹಿಡಿದುಕೊಂಡು, ಸಾಲ ತೀರಿಸಲು ಮಗ ಯಾರ ಮನೆಯಲ್ಲಾದರೂ ಜೀತ ಮಾಡಬೇಕಾಗಿ ಬಂತಲ್ಲಾ ಎಂಬಂತೆ ರೋದಿಸುವ ಆ ದೃಶ್ಯ ಸಿನಿಮಾದಿಂದ ಹೊರಬಂದಾಗಲೂ ಕಾಡಿಸುವ ದೃಶ್ಯವಾಗಿ ಉಳಿದುಬಿಟ್ಟಿತು. ಅವನೊಬ್ಬ ಅದ್ಭುತ ನಟ ಎಂಬುದನ್ನು ಮನವರಿಕೆ ಮಾಡಿಕೊಟ್ಟಿತ್ತು.

ಮುಂದೆ ಸಿ.ಪಿ. ಯೋಗೇಶ್ವರ್ ಸಿನಿಮಾ ತೆಗೆಯಲು ಹೊರಟು, ನನ್ನನ್ನು ಚಿತ್ರಕತೆ ಮತ್ತು ಸಂಭಾಷಣೆಗೆಂದು ನೇಮಿಸಿಕೊಂಡಾಗ, ಹೀರೋನ ತಂದೆ ಪಾತ್ರಕ್ಕೆ ಕರಿಬಸಣ್ಣನನ್ನು ಆರಿಸಿದೆ. ಹೀರೋ ತಂದೆ ಮಾತುಬಾರದ ಮೂಗ. ಈ ಪಾತ್ರವನ್ನು ಕರಿಬಸವಣ್ಣನಲ್ಲದೆ ಇನ್ಯಾರೂ ಮಾಡಲಾರರು ಅನ್ನಿಸಿದ್ದರಿಂದ ಅವನನ್ನು ಕರೆಸಲಾಯ್ತು. ರಾಜಯೋಗಿ ಫಿಲಂ ಆಫೀಸಿಗೆ ಬಂದ ಕರಿಬಸಣ್ಣ ಮೂಗನ ಪಾತ್ರವನ್ನು ಮಾಡಿಯೇ ತೋರಿಸಿಬಿಟ್ಟ. ಎಂದಿನಂತೆ ಯೋಗೇಶ್ವರ ಸಂಭಾವನೆ ಚೌಕಾಸಿಯ ಚರ್ಚೆ ನಡೆಸಿ ಕಳಿಸಿಕೊಟ್ಟನಂ "ಅಲ್ರೀ ಗೌಡ್ರೆ, ಅವುನು ಅಷ್ಟೊಂದು ಕಪ್ಪಗವುನೆ. ನಾ ಕೆಂಪಗಿದಿನಿ. ಅದ್ಯಂಗ್ರಿ ನನ್ನ ತಂದೆ ಅಂತ ಪ್ರೇಕ್ಷಕ ಒಪ್ಪಿಕೊಳ್ತರೆ" ಎಂದರು. "ತಾಯಿ ಕೆಂಪಗಿರಬಹು ಅಂದುಕೊಳ್ತರೆ ಸಾರ್. ಹೇಗಿದ್ರು ಹೀರೋಗೆ ತಾಯಿ ಇ ಕೆಂಪಗಿರೊ ಹೆಂಗುಸಿನ ಫೋಟೋ ತೋರಿದರಾಯ್ತು ಅಥ ನಿಮಗೇ ತಾಯಿ ಮೇಕಪ್ ಮಾಡಿ ಫೋಟೋ ಪಡಿಸಿ ಫೋಟೋ ನಡುಮನೇಲಿ ಹಾಕಿದರಾಯ್ತು" ಎಂ ವಾದಿಸಿದೆ. ನನಗೆ ಹೇಗಾದರೂ ಮಾಡಿ ಕರಿಬಸಯ್ಯ ಅವಕಾಶ ಕೊಡುವ ಆಸೆ ಇತ್ತು, ಆದರೆ ಹೀರೋ ಇವುನಲ್ಲ, ಇನ್ನೊಬ್ಬ ಅನ್ನುವ ಸಲೀಸು ದಾರಿಯಿ ಆದ್ದರಿಂದ ಕರಿಬಸವಣ್ಣನಿಗೆ ಆ ಸಿನಿಮಾದಲ್ಲಿ ಅವಕಾಶ ಸಿ ತುಂಬಾ ಬೇಸರಗೊಂಡ.

ಆದರೆ ಬೇರೆ ಚಿತ್ರಗಳಿಂದ ಆತ ಮೇಲೆ ಬರತೊಡಗಿ ಬಿಡುವು ಸಿಕ್ಕಾಗ ಹರಿಕಥೆ, ಹಾಸ್ಯಪ್ರಸಂಗ ಮತ್ತು ನಾ ಇದ್ದೇ ಇದ್ದವು. 'ಮುಸ್ಸಂಜೆ ಕಥಾ ಪ್ರಸಂಗ'ದಲ್ಲಿ ಮಿಷನ್ ಬರ್ಮಣ್ಣನ ಪಾತ್ರ ಮಾಡುತ್ತಿದ್ದ. ಯಾವು ಪಾತ್ರಕ್ಕೆ ಜೀವ ತುಂಬುವ ಶಕ್ತಿ ಅವನಿಗಿತ್ತು, ಮತ್ತೊಂ ವಿಶೇಷವೆಂದರೆ ಇಡೀ ಸಾಂಸ್ಕೃತಿಕ ಲೋಕವನ್ನು ತ ಬಂಧುಬಳಗದಂತೆ ನಡೆಸಿಕೊಳ್ಳುತ್ತಿದ್ದ. ಆತನಿಗೆ ಎಲ್ಲ ಅಕ್ಕ ಅಣ್ಣ ವಯಸ್ಸಾದವರೆಲ್ಲಾ ಅಪ್ಪ ಅವ್ವ. ಇಂತದೊಂ ನಡವಳಿಕೆಯನ್ನು ನಮ್ಮ ಚಿತ್ರರಂಗ ಕಂಡಿರಲಿಲ್ಲ, ಅ

ಈ ಪ್ರವೃತ್ತಿಯಿಂದಾಗಿ ಕಪ್ಪು ಜನಗಳನ್ನು ದೂರವಿಟ್ಟಿರುವ ದೂರದರ್ಶನದ ರೋಗಗ್ರಸ್ತರಿಗೆ ಕರಿಬಸಣ್ಣನನ್ನು ದೂರವಿಡಲಾಗಿರಲಿಲ್ಲ. ಆದ್ದರಿಂದ ದೂರ ದರ್ಶನದಿಂದಲೇ ಮನೆಮನೆಗೂ ತಲ್ಪುಪಿ ಜನಪ್ರಿಯ ನಾಗಿದ್ದ.

ಅವನು ಗಂಭೀರ ಮುಖದವನಾಗಿ ಕುಳಿತಿದ್ದನ್ನು ಯಾರೂ ನೋಡಿರಲಿ ಸದಾ ಜೀವನೋತ್ಸಾಹದಿಂದ ಪುಟಿಯುತ್ತಿದ್ದ ಕರಿಬಸಣ್ಣ ಮಗಳು ರಾ ತೀರಿಕೊಂಡಾಗ ತಾಯಿ ಕಳೆದುಕೊಂಡ ಮಗುವಿನಂತೆ ಅತ್ತಿದ್ದ. ಅವಳ ನೆನಸಿಕೊಂಡಾಗಲೆಲ್ಲಾ ಕಣ್ಣೀರು ತಾನೇತಾನಾಗಿ ಬರುತ್ತಿದ್ದವು. ಒಳ್ಳೆ ಮಾತುಗಳನ್ನು ನಂಬುತ್ತಿದ್ದ ಕರಿಬಸಣ್ಣ ಯಾರೋ ಅನಾಗರಿಕರಿಗೆ ಮಗಳ ಕೊಟ್ಟು ಮೋಸಹೋಗಿದ್ದ.

ಒಂದು ದಿನ ಇದ್ದಕ್ಕಿದ್ದಂತೆ ಫೋನು ಮಾಡಿ "ಚಂದ್ರಣ್ಣಾ, ನಿ ಸಂಬಂಧಿಕರಿಗೇ ನನ್ನ ಮಗಳ ಕೊಡ್ತಾಯಿದ್ದಿನಿ" ಎಂದ. ನಾನು ಅಚ್ಚರಿಗೊಂ ಏಕೆಂದರೆ ಕರಿಬಸಣ್ಣನನ್ನು ಲಿಂಗಾಯತರವನೆಂದು ತಿಳಿದಿದ್ದೆ. ಎಲ್ಲರ ಕೂಡ ತಮ್ಮವನೆಂದು ಭಾವಿಸುವಂತೆ ಇರುತ್ತಿದ್ದ ಅವನು ಎಲ್ಲಾ ಜನಾಂಗದಲ್ಲಿ ಇರುವ ಕಪ್ಪು ಮನುಷ್ಯನಂತಿದ್ದ.

ಕರಿಬಸಣ್ಣನ ಮಗಳನ್ನು ತಂದುಕೊಂಡವರು ನನ್ನ ಸೋದರ ಮಾ ಮನೆಯವರು. ಹುಡುಗಿಯ ಮಾವನಾಗಲಿರುವ ಮಂಜೇಗೌ ದುರ್ಯೋಧನ, ರಾವಣ ಇಂತಹ ದೈತ್ಯಪಾತ್ರ ಮಾಡುತ್ತ ಖಾಸಗಿ ಬದುಕಿನಲ್ಲಿ ಪೌರಾಣಿಕವಾದ ಗಂಟಲನ್ನೇ ಬಳಸುತ್ತ ನನಗೊಂದಿಷ್ಟು ಆತಂಕ ಮೂಡಿಸಿ ವ್ಯಕ್ತಿ. ಅವನಿಗೆ ಫೋನು ಮಾಡಿ "ನೋಡಪ್ಪ, ಕರಿಬಸಣ್ಣ ಹೆಂಗರು ಕಲಾವಿದ. ಈಗಾಗಲೇ ಒಬ್ಬ ಮಗಳನ್ನು ಕಳೆದುಕೊಂಡಿದ್ದಾನೆ. ನೀ ಮತ್ತೆ ಮದುವೆಯಾಗಲಿರುವ ನಿನ್ನ ಮಗ ಶಿವಕುಮಾರ ಕರಿಬಸಣ್ಣ ದುಃಖ ಮರೆಸಬೇಕು. ಬಹಳ ಸೂಕ್ಷ್ಮಜೀವಿ ಅವನು" ಎಂದೆ. ಮಂಜೇಗೌ ನಿಜಕ್ಕೂ ಕರಿಬಸಣ್ಣನಿಗೆ ತಕ್ಕ ಬೀಗನಂತೆಯೇ ನಡೆದುಕೊಂಡ. ಅಲ್ಲ ಸೊಸೆಯನ್ನು ತನ್ನ ಮಗಳಂತೆಯೇ ನೋಡಿಕೊಂಡ. ಎಲ್ಲೇ ಹೋಗ ತಾನು ಬಿಎಸ್‌ಪಿ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತು ರಾಜಕಾರಣದ ಹಲವು ಸ್ಥಾನಗಳಲ್ಲಿದ್ದರೂ ಅದೆಲ್ಲವನ್ನು ಬಿಟ್ಟು ಪರಿಚಯಿಸಿಕೊಳ್ಳುವ "ನಾನು ಕರಿಸಬಸವಯ್ಯನ ಬೀಗ ಸಾರ್" ಎಂದೇ ಪರಿಚಯಿಸಿಕೊಳ್ಳುತ್ತಿ ಅಲ್ಲದೆ ಕರಿಬಸವಣ್ಣನಿಗೆ ಬಿಡುವು ಸಿಕ್ಕರೆ ನಮ್ಮ ಪ್ರಾಂತ್ಯಕ್ಕೆಲ್ಲಾ ಕರೆದುಕೊಂ ಬರುತ್ತಿದ್ದ. ಅವನಿಗೆ ಈಗ ಕರಿಸಬಣ್ಣನ ಕುಟುಂಬದ ಜವಾಬ್ದಾರಿ ಹೆಗಲೇರಿ ಕಳೆದ ವರ್ಷ ಇದೇ ಸಮಯಕ್ಕೆ ಊರಹಬ್ಬಕ್ಕೆ ಕರಿಬಸಯ್ಯನನ್ನು ಮಂಜೇಗೌ ಕರೆದುಕೊಂಡು ಬಂದಿದ್ದ. ರಾತ್ರಿಯೆಲ್ಲ ಜಾಗರಣೆ ಇದ್ದುದರಿಂದ, ನಾ ಯಂತೆದೊ ಹಾಸ್ಯದ ವೇಷ ತಂದಿದ್ದೆ. ಕರಿಬಸಣ್ಣ ಒಂದು ಗಂಟೆ ಜನರ ನಗಿಸಿ, ಮುಂದಿನ ವರ್ಷ ಒಳ್ಳೆ ಹಾಸ್ಯದ ಪ್ರಸಂಗ ತರುತ್ತೇನೆ ಎಂ ಹೇಳಿಹೋದ. ಆಗಲೂ ಕೂಡ ಅವನು ಹೋದಾಗ ರಾತ್ರಿ ಎರ ಗಂಟೆಯಾಗಿತ್ತು.

ನಮ್ಮ ಏರಿಯಾಕ್ಕೆ ಬಂದಾಗ ಆತ ನಾಗತಿಹಳ್ಳಿಯ ಪ್ರಸ್ತಾಪವಿ ಮಾತನಾಡುತ್ತಿರಲಿಲ್ಲ, ಏಕೆಂದರೆ ಆತನ ಪ್ರಥಮ ಚಿತ್ರ ನಾಗತಿಹಳ್ಳಿ 'ಉಂಡೂ ಹೋದ ಕೊಂಡೂ ಹೋದ' ಕಡೆಯ ಚಿತ್ರ ಕೂಡ. ನಾಗತಿಹಳ್ಳಿ 'ಬ್ರೇಕಿಂಗ್ ನ್ಯೂಸ್!' ಅಚ್ಚರಿಯೆಂದರೆ ಆತ ಗೌಡರಹಳ್ಳಿಯ ಬಾರೆಯ ಮೇ ಹರಿಕಥೆ ಮಾಡಲಿದ್ದ ದಿನವೂ ಟಿವಿಯ ಬ್ರೇಕಿಂಗ್ ನ್ಯೂಸ್‌ಗೆ ಸುದ್ದಿಯಾಗಿ


ಕನ್ನಡ ಚಿತ್ರರಂಗದಲ್ಲಿ ಗುಬ್ಬಿ ವೀರಣ್ಣನವರ ಮಗ ಶಿವರಾಜನಿಂದ ಹಿಡಿ ಕರಿಬಸಣ್ಣನವರೆಗೆ ಎಂಟ್ಹತ್ತು ಜನ ಅಪಘಾತದಲ್ಲಿಯೇ ತೀರಿಕೊಂಡಿದ್ದಾ ಅವರೆಲ್ಲಾ ಅಪ್ಪಟ ಪ್ರತಿಭಾವಂತರು. ಈ ಪ್ರತಿಭಾವಂತರ ನಿರ್ಗಮನದಿಂ ನಾಡಿನ ಸಾಂಸ್ಕೃತಿಕಲೋಕ ಖಂಡಿತ ಬರಡಾಗುತ್ತದೆ. ಅವರ ಸ್ಥಾನವನ್ನು ಯಾ ತುಂಬಲಾಗುವುದಿಲ್ಲ, ಏಕೆಂದರೆ ಅವರಂತೆ ಇದ್ದದ್ದು ಅವರೊಬ್ಬರೆ ಅದ ಕರಿಬಸಣ್ಣ ನೋವಿನ ನೆನಪನ್ನು ಬಿಟ್ಟು ಹೋಗಿದ್ದಾನೆ.

• ಬಿ. ಚಂದ್ರೇಗೌ

ಪಂಡಿತ ಪ್ಯಾನ್‌ಗ್ಲೋಸ್‌ನ ಸಿದ್ಧಾಂತ ಮತ್ತು ಬಿಜೆಪಿಯ ಕಾಮಾಯಣ

ಮೊನ್ನೆ ವಿಧಾನಸೌಧದಲ್ಲಿ ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಣಿಕೆಯಷ್ಟು ಪ್ರತಿನಿಧಿಗಳು ಚರ್ಚೆ ನಡೆಸುತ್ತಿದ್ದಾಗ ಸಚಿವ ಲಕ್ಷ್ಮಣ ದಿ ಬ್ಲೂಫಿಲಂ ನೋಡುತ್ತಿದ್ದ, ಜೊತೆಗೆ ಸಿ.ಸಿ. ಪಾಟೀಲನೂ ಆಗಾಗ್ಗೆ ಕಿ ನೋಡುತ್ತಾ ಸಿಕ್ಕಬಿದ್ದ.

ಆಮೇಲೆನಾಯಿತೆಂಬುದು ಈಗಲೂ ನಡೆಯುತ್ತಿರುವ ಮಾನವಾಗಿದೆ ಬಿಡಿ. ಆದರೆ ಸವದಿ ಪೋಲಿ ಕೆಲಸದ ಬಗ್ಗೆ ವಿವರಣೆ ಡುತ್ತಾ "ಈ ಫಿಲಂ ಅನ್ನು ನನಗೆ ಟ್ಟಿದ್ದು ಮಿನಿಸ್ಟರ್ ಕೃಷ್ಣ ಲೇಮಾರ್" ಎಂದುಬಿಟ್ಟ.



ಹಾಗಾದರೆ ಅದನ್ನು ಲೇಮಾರ್‌ಗೆ ಯಾರು ಟ್ಟಿರಬಹುದು

ರೇಣುಕಾಚಾರ್ಯ..........!

ಒಬ್ಬ ಮಠಾಧೀಶ..........!!

ಒಬ್ಬ ಹಿರಿಯ RSS ನಾಯಕ ಕಾರಿ..........!!!

-ಈ ತರದ ಅನೇಕ ಸಾಧ್ಯತೆಗಳು ಡಿತಾ ಇರಲಿಕ್ಕೂ ಸಾಕು.

ಜಗತ್ಪ್ರಸಿದ್ಧ ಬರಹಗಾರ ವಾಲ್ಟೇರ್‌ನ ಂಡೀಡ್' ಕಾದಂಬರಿಯಲ್ಲಿ ಒಮ್ಮೆ ಇದೇ ತರದ ಪ್ರಸಂಗ ುತ್ತದೆ. 18ನೇ ಶತಮಾನದ ಫ್ರಾನ್ಸ್‌ನ ಜನಜೀವನವನ್ನೇ ಪ್ರಭಾವಿಸಿ, ಲಿಸುವಷ್ಟು ಪ್ರಖರತೆಯಿಂದ ಬದುಕಿದ ವಾಲ್ಟೇರ್‌ಗೆ ಟಾಟಿಕೆಯ ಜನರನ್ನು ಕಂಡರೆ ಆಗುತ್ತಿರಲಿಲ್ಲ. ಅನೇಕ ಸಾರಿ ಅವನ ದಂಬರಿಗಳ ಪಾತ್ರಧಾರಿಗಳು ವಾಲ್ಟೇರ್‌ನ ಸಿಟ್ಟು ವ್ಯಂಗ್ಯ ಗೇಡಿತನಗಳನ್ನು ಆವಾಹಿಸಿಕೊಂಡಂತೆ ಮಾತನಾಡುತ್ತಿರುತ್ತಾರೆ.

ಈ ಕ್ಯಾಂಡೀಡ್ ಕಾದಂಬರಿಯಲ್ಲೂ ಅಂತದೇ ಒಂದು ಸಂಗವಿದೆ.



ಕಥಾನಾಯಕ ಕ್ಯಾಂಡೀಡ್ ಬಹಳ ಮುಗ್ಧ. ನಿಗೆ ಈ ಜಗತ್ತೆಲ್ಲವೂ ಒಳ್ಳೆಯತನದಿಂದ ಡಿದೆ, ಜನರೆಲ್ಲರೂ ನ್ಯಾಯ ನಿಜಾಯತಿಗಳಿಂದ, ರ್ಜಬೀರುಗಳಂತೆ ಇರುತ್ತಾರೆಂಬ ನಂಬಿಕೆ ುತ್ತದೆ. ನಮ್ಮ ಕನ್ನಡಿಗರಿಗೆ ಬಿಜೆಪಿಗಳ ಬಗ್ಗೆ ಬಿಕೆ ಇರುವಂತೆ!

ಈ ಕ್ಯಾಂಡೀಡ್‌ಗೆ ಗೆಳೆಯನೊಬ್ಬನಿದ್ದಾನೆ.

ಆತನೇ ಪಂಡಿತ ಪ್ಯಾನ್‌ಗ್ಲೋಸ್.

ಈತನನ್ನು ನೀವು ನಮ್ಮ ಹಿಂದೂ ಧರ್ಮ ಕರಂತೆ ಎಂದುಕೊಳ್ಳಬಹುದು. "All is for e best" ಎಂದು ನಂಬುವ, ಈ ಜಗತ್ತು ಇರುವುದಕ್ಕಿಂತ ಇನ್ನಷ್ಟು ಮತ್ತಷ್ಟು ತ್ತಮವಾಗಿರಲು ಸಾಧ್ಯವಿರಲಿಲ್ಲವೆಂಬ ಸಿದ್ಧಾಂತ ಈ ಪ್ಯಾನ್‌ಗ್ಲೋಸ್‌ನದ್ದು.

ಹೀಗಿರುವಾಗ ಹೆಂಗಸೊಬ್ಬಳ ಸಹವಾಸದಿಂದಾಗಿ ಪಂಡಿತ ಪ್ಯಾನ್‌ಗ್ಲೋಸ್‌ನಿಗೆ ಲೈಂಗಿಕ ಕಾಯಿಲೆ ಬಂದು ಅವನ ಒಂದು ಕಣ್ಣು, ಕಿವಿ, ಬೆರಳುಗಳು ನಷ್ಟವಾಗುತ್ತವೆ. ಈಗ ಸಚಿವ ಸವದಿಯ ಮಂತ್ರಿಗಿರಿ ನಷ್ಟವಾದಂತೆ. ತನ್ನ ದುಃಸ್ಥಿತಿ ಬಗ್ಗೆ ಮರುಗುತ್ತಾ ಪ್ಯಾನ್‌ಗ್ಲೋಸ್ ಈ ಕಾಯಿಲೆ ತನಗೆ ಹೇಗೆ ಬಂತೆಂದು ತನಿಖೆ ಮಾಡಲು ಹೊರಡುತ್ತಾನೆ.

ಆಗ ಅವನಿಗೆ ಗೊತ್ತಾಗುವ ವಿಚಾರವೇನೆಂದರೆ ಪ್ಯಾನ್‌ಗ್ಲೋಸ್‌ನ ಗೆಳತಿಗೆ ಆಕೆಯ ಧರ್ಮಗುರುವಿನಿಂದಲೂ, ಅವನಿಗೆ ತನ್ನ ಭಕ್ತೆಯೊಬ್ಬಳಿಂದಲೂ, ಆಕೆಗೆ ತನ್ನ ಮನೆಯ ಸೇವಕನೊಬ್ಬನಿಂದಲೂ ಈ ಲೈಂಗಿಕ ಕಾಯಿಲೆಯು ಉಡುಗೊರೆಯಾಗಿ ಪ್ರವಹಿಸಿ ಬಂದಿರುತ್ತದೆ.

ಇನ್ನೂ ವಿವರ ಕೇಳಲಾಗಿ ಆ ಸೇವಕನಿಗೆ ನೌಕಾ ಕ್ಯಾಪ್ಟನ್ ಒಬ್ಬನಿಂದಲೂ, ಆ ಕ್ಯಾಪ್ಟನ್‌ಗೆ ರಾಯಭಾರಿಯೊಬ್ಬನ ಪತ್ನಿಯಿಂದಲೂ, ಆಕೆಗೆ ಮಿಲಿಟರಿ ಅಧಿಕಾರಿಯೊಬ್ಬನಿಂದಲೂ, ಆತನಿಗೆ ಮಂತ್ರಿಯೊಬ್ಬನ ಪ್ರಿಯತಮೆ ಮೂಲಕವೂ ಈ ಕೊಡುಗೆ ಸಿಕ್ಕಿರುತ್ತದೆ.

ಈ ಉಡುಗೊರೆಯ ಸರಣಿ ಪ್ರಹಸನ ಹೀಗೇ ಸಾಗುತ್ತದೆ.

ಬಹುಶಃ ಸರಿಯಾಗಿ ತನಿಖೆ ಮಾಡಿದ್ದೇ ಆದರೆ ಈ ಸೆಕ್ಸ್ ಫಿಲಂ ಸಿ.ಸಿ. ಪಾಟೀಲನಿಗೆ ಸವದಿಯಿಂದಲೂ, ಸವದಿಗೆ ಕೃಷ್ಣ ಪಾಲೇಮಾರ್ ಮೂಲಕವೂ, ಆ ಮುತ್ಸದ್ದಿಗೆ......ರಿಂದಲೂ, ಆ ನೀಚನಿಗೆ .... ರಿಂದ ಸಿಕ್ಕಿತೆಂದು ಪುರಾವೆಗಳು ಸಿಗಲೂಬಹುದು.

2008 ರಿಂದ ಇವತ್ತಿವರೆಗೂ ಈ ಬಿಜೆಪಿ ಲಂಪಟರು ತಿಂಗಳಿಗೊಂದು ಸೆಕ್ಸ್ ಹಗರಣ ಸೃಷ್ಟಿಸಿದ್ದಾರೆ.

ಆಶ್ಚರ್ಯ ಏನೆಂದರೆ

ಈಗ ಬಿಜೆಪಿಯ ಶಾಸಕರೆಲ್ಲರೂ ಸವದಿಯ ಸೆಕ್ಸ್ ಗ್ಯಾಂಗ್‌ನ ಬೆಂಬಲಕ್ಕೆ ನಿಂತಿರುವುದು.

ಎಲ್ಲರ ಮನೆ ದೋಸೆ ತೂತಾದರೆ ಈ ಬಿಜೆಪಿಗಳ ಮನೇಲಿ ಹೆಂಚೇ ತೂತು ಬಿದ್ದಿರುವಂತಿದೆ ಅಲ್ವಾ?



•ಪಾರ್ವತೀಶ• ಬಿಡಿ ಚಿತ್ರಗಳು

ಚಂಪಾ ಹುಡುಕಿದ 'ಸ್ಕೀ'

'ಅಂತ್ಯಜರ ತತ್ವ ಚಿಂತನೆ' ಪುಸ್ತಕದ ಕುರಿತ ವಿಚಾರ ಸಂಕಿರಣಕ್ಕೆಂದು ಮೊನ್ನೆ ನಾನು ಧಾರವಾಡಕ್ಕೆ ಹೋಗಿದ್ದೆ. ಕಾರ್ಯಕ್ರಮವೆಲ್ಲಾ ಮುಗಿದಾದ ನಂತರ ಗೆಳೆಯರೊಂದಿಗೆ ಹರಟೆಯ ಗೋಷ್ಠಿ ಎಂ.ಡಿ. ಒಕ್ಕುಂದ, ಆಕಾಶವಾಣಿಯ ಮಿತ್ರ ರಾಮಡಗಿ, ಕರ್ನಾಟಕ ವಿವಿಯ ಸಂಶೋಧನಾ ವಿದ್ಯಾರ್ಥಿ ಮಂಜುನಾಥ್, ಬಂಜಗೆರೆ ಜಯಪ್ರಕಾಶ್ ಎಲ್ಲಾ ಕಲೆತು ಹರಟೆ, ನಗಾಡಿ ಎದ್ದು ಬಂದೆವು. ಸಾಂಸ್ಕೃತಿಕ ನಗರಿ ಧಾರವಾಡವನ್ನಾಳಿದ ಅತಿರಥ ಮಹಾರಥರು ಸೃಷ್ಟಿಸಿದ ಸನ್ನಿವೇಶ, ಮಾತಿನ ಮೋಡಿ, ಪ್ರಹಸನಗಳ ಮರು ಮೆಲುಕಿನ ಸೆಷನ್‌ನಂತಿತ್ತು ನಮ್ಮ ಸದನ ಸಮಾವೇಶ. ಚಂಪಾರ ಮಾತಿನ ಮಜಾ ಹಾಗೂ ಮುದ ನೀಡುವ ಅನೇಕ ಸನ್ನಿವೇಶಗಳನ್ನು ಒಕ್ಕುಂದ ಹೇಳಿದರು. ನಾನು ಅಲ್ಲಿ ಹೇಳಿದ ಈಗ ನಿಮಗೂ ಹೇಳಬೇಕೆನಿಸಿರುವ ಅಂತಹ ಒಂದು 'ಚಂಪಾ ಮಾತು' ಹೀಗಿದೆ.

ನಿಮಗೆ ಬುದ್ದಣ್ಣ ಹಿಂಗಮಿರೆ ತಿಳಿದಿರಬಹುದು. ಈ ಕನ್ನಡದ ಎಡಪಂಥೀಯ ಹಿರಿಯ ಕವಿ ಹಾಗೂ ನಾಟಕಕಾರ ಚಂಪಾರ ಮಿತ್ರ ಕೂಡ. ಬುದ್ದಣ್ಣರಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಕೂಡ ಸಿಕ್ಕಿದೆ.

ಒಮ್ಮೆ ಬುದ್ದಣ್ಣ ಸೋವಿಯತ್ ರಷ್ಯಾಕ್ಕೂ ಹೋಗಿ ಬಂದಿದ್ದರು. ಹಾಗೆ ಹೋಗಿ ಬಂದ ಹೊಸತರಲ್ಲಿ ಅವರ ಅನುಭವ ಹಂಚಿಕೊಳ್ಳಲೆಂದು ಗೆಳೆಯರು ಒಂದು ಗೋಷ್ಠಿ ಏರ್ಪಡಿಸಿದರು. ಅದು ಪಾನಗೋಷ್ಠಿಯೇ ಹೌದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ!



ಗೋಷ್ಠಿಯಲ್ಲಿ ಬುದ್ದಣ್ಣರ ಮಾತು ಶುರುವಾಯಿತು. ಅವರು ರಷ್ಯಾದಲ್ಲಿ ತಾವು ನೋಡಿದ, ಕೇಳಿದ, ಗ್ರಹಿಸಿದ ನೂರಾರು ಸಂಗತಿಗಳನ್ನು ಇಲ್ಲಿನ ಕಮ್ಯೂನಿಸ್ಟರಿಗೆ ನಿರೂಪಿಸಿದರು. 'ಇಲ್ಲಿ ಇಂಡಿಯಾದೊಳಗೆ ಕ್ರಾಂತಿ ಆಗದಿದ್ದರೇನಾತು, ಅಲ್ಲಿ ರಶಿಯಾ ಕಾಮ್ರೇಡರು ಕ್ರಾಂತಿ ಮಾಡ್ಯಾರಲ್ಲ ಸಾಕು ಬಿಡೆಂಬಂತೆ ಎಲ್ಲರೂ ಕೇಳಿಸಿಕೊಂಡರು. ಹಾಗೆ ಮಾತಿನ ಮಧ್ಯೆ ಬುದ್ದಣ್ಣರಿಗೆ, ರಶಿಯಾದವನ ಒಂದು ಹೆಸರು ತಕ್ಷಣ ನೆನಪಿಗೆ ಬರಲಿಲ್ಲ.

"ಅವ ಅದಾನಲ್ಲ......ಸ್ಕೀ" ಅನ್ನುತ್ತಾ ಹೆಸರು ಹೇಳಲಾಗದೆ ಒದ್ದಾಡತೊಡಗಿದರು. ಗೋಷ್ಠಿಗರಲ್ಲಿ ಒಬ್ಬ ಅಂದ

"ಟ್ರಾಟ್‌ಸ್ಕೀನಾ ಸಾರ್."

"ಅಲ್ಲಪ್ಪಾ"

"ಮತ್ತೇನು ಮಯಕೋವ್ ಸ್ಕೀನೇನ್ರಿ"

"ಅಲ್ಲಪಾ ಅಂವಾ ಅಲ್ಲ"

"ಇನ್ನ ಮತ್ಯಾರ್ರಿ" ಅಂದ.

ಆಗ ಚಂಪಾರ ಎಂಟ್ರಿ ಆಯಿತು.

"ನಂಗ್ ಗೊತ್ತಾತು ಬಿಡೆಪ" ಅಂದರು ಚಂಪಾ.

ಎಲ್ಲರ ಕೈಲಿದ್ದ ಡ್ರಿಂಕ್ಸ್ ಗ್ಲಾಸ್‌ಗಳೂ ಒಂದರೆ ಕ್ಷಣ ಓಲಾಡಿದವು.

"ಯಾರ್ರಿ ಸರ ಈ ಸ್ಕೀ ... ಹೇಳ್ರಿ"

"ಅದೇ..."

"ಹ್ಞೂ ಹೇಳ್ರಿ..."

"ವಿ........ ಸ್ಕೀ .... ವಿಸ್ಕಿ ಇರಬಹುದು ಅನಿಸ್ತದ ನನಿಗೆ."

ಇದು ಚಂಪಾ ಶೈಲಿ.


ತ್ರಿಕರಣಗಳ ಅಬ್ಬರದ ನಡುವೆ 'ಸಂವಾದ'ಕ್ಕೆ 10

ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

'ಸಂವಾದ'ಕ್ಕೆ ಈಗ ಹತ್ತರ ಸಂಭ್ರಮ. 'ನರಬಂಡಾಯ', 'ಬಂಡಾಯ', ೋಷಿತ', 'ಪಂಚಮ', 'ಸುದ್ದಿ ಸಂಗಾತಿ' ಮೊದಲಾದ ಪತ್ರಿಕೆಗಳು ಶೋಷಿತ ಮುದಾಯಗಳ ನಡುವಿನಿಂದಲೇ ಹುಟ್ಟಿ ಆ ಸಮುದಾಯಗಳ ಒಡಲ ಂಕಟಗಳಿಗೆ ಕೆಲಕಾಲ ಮದ್ದು ನೀಡಲು ಯತ್ನಿಸಿ ಮರೆಯಾದವು. ಈ ಂದೆ ತಾವು ದುಡಿದ ಅನೇಕ ಪತ್ರಿಕೆಗಳ ಅನುಭವ 'ಸಂವಾದ'ವನ್ನು ಲ್ಲಿಯೂ ಮೊನಾಟನಸ್ ಅನ್ನಿಸದೆ ರೂಪಿಸುವ ಕಸುಬುದಾರಿಕೆ ಇಂಥದೊಂದು ಶೇಷಾಂಕವನ್ನು ಹೊರತರುವಂತೆ ಸಂಪಾದಕರಾದ ಂದೂಧರ ಹೊನ್ನಾಪುರ ಅವರನ್ನು ್ರೇರೇಪಿಸಿರಲೂಬಹುದು. ಈ ಹಿಂದೆ ಪ್ರಕಟಗೊಂಡಿರುವ ಂವಾದ'ದ ಒಂದೆರಡು ವಿಶೇಷಾಂಕಗಳಿಗಿಂತಲೂ ಹತ್ತರ ಿ ವಿಶೇಷಾಂಕ ಹಲವು ಕಾರಣಗಳಿಗಾಗಿ ಂಗ್ರಹಯೋಗ್ಯವಾಗಿದೆ. "ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳೆಂಬ 'ತ್ರಿಕರಣ'ಗಳ ಅಮಾನವೀಯ ಾಳಿ ಜಗತ್ತಿನ ಎಲ್ಲ ದೇಶಗಳನ್ನೂ ಕಿತ್ತು ತಿನ್ನುತ್ತಿವೆ. ದರ ಹುಟ್ಟಿಗೆ ಕಾರಣವಾದ ಅಮೆರಿಕಾವನ್ನು ಸಹ. ಂಥ ಸಂದರ್ಭದಲ್ಲಿ ಈ 'ತ್ರಿಕರಣ'ಗಳನ್ನು ಮೆಟ್ಟಿನಿಂತು ೊಸ ಭರವಸೆಗಳನ್ನು ಮೂಡಿಸುತ್ತಿರುವ ಲ್ಯಾಟಿನ್ ಮೆರಿಕಾ ದೇಶಗಳು ಈಗ ಇದೀ ಜಗತ್ತಿನ ಗಮನ ೆಳೆಯುತ್ತಿವೆ. ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ರೆಯುತ್ತಿರುವ ಈ ದೇಶಗಳು ನಮಗೆಲ್ಲ ಾದರ್ಶವಾಗಬೇಕಾಗಿದೆ" ಎಂಬ ಸಂಪಾದಕರ ಾತುಗಳಿಗೆ ಇಲ್ಲಿ ಪ್ರಕಟಗೊಂಡಿರುವ 9 ಕತೆಗಳು, 15 ಲೇಖನಗಳು ುತ್ತು 20 ಪದ್ಯಗಳು ಧ್ವನಿಸುತ್ತವೆ. ಕರ್ನಾಟಕದ ರಾಜಕೀಯ ತಲುಪಿರುವ ಈ ಪತನದ ಹೊತ್ತಲ್ಲಿ 'ಸಂವಾದ' ಪ್ರಜಾಪ್ರಭುತ್ವದ ಹೋರಾಟಕ್ಕೆ ಜನರನ್ನು ಅಣಿಗೊಳಿಸಲು ಸಜ್ಜಾಗುತ್ತಿರುವಂತೆ ಹೊರಬಂದಿದೆ. 1987ರಲ್ಲಿ ಘಟಿಸಿದ ಬೆಂಡಿಗೇರಿ ಪ್ರಕರಣದಲ್ಲಿ ಕ್ಷುಲ್ಲಕ ಕಾರಣವೊಂದನ್ನು ನೆಪವಾಗಿಟ್ಟುಕೊಂಡು ಸವರ್ಣೀಯರು ಐದು ಮಂದಿ ದಲಿತರಿಗೆ ಬಲವಂತವಾಗಿ ಮಲ ತಿನ್ನಿಸಿದ್ದರು. ಡಿಎಸ್ಸೆಸ್ ಜತೆಗೂಡಿ 'ಪಂಚಮ' ನಡೆಸಿದ ಪ್ರತಿಭಟನೆಯಿಂದಾಗಿ ಅವತ್ತಿನ ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಆರೋಪಿ ಸ್ಥಾನದಲ್ಲಿ ನಿಲ್ಲುವಂತಾಯಿತು. 'ಪಂಚಮ' ಹುಟ್ಟುಹಾಕಿದ ಇಂತಹ ಅನೇಕ ಸಂಘರ್ಷದ ಕಥನಗಳನ್ನು ಡಾ.ಬಿ.ಎಂ.ಪುಟ್ಟಯ್ಯನವರ 'ಪಂಚಮ ನಾಡೊಳಗೆ' ಎಂಬ ಅಂಕಣ ಬರಹವು ವಿವರಿಸುತ್ತದೆ.




ರಹಮತ್ ತರೀಕೆರೆಯವರ 'ಲೋಟ ತಟ್ಟೆಯ ಮೂರು ಪ್ರಸಂಗಗಳು' ಲೇಖನವಂತೂ ಇನ್ನೂ ಮಡಿಮೈಲಿಗೆಯಲ್ಲಿಯೇ ಸಿಕ್ಕಿ ನರಳುತ್ತಿರುವ ಈ ಸಮಾಜದ ಮೂರು ದಾರುಣ ಚಿತ್ರಗಳನ್ನು ಆರ್ದ್ರವಾಗಿ ಹಸಿಹಸಿಯಾಗಿ ಕಟ್ಟಿಕೊಡುತ್ತದೆ. "ಮನುಷ್ಯ ದೇಹದ ಸ್ಪರ್ಶದಿಂದ ಮೈಲಿಗೆ ಬರುತ್ತದೆ ಎಂದು ನಂಬಿರುವ ಸಾಂಪ್ರದಾಯಿಕ ಸಮಾಜವು, ಉಣ್ಣುವ ಕುಡಿಯುವ ವಿಷಯದಲ್ಲಿ, ಆಹಾರ ಬಡಿಸುವ ಲೋಟ ತಟ್ಟೆಗಳಿಗೆ ತಾಗುವ ಎಂಜಲಿನಿಂದಲೂ ಮೈಲಿಗೆ ಬರುತ್ತದೆ ಎಂದು ಭಾವಿಸಿದೆ. ಈ ಎಂಜಲಿನ ಆತಂಕವು, ದಲಿತರು ಮತ್ತು ಸವರ್ಣೀಯರ ನಡುವೆ ಮಾತ್ರವಲ್ಲ ಶೂದ್ರಜಾತಿಗಳ ನಡುವೆ ಕೂಡ ಇದೆ" ಎನ್ನುವುದನ್ನು ತಾವು ಕಂಡ ಮೂರು ಘಟನೆಗಳ ಮೂಲಕ ತರೀಕೆರೆಯವರು ಮಡಿಮೈಲಿಗೆಯ ಜಡ ಜಗತ್ತಿನಲ್ಲಿ ಕೊಳೆಯುತ್ತಿರುವ ಮನುಷ್ಯ ಮುಖಗಳನ್ನು ಪರಿಚಯಿಸುತ್ತಾರೆ.

ಕೇಶವ ಮಳಗಿ, ಕೆ.ನೀಲಾ, ವಿನಯಾ, ಭಾನು ಮುಷ್ತಾಕ್, ದು.ಸರಸ್ವತಿ, ಮಂಜುನಾಥ ಲತಾ, ಎಸ್.ಬಿ.ಜೋಗುರರ ಕತೆಗಳು ಬಹುಕಾಲ ನೆನಪಿನಲ್ಲುಳಿಯುತ್ತವೆ. ದೇವನೂರರು ಎಪ್ಪತ್ತರ ದಶಕದಲ್ಲಿ ಬರೆದ 'ಮಾನವೀಯತೆ ಅಂತಾರಲ್ಲ ಅದರ ಬಗ್ಗೆ' ಎಂಬ ಅಪರೂಪದ ಲೇಖನವನ್ನು ಮತ್ತೆ ತಿದ್ದಿತೀಡಿ ಚೆಂದಗೊಳಿಸಿದ್ದಾರೆ. ವಿ.ಎಸ್.ಶ್ರೀಧರ ಅವರ 'ಲ್ಯಾಟಿನ್ ಅಮೆರಿಕಾದ ಪಾಠಗಳು', ನಟರಾಜು ಬೂದಾಳು ಅವರ 'ಈ ದಶಕದ ಕೆಲವು ವೈಚಾರಿಕ ಬೆಳವಣಿಗೆಗಳು' ಹಾಗೂ ನಟರಾಜ್ ಹುಳಿಯಾರರ 'ಸ್ವಾತಂತ್ರ್ಯೋತ್ತರ ಕರ್ನಾಟಕ ಮತ್ತು ಜಾತ್ಯತೀತತೆ: ಒಂದು ನೋಟ' ಲೇಖನಗಳು ದಣಿವು ಕಾಣದ ಜನತೆಯ ಹೋರಾಟದ ಅನೇಕ ಆಯಾಮಗಳನ್ನು ತೆರೆದಿಡುತ್ತವೆ. ಬಾಪು ಹೆದ್ದೂರಶೆಟ್ಟಿ, ಹಸನ್ ನಯೀಂ ಸುರಕೋಡ, ಜಿ.ರಾಜಶೇಖರ, ಹುಲಿಕುಂಟೆ ಮೂರ್ತಿ, ಬಾಲಗುರುಮೂರ್ತಿ, ರಂಗನಾಥ ಕಂಟನಕುಂಟೆ ಮೊದಲಾದವರ ಮೌಲಿಕ ಬರಹಗಳನ್ನು 'ಸಂವಾದ' ವಿಶೇಷಾಂಕ ಒಳಗೊಂಡಿದೆ.


ಕಲಾವಿದ ಮುರಳೀಧರ ರಾಠೋಡ್ ರೂಪಿಸಿರುವ ಈ ವಿಶೇಷಾಂಕದ ಮುಖಪುಟ ಮತ್ತು ಒಳಪುಟಗಳ ವಿನ್ಯಾಸವಂತೂ ಪದೇಪದೇ 'ಸಂವಾದ'ದ ಚಂದವನ್ನು ತೂಗಿನೋಡುವಂತೆ ಮಾಡುತ್ತದೆ. ಅವರ ಹಳಗಿದ ವಿನ್ಯಾಸದ ಶ್ರದ್ಧೆಯನ್ನು ಕಾಣಲು ಈ ವಿಶೇಷಾಂಕವನ್ನೊಮ್ಮೆ ನೋಡಬಹುದು.



ಸಂವಾದ ವಿಶೇಷಾಂಕ - 2012
ಸಂಪಾದಕರು: ಇಂದೂಧರ ಹೊನ್ನಾಪುರ
ಸ್ಫೂರ್ತಿಧಾಮ, ಅಂಜನಾನಗರ,
ಮಾಗಡಿ ರಸ್ತೆ ವಿಶ್ವನೀಡಂ ಅಂಚೆ, ಬೆಂಗಳೂರು-91
ಪುಟಗಳು: 274, ಬೆಲೆ: 50.



'ಕೇಸರಿ ಭಯೋತ್ಪಾದನೆ' -ಹಿರಿಯ ವಿದ್ವಾಂಸ ಸುರೇಶ ಭಟ್ ಬಾಕ್ರಬೈಲು ಬರೆದಿರುವ ಕೇಸರಿ ಭಯೋತ್ಪಾದನೆ ಪುಸ್ತಕವನ್ನು ನಾವು ಲಂಕೇಶ್ ಪ್ರಕಾಶನದ ಮೂಲಕ ಪ್ರಕಟಿಸುತ್ತಿದ್ದೇವೆ. ಇದೇ ಫೆಬ್ರವರಿ 10 ರಂದು ಮಂಗಳೂರಿನಲ್ಲಿ ಪುಸ್ತಕ ಬಿಡುಗಡೆಯಾಗುತ್ತಿವೆ. ಈ ಹಿಂದೂತ್ವವಾದಿ ಟೆರರಿಸ್ಟರಿಗೂ ಫ್ಯಾಸಿಸಂ ಹಾಗೂ ನಾಜಿಸಂಗೂ ಇರುವ ನಂಟಿನ ಬಗ್ಗೆ ಸುರೇಶ್ ಒಂದು ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಅದರ ಆಯ್ದ ಭಾಗವನ್ನಿಲ್ಲಿ ಪ್ರಕಟಿಸಿದೆ.



ಹಿಂದೂತ್ವದ ಮೇಲೆ ಫ್ಯಾಸಿಸ್ಟ್ ಮತ್ತು ನಾಜಿ ಸಿದ್ಧಾಂತಗಳ ಪ್ರಭಾವ


ಹಿಂದೂ ರಾಷ್ಟ್ರೀಯವಾದಿಗಳ ಮೇಲೆ ಫ್ಯಾಸಿಸಂ ಮತ್ತು ನಾಜಿಸಂ ಸಿದ್ಧಾಂತಗಳು ಗಾಢ ಪ್ರಭಾವ ಬೀರಿದ್ದವು. ಅವರ ಪಾಲಿಗೆ ಇಟಲಿ ಮತ್ತು ಜರ್ಮನಿಗಳು ಸ್ಫೂರ್ತಿಯ ಸೆಲೆಗಳಂತಿದ್ದವು. ಜನರಲ್ಲಿ ಸೈನಿಕ ಮನೋಪ್ರವೃತ್ತಿ ಬೆಳೆಸಿ ಹಿಂದೂ ಸಮಾಜವನ್ನು ಸೈನ್ಯೀಕರಣಗೊಳಿಸುವ ಚಿಂತನೆಗಳು ಅಲ್ಲಿಂದಲೇ ಹರಿದುಬಂದಿವೆ.

ಸಾವರ್ಕರ್ ತನ್ನ 'ಹಿಂದೂತ್ವ' ಪ್ರಬಂಧದಲ್ಲಿ ಪ್ರತಿಪಾದಿಸಿದ, ಸೈದ್ಧಾಂತಿಕ ಮಟ್ಟದಲ್ಲಿ ಅನ್ಯ ಸಮುದಾಯಗಳನ್ನು ಶತ್ರುಗಳನ್ನಾಗಿಸುವ ಆಂತರಿಕ ವೈರಿಯ ಕಲ್ಪನೆ ಫ್ಯಾಸಿಸ್ಟ್ ಮತ್ತು ನಾಜಿ ಮಾರ್ಗದಲ್ಲಿ ಬೆಳೆದು ಗಟ್ಟಿಗೊಂಡಿತು. ಜರ್ಮನಿಯ ಜನಾಂಗ ನೀತಿಯನ್ನು ಹಾಗೂ ಅಲ್ಲಿನ ಯಹೂದ್ಯ ಸಮಸ್ಯೆಯನ್ನು ಭಾರತದ ಮುಸ್ಲಿಂ ಪ್ರಶ್ನೆಗೆ ಎಡೆಬಿಡದೆ ಹೋಲಿಸಿರುವುದೇ ಇದಕ್ಕೆ ಸಾಕ್ಷಿ. ಒಂದು ನಿರ್ದಿಷ್ಟ ಮಟ್ಟದವರೆಗೆ ಇಟೆಲಿಯ ಸರಕಾರದೊಂದಿಗೆ ನೇರ ಸಂಪರ್ಕವನ್ನೂ ಇರಿಸಿಕೊಳ್ಳಲಾಗಿತ್ತು. ಆರೆಸ್ಸೆಸ್ ಸಂಸ್ಥಾಪಕ ಡಾ। ಬಿ.ಎಸ್. ಮೂಂಜೆ ಇಟಲಿಗೆ ತೆರಳಿ ಅಲ್ಲಿನ ಸೇನಾ ತರಬೇತಿ ಶಾಲೆಗಳನ್ನೂ, ಯುವಜನ ಸಂಘಟನೆಗಳನ್ನೂ ಅಭ್ಯಸಿಸಿದ್ದರಲ್ಲದೆ ಮುಸೊಲಿನಿಯನ್ನೂ ಭೇಟಿಯಾಗಿದ್ದರು.

ಭಾರತದಲ್ಲಿ ಹಿಂದೂ ಫ್ಯಾಸಿಸಂ ಬೆಳೆದ ಬಗ್ಗೆ

ಚಿತ್ಪಾವನ ಬ್ರಾಹ್ಮಣನಾಗಿದ್ದ ತಿಲಕರಿಂದ ಸ್ಥಾಪಿಸಲ್ಪಟ್ಟ ಮರಾಠಿ ವಾರಪತ್ರಿಕೆ 'ಕೇಸರಿ' 1924ರಿಂದ 1935ರ ತನಕ ಇಟಲಿ, ಫ್ಯಾಸಿಸಂ ಹಾಗೂ ಮುಸೊಲಿನಿ ಕುರಿತಂತೆ ಹಲವಾರು ಸಂಪಾದಕೀಯಗಳನ್ನೂ ಲೇಖನಗಳನ್ನೂ ಪ್ರಕಟಿಸಿತು. ರಾಜಕೀಯ ಸಮಸ್ಯೆಗಳಿಂದ ಕೂಡಿದ್ದ ಇಟಲಿಯಲ್ಲಿ ಸುವ್ಯವಸ್ಥೆಯನ್ನು ಮರುಸ್ಥಾಪಿಸಿದ್ದೇ ಫ್ಯಾಸಿಸಂ ಎಂದು ಬಿಂಬಿಸಲಾಯಿತು.

ಪತ್ರಿಕೆಯ ಲಂಡನ್ ಬಾತ್ಮಿದಾರನಾಗಿದ್ದ ಡಿ.ವಿ. ತಮ್ಹಾನ್ಕರ್ ಎಂಬಾತ ಮುಸೊಲಿನಿಯ ಜೀವನ ಚರಿತ್ರೆಯನ್ನು ಮರಾಠಿ ಭಾಷೆಯಲ್ಲಿ ಬರೆದರು. 'ಮುಸ್ಸೊಲಿನಿ ಆಣಿ ಫ್ಯಾಸಿಸ್ಮೊ' (ಮುಸೊಲಿನಿ ಮತ್ತು ಫ್ಯಾಸಿಸಂ; ಪ್ರ: 1927) ಹೆಸರಿನ ಈ ಪುಸ್ತಕದಲ್ಲಿ ಫ್ಯಾಸಿಸ್ಟ್ ಸಿದ್ಧಾಂತ, ಅದರ ಸರಕಾರ, ಅದರ ಸಾಮಾಜಿಕ ವ್ಯವಸ್ಥೆ ಮತ್ತು ವಿವಿಧ ಫ್ಯಾಸಿಸ್ಟ್ ಸಂಘಸಂಸ್ಥೆಗಳ, ವಿಶೇಷವಾಗಿ ಯುವ ಸಂಘಟನೆಗಳ ಕುರಿತ ವಿವರಗಳಿವೆ.



ಕೊನೆಕೊನೆಗೆ ಫ್ಯಾಸಿಸ್ಟರ ಮತ್ತು ನಾಜಿಗಳ ಏಕಚಕ್ರಾಧಿಪತ್ಯಗಳ ನಿಜಬಣ್ಣ ಬಯಲಾಗಿದ್ದರೂ, ಹಿಟ್ಲರ್ ಮುಸೊಲಿನಿಗಳು ನಡೆಸಿದ ದೌರ್ಜನ್ಯಗಳ ಅರಿವಾದರೂ ಹಿಂದೂ ರಾಷ್ಟ್ರೀಯವಾದಿಗಳು ಹೊಂದಿದ್ದ ಸದ್ಭಾವನೆ ಮಾತ್ರ ಒಂದಿನಿತೂ ಕುಗ್ಗಲಿಲ್ಲ. ಫ್ಯಾಸಿಸಂ, ನಾಜಿಸಂ ಕುರಿತ ಸಹಾನುಭೂತಿ ಒಳಗಿಂದೊಳಗೆ ಮುಂದುವರಿಯಿತು. ಮುಸೊಲಿನಿಯನ್ನೂ ಒಳಗೊಂಡಂತೆ ಇಟಲಿಯ ಫ್ಯಾಸಿಸ್ಟ್ ಆಡಳಿತದ ಪ್ರತಿನಿಧಿಗಳ ಜತೆ ನೇರ ಸಂಪರ್ಕ ಸಾಧಿಸಿದ್ದ ಪ್ರಮುಖ ಹಿಂದೂ ರಾಷ್ಟ್ರೀಯವಾದಿಗಳ ನಡುವಿನಲ್ಲಿ ಡಾ। ಬಿ.ಎಸ್. ಮೂಂಜೆ ಅಗ್ರಸ್ಥಾನ ಪಡೆಯುತ್ತಾನೆ.


ಡಾ। ಬಿ.ಎಸ್. ಮೂಂಜೆ

1872ರಲ್ಲಿ ಬಿಲಾಸ್‌ಪುರ (ಈಗಿನ ಛತ್ತೀಸ್‌ಗಢ ರಾಜ್ಯ)ದ ದೇಶಸ್ಥ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಬಾಲಕೃಷ್ಣ ಶಿವರಾಮ ಮೂಂಜೆ 1898ರಲ್ಲಿ ಮುಂಬಯಿನ ಗ್ರಾಂಟ್ ಮೆಡಿಕಲ್ ಕಾಲೇಜಿನಿಂದ ವೈದ್ಯಕೀಯ ಪದವಿ ಪಡೆದರು. ಬಳಿಕ ಮುಂಬಯಿ ಮುನಿಸಿಪಾಲಿಟಿಯ ವೈದ್ಯಕೀಯ ಅಧಿಕಾರಿಯಾಗಿ ವೃತ್ತಿಜೀವನ ಆರಂಭಿಸಿದರು. ದಕ್ಷಿಣ ಆಫ್ರಿಕಾದ ಬೋಯರ್ ಯುದ್ಧದ ವೇಳೆ ಬ್ರಿಟಿಷ್ ಸೈನ್ಯದಲ್ಲಿ ಸೇವೆ ಸಲ್ಲಿಸಿದ ನಂತರ ನಾಗಪುರದಲ್ಲಿ ಪ್ರಾಕ್ಟೀಸು ಮಾಡತೊಡಗಿದರು. ಸ್ವಾತಂತ್ರ್ಯ ಹೋರಾಟದಿಂದ ಆಕರ್ಷಿತನಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಓರ್ವ ಮುಖಂಡನೂ ಆದರು. ಚಿಕ್ಕಂದಿನಲ್ಲೇ ತಾಯ್ತಂದೆಯರನ್ನು ಕಳೆದುಕೊಂಡಿದ್ದ ದೇಶಸ್ಥ ಬ್ರಾಹ್ಮಣ ಕೇಶವರಾವ್ ಬಲಿರಾಮ ಹೆಡ್ಗೆವಾರ್‌ರನ್ನು ನಾಗಪುರದ ತನ್ನ ಮನೆಯಲ್ಲಿರಿಸಿಕೊಂಡರು. ಅವರೀರ್ವರ ನಡುವಿನ ಸಂಬಂಧ ಒಂದು ರೀತಿಯಲ್ಲಿ ಅಪ್ಪಮಕ್ಕಳ ಸಂಬಂಧದಂತಿತ್ತು. ಡಾ। ಮೂಂಜೆಯಲ್ಲಿ ಸಂಪೂರ್ಣ ವಿಶ್ವಾಸ ಇರಿಸಿದ್ದ ಹೆಡ್ಗೆವಾರ್ ಪ್ರತಿಯೊಂದು ವಿಷಯಕ್ಕೂ ಆತನ ಸಲಹೆ ಪಡೆಯುತ್ತಿದ್ದರು. ಇದೇ ಹೆಡ್ಗೆವಾರ್ ನಂತರ ಆರೆಸ್ಸೆಸ್‌ನ್ನು ಸ್ಥಾಪಿಸಿ ಅದರ ಪ್ರಥಮ ಸರಸಂಘಚಾಲಕನಾದರು.

ಡಾ। ಮೂಂಜೆ ತಿಲಕರ ಬೆಂಬಲಿಗನಷ್ಟೇ ಅಲ್ಲ, ಅನುಯಾಯಿಯೂ ಆಗಿದ್ದರು. ದೇಶದುದ್ದಗಲಕ್ಕೂ ಸುತ್ತಿದ ಡಾ। ಮೂಂಜೆ ತಿಲಕರಿಗಾಗಿ ಭಾರೀ ಮೊತ್ತದ ನಿಧಿಗಳನ್ನು ಸಂಗ್ರಹಿಸಿ ಕೊಟ್ಟಿದ್ದರು.


1920ರಲ್ಲಿ ತಿಲಕರ ಮರಣಾನಂತರ ಕಾಂಗ್ರೆಸ್ ತ್ಯಜಿಸಿದ ಮೂಂಜೆ ನಂತರ *ಹಿಂದೂ ಮಹಾಸಭಾ* ಸೇರಿದರು. 1926ರಿಂದ 1931ರ ತನಕ ಕಾರ್ಯದರ್ಶಿಯಾಗಿ ದುಡಿದ ನಂತರ ಅಧ್ಯಕ್ಷನಾದರು. 1937ರಲ್ಲಿ ಸಾವರ್ಕರ್ ಗೃಹಬಂಧನದಿಂದ ಮುಕ್ತಗೊಂಡು ಸಂಪೂರ್ಣ ಸ್ವತಂತ್ರನಾದಾಗ ಅಧ್ಯಕ್ಷ ಪದವನ್ನು ಸಾವರ್ಕರ್‌ಗೆ ಬಿಟ್ಟುಕೊಟ್ಟರು. 1925ರಲ್ಲಿ ಆರೆಸ್ಸೆಸ್ ಸ್ಥಾಪನೆಯಾದ ಬಳಿಕ ಅದರಲ್ಲೂ ದುಡಿದರು. ಆರೆಸ್ಸೆಸ್ ಕುರಿತಂತೆ ಬ್ರಿಟಿಷರ ಒಂದು ಗುಪ್ತಚರ ವರದಿ (1933) ಆರೆಸ್ಸೆಸ್‌ನ ಫ್ಯಾಶಿಸ್ಟ್ ಗುಣವನ್ನೂ ಅದಕ್ಕೂ ಮೂಂಜೆಗೂ ಇದ್ದ ನಂಟುಗಳನ್ನೂ ಹೊರಗೆಡವುತ್ತದೆ. ಆ ವರದಿಯ ಪ್ರಕಾರ 1927ರಲ್ಲಿ ಮರಾಠಿ ಭಾಷಾ ಜಿಲ್ಲೆಗಳಲ್ಲಿ ಹಾಗೂ ಕೇಂದ್ರೀಯ ಪ್ರಾಂತಗಳಲ್ಲಿ ಆರೆಸ್ಸೆಸ್‌ನ್ನು ಪುನರ್‌ವ್ಯವಸ್ಥಿತಗೊಳಿಸುವ ಜವಾಬ್ದಾರಿಯನ್ನು ಮೂಂಜೆಗೆ ವಹಿಸಲಾಗಿತ್ತು. 'ಇಟಲಿಯ ಫ್ಯಾಸಿಸ್ಟರ ಮತ್ತು ಜರ್ಮನಿಯ ನಾಜಿಗಳ ಮಾದರಿಯಲ್ಲೇ ಭವಿಷ್ಯದ ಭಾರತದಲ್ಲಿಯೂ ಕಾರ್ಯಾಚರಿಸುವ ದಿನವನ್ನು ಆರೆಸ್ಸೆಸ್ ಎದುರು ನೋಡುತ್ತಿದೆ ಎಂದರೆ ಅದು ಪ್ರಾಯಶಃ ಅತಿಶಯೋಕ್ತಿ ಆಗಲಾರದು' ಎನ್ನುತ್ತದೆ ಆ ವರದಿ. ಸ್ವತಂತ್ರ ಭಾರತದ ಪ್ರಸಕ್ತ ವಿದ್ಯಮಾನಗಳು ಇದನ್ನೆಲ್ಲಾ ಸಾಬೀತುಪಡಿಸುವಂತಿವೆ.

ಮೂಂಜೆ 1920ರ ದಶಕದಲ್ಲೇ ಮಿಲಿಟರಿ ಶಿಕ್ಷಣದ ಕುರಿತು ಚಿಂತಿಸಲಾರಂಭಿಸಿದರು. 1929ರಲ್ಲಿ ಸ್ಯಾಂಡ್‌ಹರ್ಸ್ಟ್ ಮಿಲಿಟರಿ ಅಕಾಡೆಮಿಯ ಆಯ್ಕೆ ಆಯೋಗದ ಸದಸ್ಯನಾದರು. ಅದೇ ವರ್ಷ ನಾಗಪುರದಲ್ಲಿ 'ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ' ಸ್ಥಾಪಿಸಿದರು. ಕಾಂಗ್ರೆಸಿಗರ ವಿರೋಧದ ಹೊರತಾಗಿಯೂ ಎರಡೆರಡು ಬಾರಿ ಲಂಡನ್ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿ ಹಿಂದೂಗಳ ಪರವಾಗಿ ವಾದ ಮಂಡಿಸಿದರು. 1931ರ ದುಂಡು ಮೇಜಿನ ಪರಿಷತ್ತನ್ನು ಮುಗಿಸಿಕೊಂಡು ಲಂಡನ್‌ನಿಂದ ಹಿಂದಿರುಗುವ ದಾರಿಯಲ್ಲಿ ಇಟೆಲಿಗೂ ಭೇಟಿ ನೀಡಿದರು. ಇದರ ಹಿಂದೆ ಸ್ಪಷ್ಟ ಉದ್ದೇಶಗಳಿದ್ದವು. ಇಟೆಲಿಯಲ್ಲಿ ಸುದೀರ್ಘ ಕಾಲವಿದ್ದು ಕೆಲವು ಪ್ರಮುಖ ಮಿಲಿಟರಿ ಶಾಲೆಗಳಿಗೂ ಶೈಕ್ಷಣಿಕ ಸಂಸ್ಥೆಗಳಿಗೂ ಭೇಟಿ ನೀಡಿದರು. ಮಾರ್ಚ್ 19ರಂದು ರೋಮ್‌ನ ಮಿಲಿಟರಿ ಕಾಲೇಜು, ಕೇಂದ್ರ ದೈಹಿಕ ಶಿಕ್ಷಣ ಮಿಲಿಟರಿ ಶಾಲೆ ಹಾಗೂ ದೈಹಿಕ ಶಿಕ್ಷಣದ ಫ್ಯಾಸಿಸ್ಟ್ ಅಕಾಡೆಮಿಗಳನ್ನು ನೋಡಿಕೊಂಡು ಬಲಿಲ್ಲಾ, ಅವಾನ್ *ಗಾರ್ಡಿಸ್ಟಿ* ಸಂಘಟನೆಗಳ ಕಚೇರಿಗೆ ಭೇಟಿಯಿತ್ತರು. ಅಲ್ಲಿ ಸೇರ್ಪಡೆಯಾಗಿದ್ದ 6ರಿಂದ 18 ವರ್ಷ ಪ್ರಾಯದ ಮಕ್ಕಳಿಗೆ ವಾರಕ್ಕೊಮ್ಮೆ ನೀಡುತ್ತಿದ್ದ ದೈಹಿಕ ಕಸರತ್ತು, ಸೇನಾ ಮಾದರಿಯ ತರಬೇತಿ, ಡ್ರಿಲ್, ಪರೇಡ್ ಇತ್ಯಾದಿಗಳನ್ನು ಕಂಡು ಬಹಳ ಪ್ರಭಾವಿತರಾದರು. ಡಾ। ಮೂಂಜೆಯ ದಿನಚರಿಯ ಎರಡು ಪುಟಗಳನ್ನು ಈ ಭೇಟಿಯ ವಿವರಗಳಿಗೆ ಮೀಸಲಿಡಲಾಗಿದೆ. ಬಲಿಲ್ಲಾ, ಅವಾನ್ *ಗಾರ್ಡಿಸ್ಟಿ* ಗಳ ರಚನಾ ವಿನ್ಯಾಸಕ್ಕೂ ಆರೆಸ್ಸೆಸ್‌ನ ರಚನಾ ವಿನ್ಯಾಸಕ್ಕೂ ಬಹಳಷ್ಟು ಸಾಮ್ಯಗಳಿರುವುದು ಖಂಡಿತಾ ಕಾಕತಾಳೀಯವಲ್ಲ.



ಮಾರ್ಚ್ 19ರ ಅಪರಾಹ್ನ 3 ಗಂಟೆಗೆ ಇಟಲಿಯ ಫ್ಯಾಸಿಸ್ಟ್ ಸರಕಾರದ ಕೇಂದ್ರ ಕಚೇರಿಯಾಗಿದ್ದ ಪಲಾಜೋ ವೆಂಜಿಯಾದಲ್ಲಿ ಮುಸೊಲಿನಿಯನ್ನು ಭೇಟಿಯಾದರು. ಈ ವೈಯುಕ್ತಿಕ ಭೇಟಿಯ ವಿವರಗಳನ್ನು ತಮ್ಮ ದಿನಚರಿಯಲ್ಲಿ ದಾಖಲಿಸುತ್ತ ಮೂಂಜೆ ಬರೆಯುತ್ತಾರೆ, 'ನಾನು ಡಾ। ಮೂಂಜೆ' ಎನ್ನುತ್ತ ಆತನ ಕೈಕುಲುಕಿದೆ. ಆತ ನನ್ನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿದ್ದರು. ಆತ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಸೂಕ್ಷ್ಮ?ವಾಗಿ ಗಮನಿಸುತ್ತಿದ್ದಂತೆ ತೋರಿತು. ಗಾಂಧಿ ಮತ್ತಾತನ ಚಳವಳಿ ಕುರಿತು ಪ್ರಶ್ನಿಸಿದರು. ......ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದೀರಾ ಎಂದು ವಿಚಾರಿಸಿದರು. 'ನನಗೆ ಬಾಲಕರ ಮಿಲಿಟರಿ ತರಬೇತಿ ಯಲ್ಲಿ ಆಸಕ್ತಿ ಇರುವುದರಿಂದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ಗಳ ಮಿಲಿಟರಿ ಶಾಲೆಗಳಿಗೆ ಭೇಟಿ ನೀಡಿದ್ದೇನೆ. ಈಗ ಇಟಲಿಗೆ ಬಂದಿರು ವುದು ಅದೇ ಉದ್ದೇಶದಿಂದ. ......ಉತ್ತಮ ವ್ಯವಸ್ಥೆ ಮಾಡಿರುವುದಕ್ಕೆ ತಮಗೆ ತುಂಬಾ ಆಭಾರಿಯಾಗಿದ್ದೇನೆ. ಇವತ್ತು ಬೆಳಗ್ಗೆ ಮತ್ತು ಅಪರಾಹ್ನ ಬಲಿಲ್ಲಾ ಮತ್ತು ಫ್ಯಾಸಿಸ್ಟ್ ಸಂಸ್ಥೆಗಳನ್ನು ಕಂಡು ಬಹಳ ಪ್ರಭಾವಿತನಾದೆ. ಅವು ಇಟಲಿಯ ಅಭಿವೃದ್ಧಿ ಹಾಗೂ ಸಮೃದ್ಧಿಗಾಗಿ ಅವಶ್ಯವಾಗಿವೆ. ಅವುಗಳ ಮತ್ತು ಖಾವಂದರ ಬಗೆಗಿನ ಟೀಕೆಗಳು ಪತ್ರಿಕೆಗಳಲ್ಲಿ ಪದೇಪದೇ ಪ್ರಕಟವಾಗಿರುವುದನ್ನು ಕೂಡ ಓದಿರುತ್ತೇನೆ. ನನಗೆ ಆ ಸಂಸ್ಥೆಗಳಲ್ಲಿ ಆಕ್ಷೇಪಣೀಯ ವಿಷಯವೇನೂ ಕಾಣಿಸಲಿಲ್ಲ.'

ಮುಸೊಲಿನಿ: ಅವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?



ಡಾ। ಮೂಂಜೆ: ....ಮಹತ್ವಾಕಾಂಕ್ಷೆ ಹೊತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ಪ್ರತಿಯೊಂದು ದೇಶಕ್ಕೂ ಇಂತಹ ಸಂಸ್ಥೆಗಳ ಅವಶ್ಯಕತೆಯಿದೆ. ಕಳೆದ 150 ವರ್ಷಗಳ ಬ್ರಿಟಿಷ್ ಆಳ್ವಿಕೆಯಿಂದಾಗಿ ಭಾರತೀಯರು ಸೈನಿಕ ವೃತ್ತಿಯಿಂದ ದೂರವಾಗಿದ್ದಾರೆ. ಆದರೆ ಭಾರತವೀಗ ತನ್ನ ರಕ್ಷಣೆಯ ಹೊಣೆಗಾರಿಕೆ ಯನ್ನು ತಾನೇ ವಹಿಸಿಕೊಳ್ಳುವುದಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಲಿಚ್ಛಿಸುತ್ತಿದೆ. ನಾನು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಅದೇ ತೆರನಾದ ಗುರಿ ಇರಿಸಿಕೊಂಡಿರುವಂತಹ, ನನ್ನದೇ ಆದ ಒಂದು ಸ್ವತಂತ್ರ ಸಂಘಟನೆಯನ್ನು ಈಗಾಗಲೇ ಆರಂಭಿಸಿದ್ದೇನೆ. ಸಂದರ್ಭ ದೊರೆತಾಗ ತಮ್ಮ ಬಲಿಲ್ಲಾ ಮತ್ತಿತರ ಫ್ಯಾಸಿಸ್ಟ್ ಸಂಘಟನೆ ಗಳನ್ನು ಸಾರ್ವಜನಿಕವಾಗಿ ಪ್ರಶಂಶಿಸಲು ಹಿಂಜರಿಯೆನು. ಅವು ಸೌಭಾಗ್ಯ ವಂತವಾಗಲೆಂದೂ ಯಶಸ್ವಿಯಾಗಲೆಂದೂ ಹಾರೈಸುತ್ತೇನೆ.

ಮುಸೊಲಿನಿ: (ತುಂಬಾ ಖುಷಿಪಟ್ಟವರಂತೆ ಕಂಡು ಬಂದರು): ಧನ್ಯವಾದಗಳು. ಆದರೆ ನಿಮ್ಮದು ದುಸ್ತರ ಕೆಲಸ. ಆದಾಗ್ಯೂ ನಿಮಗೆ ಎಲ್ಲಾ ವಿಧದ ಯಶಸ್ಸನ್ನು ಬಯಸುತ್ತೇನೆ.

ಇಷ್ಟು ಹೇಳಿ ಆತ ಎದ್ದು ನಿಂತಾಗ ನಾನೂ ಎದ್ದು ವಿದಾಯ ಹೇಳಿದೆ.?

ಭಾರತಕ್ಕೆ ಹಿಂದಿರುಗಿದ ಮೂಂಜೆ ತನ್ನ ಭೇಟಿಯ ಅನುಭವಗಳನ್ನೆಲ್ಲ ಹಿಂದೂ ರಾಷ್ಟ್ರೀಯವಾದಿ ಸಂಘಟನೆಗಳಿಗೆ ಧಾರೆಯೆರೆದರು. ಆರೆಸ್ಸೆಸ್‌ನ ಪ್ರಥಮ ಸರಸಂಘಚಾಲಕ ಹೆಡ್ಗೆವಾರ್‌ರ ಆ[...] ಸಲಹೆಗಾರನಾಗಿದ್ದ ಮೂಂಜೆಗೆ ಫ್ಯಾಸಿಸ[...] ಸಿದ್ಧಾಂತದ ಬಗ್ಗೆ ಇದ್ದ ಒಲವು ಮತ್ತು ಆತನ ಇಟಲಿ ಭೇಟಿಯ ಅನುಭವಗಳ[...] ಇತರ ಉಗ್ರಗಾಮಿ ಆರೆಸ್ಸೆಸ್ ನಾಯಕರನ್ನು ಪ್ರಭಾವಿಸಿರುವುದರಲ್ಲಿ ಯಾ[...] ಅನುಮಾನವೂ ಇಲ್ಲ.

ತಿಲಕರ ಅನುಯಾಯಿಯಾಗಿದ್ದ ಮಾಧವ ಕಾಶಿನಾ[...] ದಾವ್ಲೆ ಎಂಬ ಚಿತ್ಪಾವನ ಬ್ರಾಹ್ಮಣ ಮುಂಬಯಿ[...] ದೂತಾವಾಸ ಕಚೇರಿಯ ಇಟಾಲಿಯನ್ ಭಾಷಾ ಕೋರ್ಸಿ[...] ಸೇರಿದ್ದ. ಕಚೇರಿಯ ಅಧಿಕಾರಿಗಳ ಸಲಹೆಯ ಮೇರೆ[...] ಈತ ಮುಸೊಲಿನಿಯ *Doctrine of Fascism* ಪುಸ್ತಕವನ್ನು ಮರಾಠಿಗೆ ಅನುವಾದ ಮಾಡಿದ. ಅದನ್ನು ತ[...] *'ಲೋಖಂಡಿ ಮೋರ್ಚಾ'* ಎನ್ನುವ ನಿಯತಕಾಲಿಕದ[...] ಪ್ರಕಟಿಸಿದ. ಇದೂ ಅಲ್ಲದೆ ಫ್ಯಾಸಿಸಂಗೆ ಸಂಬಂಧಿಸಿದ ಇನ್ನಿತ[...] ಹಲವಾರು ಪುಸ್ತಕಗಳನ್ನು ಅನುವಾದಿಸಿ *'ಲೋಖಂ[ಡಿ] ಮೋರ್ಚಾ'* ದಲ್ಲಿ ಪ್ರಕಟಿಸಲಾಯಿತು. ಹಿಂದ[...] ಮಹಾಸಭಾದ ಓರ್ವ ಮುಖ್ಯ ಪದಾಧಿಕಾರಿಯಾಗಿ[...] ಎಂ.ಆರ್. ಜಯಕರ್‌ಗೆ ಫ್ಯಾಸಿಸ್ಟ್ ಸಂಘಟನೆಗಳ ಕುರಿ[...] ತಿಳಿದಿತ್ತು, ಜಯಕರ್ 1929ರಲ್ಲಿ *'ಸ್ವಸ್ತಿಕ ಲೀಗ್'* ಸ್ಥಾ[...] ಅದರ ಅಧ್ಯಕ್ಷನೂ ಆದರು. ಈತ ಇಟಲಿಯ[...] *'ಅವಾನ್‌ಗಾರ್ಡಿಸ್ಟಿ'* ಮಾದರಿಯಲ್ಲಿ 15ರಿಂದ 18[...] ಹರೆಯದ ಭಾರತೀಯ ಯುವಕರಿಗೆ ಸೈನಿಕ ತರಬೇ[...] ನೀಡಬಯಸುತ್ತಿದ್ದರು.

ಆನತಿ ಕಾಲದಲ್ಲಿ ಫ್ಯಾಸಿಸಂ ಒಂದು ಸಾರ್ವಜನಿ[...] ಚರ್ಚೆಯ ವಸ್ತುವಾಯಿತು. ಜನವರಿ 31, 1934ರಂ[...] ಹೆಡ್ಗೆವಾರ್ ಅಧ್ಯಕ್ಷತೆಯಲ್ಲಿ ಫ್ಯಾಶಿಸಂ ವಿಷಯದ ಮೇ[...] ನಡೆದ ಸಮ್ಮೇಳನದಲ್ಲಿ ಮೂಂಜೆಯೂ ಭಾಗವಹಿಸಿ ಭಾಷ[...] ಮಾಡಿದರು. ಮಾರ್ಚ್ 31, 1934ರಂದು ಹೆಡ್ಗೆವಾ[...] ಮತ್ತು ಲಾಲು ಗೋಖಲೆಯವರನ್ನು ಭೇಟಿಯಾದ ಮೂಂ[...] ಹಿಂದೂಗಳ ಸೈನಿಕೀಕರಣದ ಬಗ್ಗೆ ಚರ್ಚಿಸಿದರು.

ಮೂಂಜೆ ಈಗಾಗಲೆ ಬ್ರಿಟನ್, ಫ್ರಾನ್ಸ್, ಇಟ[...] ಜರ್ಮನಿಗಳ ಮಿಲಿಟರಿ ಶಾಲೆಗಳ ಕಾರ್ಯನಿರ್ವಹಣೆಯ[...] ಅಭ್ಯಸಿಸಿದ್ದರು. ಮಹಾರಾಷ್ಟ್ರದ ಯುವಜನರಿಗಾಗಿರು[...] ಹಿಂದೂ ಮಿಲಿಟರಿ ಶಿಕ್ಷಣ ಅಕಾಡೆ[...] ಯೊಂದನ್ನು ಆದಷ್ಟು ಶೀಘ್ರದಲ್ಲಿ ಸ್ಥಾಪಿಸ[...] ಬಯಸುತ್ತಿದ್ದರು. 1934ರಿಂದ ತನ್ನ ಕ[...] ಯನ್ನು ಕಾರ್ಯರೂಪಕ್ಕಿಳಿಸುವ ಯತ್ನಗ[...] ಚಾಲನೆ ನೀಡಿದಾಗ ಅದಕ್ಕೆ ಹೆಡ್ಗೆವಾ[...] ಕೂಡ ಹೆಗಲುಕೊಟ್ಟರು. ಮೊತ್ತಮೊದ[...] ಕರಪತ್ರ'ವೊಂದನ್ನು ಸಿದ್ಧಪಡಿಸಿ ಅದ[...] ಸಂಭಾವ್ಯ ದಾನಿಗಳಿಗೆ ಮತ್ತು ಪ್ರಾಯ[...] ಇತರರಿಗೂ ಕಳುಹಿಸಲಾಯಿತು.

ಕರಪತ್ರ'ದ ಆರಂಭದಲ್ಲೆ ಅಕಾಡೆಮಿಯ ಉದ್ದೇಶಗಳ[...] ಸ್ಪಷ್ಟಪಡಿಸಲಾಗಿತ್ತು. ನಮ್ಮ ಯುವಕರು ವಿಜಯ[...] ಮಹತ್ವಾಕಾಂಕ್ಷೆಯಲ್ಲಿ ರಾಶಿಗಟ್ಟಲೆ ಜನರನ್ನು ಕೊಲ್ಲುವ[...] ತಮ್ಮ ಕಡೆಯಲ್ಲಿ ಮೃತರ ಹಾಗೂ ಗಾಯಾಳು[...] ಸಂಖ್ಯೆಯನ್ನು ಕನಿಷ್ಠವಾಗಿಸಿ, ಎದುರಾಳಿ ಕಡೆಯಲ್ಲಿ ಗ[...] ವಿರುವಂತೆ ನೋಡಿಕೊಳ್ಳುವ ಕಲೆಯಲ್ಲಿ ಅವರನ್ನು ತಯಾ[...] ಗೊಳಿಸುವುದೆ ತರಬೇತಿಯ ಉದ್ದೇಶ. ಗಮನಾರ್ಹವೆಂ[...]

ತ್ರ ಯಾರೆಂಬುದನ್ನು ಸ್ಪಷ್ಟಪಡಿಸಲಾಗಿಲ್ಲ. ಅಹಿಂಸೆಯನ್ನು
ಯೋಗಿಗಳ ಪರಿತ್ಯಾಗ ಹಾಗೂ ಪುಕ್ಕಲುತನದ ಒಂದು ವಿಧವೆಂದು
ಕರಪತ್ರದಲ್ಲಿ ಹಿಂಸೆಯನ್ನು ಬೆಂಬಲಿಸುವಂತಹ ಹಿಂದೂ ಪೌರಾಣಿಕ
ಂಗಳನ್ನೂ ಸೇರಿಸಲಾಗಿತ್ತು. ಫ್ಯಾಸಿಸ್ಟ್ ಇಟಲಿ ಮತ್ತು ನಾಜಿ ಜರ್ಮನಿಗಳ
ತಗಳನ್ನೂ ನೀಡಲಾಗಿತ್ತು.

ತಿಮವಾಗಿ ಸಾಕಾರಗೊಂಡ 'ಭೋನ್ಸಾಲಾ ಮಿಲಿಟರಿ ಶಾಲೆ' ಮಹಾ
ನಾಸಿಕದ 'ಸುರ್ಗಣ ಅರಮನೆ'ಯಲ್ಲಿ ಜೂನ್ 12, 1937ರಿಂದ
ರಂಭ ಮಾಡತೊಡಗಿತು. ಶಾಲೆಯ ಉದ್ದೇಶಿತ ಗುರಿಗಳು:

ದೂಗಳಲ್ಲಿ ಮಿಲಿಟರಿ ಪ್ರವೃತ್ತಿಯನ್ನು ಪುನರುಜ್ಜೀವಿತಗೊಳಿಸುವುದು
ಯ್ನಾಡಿನ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಅಗತ್ಯವಿರುವ
ಮರ್ಥ್ಯವನ್ನು ಹಿಂದೂ ಯುವಜನರಲ್ಲಿ ಬೆಳೆಸುವುದು
ತನ ಧರ್ಮದ ಬಗ್ಗೆ ಶಿಕ್ಷಣ ನೀಡುವುದು
ಜ್ಞಾನ, ಸ್ವರಕ್ಷಣೆ ಹಾಗೂ ರಾಷ್ಟ್ರರಕ್ಷಣೆಯ ಕಲೆಗಳಲ್ಲಿ ತರಬೇತಿ
ಡಿಸುವುದು

ಗುರಿಗಳಿಗೂ ರಾಷ್ಟ್ರೀಯವಾದಿಗಳ ಗುರಿಗಳಿಗೂ ಏನೇನೂ
ಇಲ್ಲ ಮತ್ತು ಎರಡರ ತಿರುಳೂ ಒಂದೇ ಆಗಿದೆ ಎಂಬುದನ್ನು
ಬೇಕು. ಆರಂಭದಲ್ಲಿ 'ಸುರ್ಗಣ ಅರಮನೆ'ಯಲ್ಲಿ 90 ವಿದ್ಯಾರ್ಥಿ
ು. ಶಾಲೆಯನ್ನು ಈಗಿನ 'ರಾಮಭೂಮಿ' ಎಂಬ ಹೊಸ ಜಾಗಕ್ಕೆ
ರ್ 1, 1938ರಂದು ಸ್ಥಳಾಂತರಿಸಲಾಯಿತು. ಭಾರತೀಯ ಸೇನೆಯ
ಅಧಿಕಾರಿಗಳು ಶಾಲೆಗೆ ಆಗಾಗ ಭೇಟಿ ನೀಡುತ್ತಿರುತ್ತಾರೆ. ಕೆಲವು
ನಂತರ ಇದರ ಶಾಖೆಯೊಂದನ್ನು ನಾಗಪುರದಲ್ಲಿ ಸ್ಥಾಪಿಸಲಾಯಿತು.
ೋನ್ಸಾಲಾ ಮಿಲಿಟರಿ ಶಾಲೆ' ಸಂಘ ಪರಿವಾರದೊಂದಿಗೆ ಸೈದ್ಧಾಂತಿಕ
ರಿಸಿಕೊಂಡಿದೆ. ಇದಕ್ಕೆ ಅನೇಕ ಪುರಾವೆಗಳನ್ನು ನೀಡಬಹುದು.
ಇಸವಿಯಲ್ಲಿ ಆರೆಸ್ಸೆಸ್ ತನ್ನ ರಾಷ್ಟ್ರೀಯ ಮಟ್ಟದ ಕ್ಯಾಂಪ್
ನಾಗಪುರದ ಭೋನ್ಸಾಲಾ ಮಿಲಿಟರಿ ಶಾಲೆಯಲ್ಲಿ ಆಯೋಜಿಸಿತ್ತು.
ಯವನ್ನು ಪುಣೆಯ ಭಯೋತ್ಪಾದಕ ನಿಗ್ರಹ ದಳ(ಎಟಿಎಸ್)ಕ್ಕೆ
ಭಾರತೀಯ ನೌಕಾಸೇನೆಯ ಮಾಜಿ ಉದ್ಯೋಗಿ ಸನತ್‌ಕುಮಾರ್
ಲ ಭಾಟೆ 1996ರಿಂದಲೂ ಆರೆಸ್ಸೆಸ್‌ನ ಸದಸ್ಯ. ದೇಶಾದ್ಯಂತದ
ನ ಭಾಗವಹಿಸಿದ್ದ ಆ ಕ್ಯಾಂಪಿನಲ್ಲಿ ಕರಾಟೆ, ರಿವಾಲ್ವರ್ ಪ್ರಯೋಗ
ದ ಕಲೆಗಳಲ್ಲಿ ತರಬೇತಿ ನೀಡಲಾಗಿತ್ತು. ತರಬೇತಿಗಾರರಾಗಿದ್ದವರು
ನಿವೃತ್ತ ಸೇನಾ ಸಿಬ್ಬಂದಿ. ಇದಲ್ಲದೆ ಗುಪ್ತದಳದ ಓರ್ವ ಹಿರಿಯ
ಯೂ ಭಾಗವಹಿಸಿದ್ದರು. ಹಿಂದೂತ್ವ ಭಯೋತ್ಪಾದಕರಿಗೂ
ರದ ಶಾಲೆಯಲ್ಲಿ ತರಬೇತಿ ನೀಡಲಾಗಿತ್ತೆಂಬ ಸತ್ಯಾಂಶವೀಗ ಬಯಲಿಗೆ
. ಮಾಲೆಗಾಂವ್ ಮತ್ತಿತರ ಸ್ಫೋಟಗಳ ಆರೋಪಿಗಳಲ್ಲೊಬ್ಬನಾದ
ಪ್ರಸಾದ್ ಪುರೋಹಿತ್ ನಾಗಪುರದ ಶಾಲೆಯಲ್ಲಿ ತರಬೇತಾದ
006ರಲ್ಲಿ ಔರಂಗಾಬಾದ್‌ನ ಮಸೀದಿಯೊಂದರಲ್ಲಿ ಸ್ಫೋಟಿಸಲು
ಡ್‌ನ ಆರೆಸ್ಸೆಸ್ ಪದಾಧಿಕಾರಿಯೊಬ್ಬನ ಮನೆಯಲ್ಲಿ) ಬಾಂಬ್
ಸುತ್ತಿದ್ದಾಗ ನಡೆದ ಆಕಸ್ಮಿಕ ಸ್ಫೋಟದಲ್ಲಿ ಮೃತಪಟ್ಟ ಹಿಮಾಂಶು
ಮತ್ತು ಮಾರೊತಿ ಕೇಶವ್ ವಾಗ್ ಕೂಡಾ ಇದೇ ಶಾಲೆಯಲ್ಲಿ
ಪಡೆದವರು. 2003ರಲ್ಲಿ ಪರ್ಭನಿಯ ಗೌಸಿಯಾ ಮಸೀದಿಯಲ್ಲಿ
ಸ್ಫೋಟಿಸಿದವರೂ ಇವರೇ.

ಂದಿನ ಕೆಲವು ಪತ್ರಿಕಾ ವರದಿಗಳು ಈ ಮಿಲಿಟರಿ ಶಿಕ್ಷಣ ಸಂಸ್ಥೆಗಳ
ಇನ್ನಷ್ಟು ಮಾಹಿತಿಗಳನ್ನು ಒದಗಿಸುತ್ತವೆ.

ಾಲೆಗಾಂವ್ ಸ್ಫೋಟದ ಆರೋಪಿಗಳಿಗೆ 2001ರಲ್ಲಿ ಭೋನ್ಸಾಲಾ
ರಿ ಶಾಲೆಯ ಆವರಣದೊಳಗೆ ಆರ್‌ಡಿಎಕ್ಸ್ ಬಳಕೆಯಲ್ಲಿ ತರಬೇತಿ
ನೆನ್ನಲಾದ ಮೇಜರ್ ಪ್ರಭಾಕರ್ ಕುಲಕರ್ಣಿ ಎಂಬ ಮಾಜಿ ಶಾಲಾ
ಡರ್ ಪೊಲೀಸರ ಪರಿಶೀಲನೆಗೊಳಪಟ್ಟಿದ್ದಾನೆ. ಈತ ನಾಸಿಕ್‌ನ
ಸ್ಸೂಾಗಿದ್ದಾನೆ (ದ ಟೈಮ್ಸ್ ಆಫ್ ಇಂಡಿಯ, ಪುಣೆ, ನವಂಬರ್ 1,

ಸಿಕ್‌ನ ಭೋನ್ಸಾಲಾ ಮಿಲಿಟರಿ ಶಾಲೆಯ ಆಡಳಿತಗಾರನಾದ ನಿವೃತ್ತ
ಶೈಲೇಶ್ ರಾಯ್ಕರ್ ಎಂಬಾತ ಮಾಲೆಗಾಂವ್ ಸ್ಫೋಟಕ್ಕೆ 15
ಹಿಂದೆ ಆರೋಪಿಗಳು ನಡೆಸಿದ್ದ ಸಭೆಯೊಂದರಲ್ಲಿ ಭಾಗವಹಿಸಿದ್ದ
ಗಿದ್ದು ಈ ಹಿನ್ನೆಲೆಯಲ್ಲಿ ಆತನನ್ನು ಪ್ರಶ್ನಿಸಲಾಯಿತು (ಸಂಡೇ ಟೈಮ್ಸ್
ಇಂಡಿಯ, ಪುಣೆ, ನವಂಬರ್ 2, 2008).

ಕ! ಪುರೋಹಿತ್‌ಗೆ ನಾಸಿಕ್‌ನ ಭೋನ್ಸಾಲಾ ಮಿಲಿಟರಿ ಶಾಲೆಯ
ಗಾರನಾದ ನಿವೃತ್ತ ಕರ್ನಲ್ ಎಸ್. ಎಸ್. ರಾಯ್ಕರ್‌ನೊಂದಿಗೆ
ವಿತ್ತೆನ್ನುವುದು ಎಟಿಎಸ್‌ನ ದೃಢನಂಬುಗೆ. 'ಅಭಿನವ್ ಭಾರತ್'
ನ ಸಹಾಯ ಪಡೆದುಕೊಂಡು ಶಸ್ತ್ರಾಸ್ತ್ರಗಳನ್ನು ಸಂಪಾದಿಸಿರಬೇಕೆಂದು
ಸರು ಸಂದೇಹಿಸುತ್ತಿದ್ದಾರೆ.

ಟಿಎಸ್ ಸದ್ಯ ನಾಗಪುರದ ಭೋನ್ಸಾಲಾ ಮಿಲಿಟರಿ ಶಾಲೆಯಲ್ಲಿ
ಲ್ಲಿ ನಡೆದ ತರಬೇತು ಶಿಬಿರದಲ್ಲಿ ಭಾಗವಹಿಸಿದ್ದ 54 ಜನರ ಮೇಲೆ
ಕರಿಸಿದೆ. ಇವರ ಪೈಕಿ ಕೆಲವರು ನಾಂದೇಡ್ ಸ್ಫೋಟಕೃತ್ಯ ಮತ್ತು
ಾಂವ್‌ನ ಎರಡು ಸ್ಫೋಟಕೃತ್ಯಗಳಲ್ಲಿ ಪಾಲ್ಗೊಂಡಿರಬೇಕೆಂದು ಎಟಿಎಸ್
ಗಿ ಶಂಕಿಸುತ್ತಿದೆ (ಸಕಾಳ್, ಪುಣೆ, ನವಂಬರ್ 10, 2008).


ಸ್ಟಂಬರ್ 15, 2008ರಂದು, ಅಂದರೆ ಸ್ಫೋಟಕ್ಕೆ 15 ದಿನ ಮುಂಚೆ,
ನ ಭೋನ್ಸಾಲಾ ಮಿಲಿಟರಿ ಶಾಲೆಯ ಕ್ಯಾಂಪಸ್ ಒಳಗಡೆ 'ಅಭಿನವ್
'ನ ಸಭೆಯೊಂದು ನಡೆದಿತ್ತೆಂದು ಶಾಲೆಯ ಕಮಾಂಡೆಂಟ್ ಆಗಿರುವ
ಕ! ಎಸ್.ಎಸ್. ರಾಯ್ಕರ್ ತನಿಖಾಕಾರರಿಗೆ ತಿಳಿಸಿದ್ದಾನೆ (ದ ಇಂಡಿಯನ್
ಸ್, ಪುಣೆ, ನವಂಬರ್ 13, 2008).

ಮಾಲೆಗಾಂವ್ ಸ್ಫೋಟದಲ್ಲಿ ಓರ್ವ ಆರೋಪಿಯಾಗಿರುವ ?ಜಮ್ಮು
ಪೀಠ?ದ ಮಹಾಂತ ದಯಾನಂದ್ ಪಾಂಡೆ ಹಾಗೂ ಮಿಕ್ಕ
ಪಿಗಳು ಭೋನ್ಸಾಲಾ ಮಿಲಿಟರಿ ಶಾಲೆ, ದೇವ್‌ಲಾಲಿ ಶಿಬಿರ (ನಾಸಿಕ್),
ಾದ್ ಮತ್ತು ಜಮ್ಮು ಕಾಶ್ಮೀರಗಳಲ್ಲಿ ನಡೆದ ಸಭೆಗಳಲ್ಲಿ ಭಾಗವಹಿಸಿದ್ದರು.
ಮಿರರ್, ನವಂಬರ್ 15, 2008).

ಗೆ ತರಬೇತಿ ಪಡೆದಿರುವ ಹಿಂದೂತ್ವವಾದಿಗಳ ಸಂಖ್ಯೆ ಎಷ್ಟಿರಬಹುದು?
ಶಾಲೆಗಳಲ್ಲಿ ನಡೆಯುತ್ತಿದ್ದ ಈ ದೇಶದ್ರೋಹಿ ಚಟುವಟಿಕೆಗಳು
ದ ಗಮನಕ್ಕೆ ಬಾರದಿರಲಿಲ್ಲವೇ? ಗುಪ್ತದಳದ ಅಷ್ಟೊಂದು ಅದಕ್ಷತೆ
ದೇಕೆ? ಇದಾಗಿ ಮುಂಜಾಗ್ರತೆ ವಹಿಸಿದ್ದಲ್ಲಿ ಮುಂದೆ ಸಂಭವಿಸಿದಂತಹ
ಗಳನ್ನು ತಪ್ಪಿಸಬಹುದಿತ್ತಲ್ಲವೇ?
ದ ಜನತೆ ಕೇಳುತ್ತಿರುವ ಪ್ರಶ್ನೆಗಳಿವು.

ಎಲೆನಾರ್ ಮಿಲ್ಲರ್ ಎಂಬ ಅಮೆರಿಕದ ಲೇಖಕಿ ಒಂದು ಸಂಶೋಧನಾ ಅಧ್ಯಯನವನ್ನು ಆಧರಿಸಿ 'ಸ್ಟ್ರೀಟ್ ವುಮನ್' ಎಂಬ ಕೃತಿಯನ್ನು ರಚಿಸಿದ್ದಾಳೆ. ಇದರಲ್ಲಿ ಆವಳು ಸಾಂಡ್ರಾ ಮತ್ತು ಬೆಟ್ಟಿ ಎಂಬ ಇಬ್ಬರು ಯುವತಿಯರು ಹೇಗೆ ಮುಂದುವರೆದ ರಾಷ್ಟ್ರಗಳ ಗ್ಲಾಮರಸ್ ಬೀದಿಯ ಮೇಲೆ ನಾಚಿಕೆಯನ್ನು ಹೆದೆಮುರಿಗೆ ಕಟ್ಟಿನಿಂತು ಮೈ ಮಾರಿಕೊಳ್ಳುವ ದಂಧೆಗೆ ತಮ್ಮನ್ನು ತೊಡಗಿಸಿಕೊಂಡರು ಎನ್ನುವದರ ಬಗ್ಗೆ ಅತ್ಯಂತ ವಸ್ತುನಿಷ್ಠವಾಗಿ ಚಿತ್ರಿಸಿದ್ದಾಳೆ. ಅಮೆರಿಕೆಯಂಥಾ ರಾಷ್ಟ್ರಗಳಲ್ಲಿ ಬೀದಿಯ ಲೈಟು ಕಂಬಗಳ ಬುಡದಲ್ಲಿ ಸಾಧ್ಯವಾಗದ ನಗುಮುಖವನ್ನು ಹೊತ್ತುಕೊಂಡು, ಗಿರಾಕಿಗಳನ್ನು ಹುಡುಕುವ ಈ ತರುಣಿಯರ ಬದುಕಿನ ಕಾಠಿಣ್ಯದ ಕಥೆಯನ್ನು ಮಿಲ್ಲರ್ ಬಹಳ ಮಾರ್ಮಿಕವಾಗಿ ನಿರೂಪಿಸಿ ದ್ದಾಳೆ.. ಲೇಖಕಿ ಎಲೆನಾರ್ ಮಿಲ್ಲರ್ ಈ ಸಾಂಡ್ರಾಳನ್ನು ಸಂದರ್ಶನ ಮಾಡುವ ವೇಳೆಯಲ್ಲಿ ಆಕೆ ಗರ್ಭಿಣಿ. ಇನ್ನೊಂದು ವಿಚಿತ್ರವೆಂದರೆ ಆ ಗರ್ಭಧಾರಣೆಗೆ ಕಾರಣನಾದ ಮಹಾನುಭಾವನೇ ಬೇರೆ, ಈ ಸಾಂಡ್ರಾ ಮದುವೆಯಾಗಬೇಕು ಎಂದುಕೊಂಡವನೇ ಬೇರೆ. ಇಂಥಾ ಸಾಂಡ್ರಾಳ ಬದುಕು ಅನೇಕ ರೀತಿಯ ಎಡರುತೊಡರುಗಳ ಮಧ್ಯೆ ಸಾಗಿ ಬಂದ ಕಥೆಯನ್ನು ಅನುವಾದಿಸಿ ಜೋಗುರರವರು ನೀಡಿದ್ದಾರೆ.

ಸಾಂಡ್ರಾಳ ಸತ್ಯಕತೆ



* * * *

ಈ ಸಾಂಡ್ರಾ ಅಮೆರಿಕದ ಮಡಿಸನ್ ಎಂಬ ಒಂದು ಪುಟ್ಟ ಗ್ರಾಮದಲ್ಲಿ ಜನಿಸಿದವಳು. ಆ ಗ್ರಾಮದ ಜನಸಂಖ್ಯೆ ಕೇವಲ 1500 ರ ಆಸುಪಾಸು. ಈಕೆಯ ತಂದೆ ನಾರ್ವೇಯಿಂದ ವಲಸೆ ಬಂದವನು. ಮೊದಲು ಅವನೊಬ್ಬ ಕಾರ್ಮಿಕ, ಈಗ ಅವನು ಒಂದು ಕಂಪನಿಯ ಮಾಲಿಕ. ತಂದೆಯ ಏಳು ಮಕ್ಕಳ ಪೈಕಿ ಈ ಸಾಂಡ್ರಾ ನಾಲ್ಕನೆಯವಳು. ಸಾಂಡ್ರಾಳ ತಂದೆ ಮೊದಮೊದಲು ಆಗೊಮ್ಮೆ ಈಗೊಮ್ಮೆ ಮದ್ಯಸೇವನೆ ಮಾಡುವ ಆಸಾಮಿ. ಆದರೆ ಈಗೀಗ ಅದು ವಿಪರೀತ ವಾಗಿತ್ತು. ಕುಡಿದಾಗ ಸಾಂಡ್ರಾಳಿಗೆ ಆತ ಅತ್ಯಂತ ತುಚ್ಛವಾಗಿ ಬೈಯುತ್ತಿದ್ದ. ಮುಂಚಿನಿಂದಲೂ ಆತನಿಗೆ ಸಾಂಡ್ರಾ ಬಗ್ಗೆ ಒಂಥರಾ ಇರುಸು ಮುರುಸು. ಆಕೆ ಇನ್ನೂ ಒಂಬತ್ತು ವರ್ಷದವಳಿರುವಾಗಲೇ ಆಕೆಯ ಜನುಮದಾತನೇ ಅವಳಿಗೆ ಸೂಳೆಯ ಪಟ್ಟ ಕಟ್ಟಿದ. ನೀನು ಪಕ್ಕದ ಮನೆಯ ಕರಿಯ ಹುಡುಗನೊಂದಿಗೆ ಮಲಗುತ್ತಿ ಎಂದು ಆರೋಪಿಸಿದ. ಇಷ್ಟು ಮಾತ್ರವಲ್ಲದೆ ಅವಳನ್ನು ಮನೆಯಿಂದ ಹೊರಗಟ್ಟಿದ. ತನಗೆ ಪರಿಚಯದ ಬೇರೆ ಒಂದು ಕುಟುಂಬದಲ್ಲಿ ಅವಳನ್ನು ಬಿಟ್ಟ. ಅಲ್ಲಿ ಸಾಂಡ್ರಾಗೆ ಆ ಮನೆಯ ಹೆಂಗಸು ತನ್ನನ್ನು ಅತ್ಯಂತ ನಿಕೃಷ್ಟವಾಗಿ ಕಾಣುವುದು ಆಕೆಗೆ ಸರಿ ಬೀಳದೇ ಅಲ್ಲಿಂದ ಕಾಲು ಕಿತ್ತಳು. ಆದರೆ ಈ ಲೋಕವೆಲ್ಲಾ ಘೋರ, ತಾನು ಹೋಗುವದಾದರೂ ಎಲ್ಲಿಗೆ..? ಈ ಪ್ರಶ್ನೆಯಲ್ಲಿಯೇ ಒಂದು ರಾತ್ರಿ ಅವಳು ಜೈಲಲ್ಲಿ ಕಳೆಯಬೇಕಾಯಿತು. ನಂತರ ಅವಳನ್ನು ಒಂದು ವಸತಿ ಶಾಲೆಗೆ ಕಳುಹಿಸಲಾಯಿತು. ಅಲ್ಲಿಯೂ ಸಾಂಡ್ರಾ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡಿ ಅಲ್ಲಿಂದ ಹೊರಹಾಕಲಾಯಿತು. ಅಲ್ಲಿಂದ ಮತ್ತೆ ಅವಳನ್ನು ಭಾವನಾತ್ಮಕವಾಗಿ ತೊಂದರೆಗೆ ಸಿಲುಕಿರುವ ಮಕ್ಕಳ ಶಾಲೆಗೆ ಕಳುಹಿಸಲಾಯಿತು. ದುರಂತವೆಂದರೆ, ಆಕೆ ಅಲ್ಲಿಗೆ ಬಂದ ಕೆಲವೇ ದಿನಗಳಲ್ಲಿ ಆ ಶಾಲೆಯ ಅನುಮತಿಯನ್ನು ರದ್ದುಪಡಿಸಿ, ಅದನ್ನು ಮುಚ್ಚಲಾಯಿತು. ಸಾಂಡ್ರಾಳನ್ನು ಅಲ್ಲಿಂದ ಮತ್ತೆ ಮೆಂಡೋಟಾ ಎನ್ನುವ ಸ್ಥಳದಲ್ಲಿರೋ ಒಂದು ಮನೋವಿಕಾಸ ಕೇಂದ್ರದ ಶಾಲೆಗೆ ಕಳುಹಿಸಲಾಯಿತು. ಅಲ್ಲಿ ಸಾಂಡ್ರಾಗೆ ತನ್ನೂರಿನ ಕೆಲ ಹುಡುಗಿಯರ ಪರಿಚಯವಾಯಿತು. ಅವರೊಂದಿಗೆ ಸಲುಗೆಯೂ ಬೆಳೆಯಿತು. ಒಂದು ದಿನ ಅವರು ಅಲ್ಲಿಂದ ಓಡಿಹೋದರು. ಹೀಗೆ ಹೋದವರೆಲ್ಲಾ ಸಾಂಡ್ರಾ ಊರಿನವರೇ.. ಕೆಲ ದಿನಗಳ ನಂತರ ಮತ್ತೆ ಅಲ್ಲಿಗೆ ಬಂದರು. ಆದಾಗಲೇ ಅವರಿಗೆ ಬೇಕೆಂದಾಗ ಮತ್ತೆ ಓಡಿ ಹೋಗುವುದು ಹೇಗೆ ಎನ್ನುವದರ ಬಗ್ಗೆ ಒಂದು ಚಿಕ್ಕ ತಾಲೀಮು ಸಿಕ್ಕಂತಾಗಿತ್ತು. ಅದೇ ವೇಳೆಗೆ ಇವರೆಲ್ಲಾ ಸೇರಿ ಸಾಂಡ್ರಾಳನ್ನು ಆಕೆಯ ಮೂಲ ಮನೆಗೆ ಸೇರಿಸ ಬೇಕೆಂದು ಒಂದು ಯೋಜನೆಯನ್ನೂ ರೂಪಿಸಿಕೊಂಡಿದ್ದರು. ಆದರೆ ಆಕೆಯ ತಂದೆ ಮತ್ತೆ ಅವಳ ಮೇಲೆ ಕೈಮಾಡಿದ. ಆಗ ಸಾಂಡ್ರಾ ಅವನ ಕ್ರೌರ್ಯವನ್ನು ಸಹಿಸದೇ ಮನೆ ಬಿಟ್ಟು ಓಡಿಹೋದಳು. ಅವಳನ್ನು ಹಿಡಿದು ಓರೇಗಾಂವ್‌ನ ಬಾಲಾಪರಾಧಿ ಮಕ್ಕಳ ಶಾಲೆಗೆ ಹಾಕಲಾಯಿತು. ಸಾಂಡ್ರಾಗೆ ತಂದೆ ಹೊಡೆದದ್ದಕ್ಕಿಂತಲೂ ಅವಳ ತಾಯಿ ಕೂಡಾ ಗಂಡನ ಪರವಾಗಿಯೇ ಇದ್ದದ್ದು ಅವಳಿಗೆ ತುಂಬಾ ನೋವುಂಟುಮಾಡಿತ್ತು. ಅದೂ ಅಲ್ಲದೇ ತನ್ನ ತಂದೆ ಮಾಡಿದ ಸೂಳೆ ಎಂಬ ಆರೋಪ ಆ ಪುಟ್ಟ ಬಾಲಕಿಯ ಮನಸನ್ನು ಆಗಾಗ ತಿವಿಯುತ್ತಿತ್ತು. ಓರೇಗಾಂವ್‌ನ ಬಾಲಾಪರಾಧಿಗಳ ವಸತಿನಿಲಯಕ್ಕೆ ಆಕೆ ಕಾಲೂರಿದಾಗ ಅವಳಿಗಿನ್ನೂ ಹನ್ನೆರಡು ವರ್ಷ. ಆ ವೇಳೆಯಲ್ಲಿ ಸಾಂಡ್ರಾ ಕೆಲವು ಘಟಾನುಘಟಿ ಮಹಿಳೆಯರ ಸಹವಾಸಕ್ಕೆ ಬಂದಳು. ಅವರೆಲ್ಲಾ ಅದಾಗಲೇ ಅನೇಕ ಬಗೆಯ ಅಪರಾಧಗಳನ್ನು ಎಸಗಿ ಕುಖ್ಯಾತರಾದವರು. ಅವರಲ್ಲಿ ಕೆಲವರು ಮೈಮಾರಿಕೊಳ್ಳುವ ದಂಧೆ ಮಾಡಿಯೂ ಲೆಬೆಲಿಂಗ್ ಆದವರು. ಇವರ ಗರಡಿಯಲ್ಲಿ ಪಳಗಬೇಕಾಗಿ ಬಂದ ಸಾಂಡ್ರಾಗೆ ಅವರು ಮಾಡಿದ್ದು ಸರಿಯಾಗಿಯೇ ಇದೆ ಎನಿಸಿತ್ತು. ಓರೇಗಾಂವ್‌ನ ವಸತಿನಿಲಯದಿಂದ ಬಿಡುಗಡೆಯಾದ ಮೇಲೆ ಮತ್ತೆ ತನ್ನ ಹುಟ್ಟೂರಿಗೆ ನಡೆದ ಸಾಂಡ್ರಾ ಅಲ್ಲಿದ್ದದ್ದು ಕೇವಲ ಒಂದು ತಿಂಗಳು ಮಾತ್ರ. ಆ ಒಂದು ತಿಂಗಳಲ್ಲಿ ಆಕೆ ಕರಿಯ ಹುಡುಗರೊಂದಿಗೆ ಮಾತನಾಡಿದ್ದು, ಅವರ ಕಡೆಗೆ ಕೈ ಅಲ್ಲಾಡಿಸಿದ್ದನ್ನು ಕಂಡು ಕೆರಳಿದ ಆಕೆಯ ತಂದೆ ಆಕೆ ಮತ್ತೆ ಮನೆಯಿಂದ ಓಡಿಹೋಗುವಂತೆ ಮಾಡಿದ. ಈಗವಳು ತಿರುಗಿ ಓರೇಗಾಂವ್‌ನತ್ತ ಬಂದಳು.

ಆಗವಳಿಗೆ 13 ವರ್ಷ. ಓರೇಗಾಂವ್‌ನ ಆ ವಸತಿನಿಲಯದಲ್ಲಿಯೂ ಕೆಲವು ಹುಸಿ ಆರೋಪಗಳನ್ನು ಆಕೆಯ ಮೇಲೆ ಮಾಡಲಾಯಿತು. ಅಲ್ಲಿಂದ ಆಕೆ ಮಿಲವಾಕೀ ಎಂಬ ನಗರಕ್ಕೆ ಬಂದಳು. ಆಕೆಗೆ ಅಲ್ಲಿ ಅದಾಗಲೇ ಒಬ್ಬ ಮಹಿಳೆ ಪರಿಚಯವಾಗಿದ್ದಳು. ಆಕೆಯೊಂದಿಗೆ ಆರು ತಿಂಗಳು ಅಲ್ಲಿ ಉಳಿದಳು. ಇಲ್ಲಿಂದ ಸಾಂಡ್ರಾ ಅಧಿಕೃತವಾಗಿ ತನ್ನ ಮೈ ಮಾರಿ ಕೊಳ್ಳುವ ವೃತ್ತಿಯನ್ನು ಮಾಡತೊಡಗಿದಳು. ತನಗೆ ಆಶ್ರಯ ನೀಡಿದ ಆ ಹೆಂಗಸಿಗೆ ಒಬ್ಬ ಬಾಯ್‌ಫ್ರೆಂಡ್ ಇದ್ದ. ಆತ ಪಿಂಪ್ (ದಲ್ಲಾಳಿ) ಆಗಿ ಇವರ ಮಧ್ಯೆ ಕೆಲಸ ಮಾಡತೊಡಗಿದ. ಆದಾಗಲೇ ಸಾಂಡ್ರಾ ಡ್ರಗ್ಸ್ ಮತ್ತು ಡ್ರಿಂಕ್ಸ್ ಸಹವಾಸಕ್ಕೆ ಅಂಟಿಕೊಂಡಿದ್ದಳು. ಅವುಗಳನ್ನು ಪಡೆಯಲು ಆಕೆ ಮೈ ಮಾರಿಕೊಳ್ಳಬೇಕಾಯಿತು ಎಂದು ಆಕೆ ಲೇಖಕಿ ಮಿಲ್ಲರ್ ಮುಂದೆ ಹೇಳಿದ್ದಾಳೆ. ಸಾಂಡ್ರಾಳದು ಪ್ರೀತಿಗಾಗಿ ಹಂಬಲಿಸಿದ, ಹಾತೊರೆದ ಜೀವ. ಬಾಲ್ಯದಿಂದಲೂ ತನ್ನನ್ನು ಪ್ರಾಮಾಣಿಕವಾಗಿ ಎದೆಗೆ ಹಚ್ಚಿಕೊಂಡು ಪ್ರೀತಿಸುವವರು ಯಾರೂ ಸಿಗಲೇ ಇಲ್ಲ ಎನ್ನುವ ಕೊರಗು ಆಕೆ ಕುಡಿಯಲು ಮತ್ತು ಮಾದಕ ವ್ಯಸನಿಯಾಗಲು ಕಾರಣವಾದರೆ, ಅವುಗಳನ್ನು ಕೊಳ್ಳಲು ಕಾಸು ಕೊಡುವವರಾರು..? ಎನ್ನುವ ಪ್ರಶ್ನೆಗೆ ಆಕೆ ಕಂಡುಕೊಂಡ ಮಾರ್ಗ ಈ ಮೈ ಮಾರಿಕೊಳ್ಳುವ ವೃತ್ತಿಯಾಗಿತ್ತು.

ಸಾಂಡ್ರಾಗೆ ಆಗ 16 ವರ್ಷ. ಅಲ್ಲಿಂದ ಆ್ಯಯರಿಗೆ ದಕ್ಕಲು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದರೂ ಅದರ ಅರಸುವಿಕೆಯನ್ನು ಮಾತ್ರ ಆಕೆ ಕೈ ಬಿಟ್ಟಿರಲಿಲ್ಲ. ವಿಸ್ಕಿನ್ಸನ್, ಮಿಚಿಗನ್, ಫಿನ್ಲ್ಯಾಂಡ್ ಇನ್ನೂ ಮುಂತಾದ ಕಡೆಗಳಲ್ಲಿ ಸಾಂಡ್ರಾ ಸ್ಟ್ರೀಟ್ ಗರ್ಲ್ ಆಗಿ ಕೆಲಸ ಮಾಡಿಯೂ ಮರಳಿ ತನ್ನ ಹುಟ್ಟೂರಾದ ಮಡಿಸನ್‌ಗೆ ಬಂದಳು. ಅಲ್ಲಿ ಒಂದು ಬಾರ್ ಮಾಳಿಗೆಯ ಮೇಲೆ ಕೆಲ ಹುಡುಗಿಯರನ್ನು ಕೂಡಿಕೊಂಡು ವ್ಯವಸ್ಥಿತವಾಗಿ ಫೋನ್ ಮೂಲಕ ದಂಧೆಯನ್ನು ಮುಂದುವರೆಸಿದಳು. ಅದೇ ಸಂದರ್ಭದಲ್ಲಿ ಜಾಕ್ ಅನ್ನೋ ಒಬ್ಬ ಯುವಕ ಆಕೆಗೆ ಪರಿಚಯವಾದ. ಅವನ ಬಗ್ಗೆ ಆಕೆಗೆ ಅದೇನೋ ಒಂದು ಬಗೆಯ ವಿಶಿಷ್ಟ ಒಲವು. ಬಾಲ್ಯದಿಂದ ಕಳೆದುಕೊಂಡ ಪ್ರೀತಿಯ ಹುಡುಕಾಟವನ್ನು ಆಕೆ ಇವನೊಂದಿಗೆ ಶುರು ಮಾಡಿದ್ದಳು. ಆತ ನೋಡಿದರೆ ಒಬ್ಬ ದೊಡ್ಡ ಜೂಜುಕೋರ.. ಆದರೇನಂತೆ..? ಆ ಬಗ್ಗೆ ಆಕೆಗೆ ಬೇಸರವಿಲ್ಲ. ಯಾವಾಗ ಅವನನ್ನು ಗ್ಯಾಂಬ್ಲಿಂಗ್ ವೇಳೆಯಲ್ಲಿ ಪೊಲೀಸರು ಬಂಧಿಸಿ ಜೈಲಿಗೆ ತಳ್ಳಿದರೋ ಆಗ ಮತ್ತೆ ಸಾಂಡ್ರಾಳನ್ನು ನನ್ನವನು ಎನ್ನುವ ಒಂದೇ ಒಂದು ಜೀವವನ್ನು ತಾನು ಕಳೆದುಕೊಳ್ಳುತ್ತಿರುವೆನು ಎಂಬ ಭಾವ ಬಲವಾಗಿ ಕಾಡತೊಡಗಿತು. ಆಕೆ ತುಂಬಾ ವಿಷಣ್ಣಭಾವವನ್ನು ಹೊಂದಿದಳು. ಅವನಿಗಾಗಿ ತಾನು ಮೈ ಮಾರಿಕೊಂಡು ಹಣ ಕೂಡಿಸಿ ಒಬ್ಬ ವಕೀಲನಿಗೆ ಕೊಟ್ಟ ಸಾಂಡ್ರಾ ಆತ ಜೈಲಿನಿಂದ ಹೊರಬರುವುದರೊಳಗಾಗಿ ಇನ್ನೊಬ್ಬ ವ್ಯಕ್ತಿಯ ತಾತ್ಕಾಲಿಕ ಮೋಹಪಾಶದಲ್ಲಿ ಸಿಲುಕಿ ಗರ್ಭಿಣಿಯಾದಳು. ಆದರೂ ಅವಳಿಗೆ ವಿಶ್ವಾಸವಿದೆ. ಆ ಭರವಸೆಯ ಮಾತುಗಳನ್ನೇ ಮಿಲ್ಲರ್ ಮುಂದೆ ಆಕೆ ಸಂದರ್ಶನದಲ್ಲಿ ತೋಡಿಕೊಂಡಿದ್ದಾಳೆ.

"ಖಂಡಿತ ನಾನು ಮತ್ತು ಜಾಕ್ ಮದುವೆಯಾಗುತ್ತೇವೆ. ನಮ್ಮದೇ ಆದ ಒಂದು ಪುಟ್ಟ ಪ್ರಪಂಚವನ್ನು ಸ್ಥಾಪಿಸಿಕೊಳ್ಳುತ್ತೇವೆ. ನನಗೆ ಕೆಲವು ಆಸೆಗಳಿವೆ. ಒಂದು ಮನೆ, ಕಾರು, ಒಂದಷ್ಟು ಸಾಮಾನುಗಳು, ಒಬ್ಬಳು ಕೆಲಸದವಳು. ಇವೆಲ್ಲವುಗಳ ಜೊತೆಗೆ ನನ್ನ ಮಗುವನ್ನು ಚೆನ್ನಾಗಿ ಆರೈಕೆ ಮಾಡಬೇಕು. ಈ ನಿಟ್ಟಿನಲ್ಲಿ ತೊಂದರೆಗಳು ಎದುರಾದರೆ ನಾನು ಮತ್ತೆ ಮೈ ಮಾರಿಕೊಳ್ಳುವುದಕ್ಕೂ ಹಿಂದೇಟು ಹಾಕುವದಿಲ್ಲ.. ನಾನು ಈ ದಂಧೆಯನ್ನು ಬಿಟ್ಟು ಬಿಡುತ್ತೇನೆ ಎಂದು ಪೂಸೀ ಹೊಡೆಯಲಾರೆ. ಯಾಕೆಂದರೆ ಸಂದರ್ಭ ಹೇಗೆ ಬರುತ್ತದೆಯೋ ಹೇಳಲಾಗದು.


ಒಂದಂತೂ ಸತ್ಯ.

'ನಾನು ಆಶಾವಾದಿಯೇ ಹೊರತು [illegible]

ಕತೆ

• ಡಾ. ಎಸ್.ಬಿ.ಜೋಗುರ

ಗೌರಿಯಿಂದ ಬಚ್ಚಿಟ್ಟಿದ್ದ ಗುಟ್ಟು ರಟ್ಟಾಯಿತು



ಲಂಕೇಶರಿಗೆ ಸ್ಟ್ರೋಕ್ ಆದಾಗ ನಮ್ಮ ಹಿರಿ ಮಗಳು ಗೌರಿ ಫ್ರಾನ್ಸ್ ದೇಶದಿಂದ ಪತ್ರಿಕೋದ್ಯಮ ಸ್ಕಾಲರ್‌ಶಿಪ್ ಪಡೆದು ಆ ದೇಶದ ರಾಜಧಾನಿ ಪ್ಯಾರಿಸ್‌ನಲ್ಲಿ ವಾಸಿಸುತ್ತಿದ್ದಳು. ಆಗ ನಮ್ಮ ಮೂವರು ಮಕ್ಕಳಲ್ಲಿ ತಮ್ಮ ಅಪ್ಪನೊಂದಿಗೆ ತುಂಬಾ ಭಾವುಕವಾದ ಸಂಬಂಧ ಹೊಂದಿದ್ದವಳು ಆಕೆಯೇ. ಲಂಕೇಶರಿಗೆ ಸ್ಟ್ರೋಕ್ ಆಗಿರುವ ಬಗ್ಗೆ ಗೌರಿಗೆ ಗೊತ್ತಾದರೆ ಆಕೆ ಪ್ಯಾರಿಸ್‌ಅನ್ನು ತೊರೆದು ನಿಂತ ಕಾಲಲ್ಲೇ ಬೆಂಗಳೂರಿಗೆ ಬರುತ್ತಾಳೆಂದು ನಮಗೆ ಗೊತ್ತಿತ್ತು. ಆ ಕಾರಣಕ್ಕೇ ಲಂಕೇಶರ ಆರೋಗ್ಯ ಕೆಟ್ಟಿದ್ದರ ಬಗ್ಗೆ ಆಕೆಗೆ ಹೇಳುವುದೇ ಬೇಡವೆಂದು ನಿರ್ಧರಿಸಿದೆವು.

ಗೌರಿ ಸಾಮಾನ್ಯವಾಗಿ ವಾರಕ್ಕೊಮ್ಮೆ ಮನೆಗೆ ಫೋನ್ ಮಾಡಿ ನನ್ನ, ಬೇಬಿ ಹಾಗು ಅಜಿತು ಜೊತೆ ಮಾತನಾಡುತ್ತಿದ್ದಳು. ಲಂಕೇಶರಿಗೆ ಫೋನ್ ಎಂದರೇ ಒಂದು ರೀತಿಯ ಅಲರ್ಜಿ ಇದ್ದಿದ್ದರಿಂದ ಅವರೊಂದಿಗೆ ಪತ್ರಗಳ ಮೂಲಕ ಸಂಪರ್ಕ ಇಟ್ಟುಕೊಂಡಿದ್ದ ಗೌರಿ ಆಗೊಮ್ಮೆ, ಈಗೊಮ್ಮೆ ಮಾತ್ರ ತನ್ನ ಅಪ್ಪನನ್ನು ಫೋನ್‌ನಲ್ಲಿ ಮಾತನಾಡಿಸುತ್ತಿದ್ದಳು.

1994ರ ಜನವರಿಯ ಆರಂಭದ ದಿನಗಳಲ್ಲಿ ಸ್ಟ್ರೋಕ್ ಕಾರಣದಿಂದ ಲಂಕೇಶರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಆಸ್ಪತ್ರೆ ಸೇರಿದ್ದರು. ಗೌರಿಯ ಹುಟ್ಟಿದ ಹಬ್ಬ ಅದೇ ತಿಂಗಳ 29 ರಂದು. ತನ್ನ ಹುಟ್ಟುಹಬ್ಬದಂದು ಆಕೆ ಜರ್ಮನಿ ದೇಶದಲ್ಲಿ ಪ್ರವಾಸ ಮಾಡಲಿದ್ದರಿಂದ ತಾನೇ 29ರಂದು ಮನೆಗೆ ಫೋನ್ ಮಾಡಿ ಎಲ್ಲರೊಂದಿಗೆ ಮಾತನಾಡುತ್ತೇನೆ ಎಂದು ಮುಂಚಿತವಾಗಿಯೇ ಸೂಚಿಸಿದ್ದಳು. ನನಗೋ ಚಿಂತೆ. ಅಷ್ಟು ಹೊತ್ತಿಗೆ ಲಂಕೇಶರು ಮನೆಗೆ ಬಂದರೆ ಈ ಗುಟ್ಟನ್ನು ಆಕೆಯಿಂದ ಕಾಪಾಡಬಹುದು ಎಂದು. ಸದ್ಯ ಲಂಕೇಶರು ಆಕೆಯ ಹುಟ್ಟುಹಬ್ಬಕ್ಕೆ ಇನ್ನು ಎರಡು ದಿನಗಳು ಇವೆಯೆನ್ನುವಾಗ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಮನೆಗೆ ಬಂದರು.

ಗೌರಿ ಹೇಳಿದ್ದಂತೆ 29ರ ಮುಂಜಾನೆ ಮನೆಗೆ ಫೋನ್ ಮಾಡಿದಳು. ನಾವೆಲ್ಲರೂ ಆಕೆಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಹೇಳಿದೆವು. ಲಂಕೇಶರು ಜರ್ಮನಿ ಬಗ್ಗೆ, ಅಲ್ಲಿನ ಹವಾಮಾನದ ಬಗ್ಗೆ ಆಕೆಯೊಂದಿಗೆ ಕೆಲ ನಿಮಿಷ ಮಾತನಾಡಿದರು. ನಾನು ಎಂದಿನಂತೆ "ಚೆನ್ನಾಗಿ ಊಟ ಮಾಡುತ್ತಿದ್ದೀಯಾ? ಆರೋಗ್ಯ ನೋಡಿಕೊಳ್ಳುತ್ತಿದ್ದೀಯಾ?" ಎಂದೆಲ್ಲ ವಿಚಾರಿಸಿಕೊಂಡು "ಹುಷಾರಾಗಿರು ಮರಿ" ಎಂದೆ. ಗೌರಿಗೆ ಯಾವ ಸುಳಿವೂ ಸಿಗದೆ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ ಎಂದು ನೆಮ್ಮದಿಯಿಂದಿದ್ದಳು. ಅದಾದನಂತರ ಆಕೆ ನನ್ನೊಂದಿಗೆ ಮತ್ತು ಬೇಬಿಯೊಂದಿಗೆ ಹಲವಾರು ಬಾರಿ ಫೋನ್ ಮೂಲಕ ಮಾತನಾಡಿದಾಗಲೂ ನಾವು ಆಕೆಗೆ ಏನನ್ನೂ ಹೇಳಲಿಲ್ಲ.

ಆದರೆ ಇದಾದ ನಾಲ್ಕೈದು ವಾರಗಳಲ್ಲಿ ಮಾರ್ಚ್ 8 ರಂದು ಲಂಕೇಶರ ಹುಟ್ಟುಹಬ್ಬ ಬಂದೇಬಿಟ್ಟಿತು. ಅವತ್ತು ಗೌರಿ ತನ್ನ ಅಪ್ಪನ ಆಫೀಸಿಗೆ ಫೋನ್ ಮಾಡಿ "ಹ್ಯಾಪಿ ಬರ್ತ್‌ಡೇ ಅಪ್ಪಾ, ಹೇಗಿದ್ದೀಯಾ?" ಎಂದು ಕೇಳಿದ್ದಾಳೆ. ಆಗ ಲಂಕೇಶರು "ಐ ಆಮ್ ಫೈನ್. ಸ್ಟ್ರೋಕ್‌ನಿಂದ ಸಂಪೂರ್ಣವಾಗಿ ರಿಕವರ್ ಆಗಿದ್ದೇನೆ" ಎಂದಿದ್ದಾರೆ. ಅದನ್ನು ಕೇಳಿ ಗೌರಿಗೆ ಶಾಕ್ ಆಗಿದೆ. "ಏನು ಸ್ಟ್ರೋಕ್" ಎಂದು ಆಕೆ ಕೇಳಿದ್ದಾಳೆ. ಆಗ ಆಕೆಗೆ ಏನೆಂದು ಉತ್ತರ ಕೊಡುವುದೆಂದು ಲಂಕೇಶರಿಗೆ ಗೊತ್ತಾಗದೆ ಅವರು ಇದ್ದಕ್ಕಿದ್ದಂತೆ ಫೋನ್ ಕಟ್ ಮಾಡಿದ್ದಾರೆ. ಇದರಿಂದ ಇನ್ನಷ್ಟು ಕಂಗಾಲಾದ ಗೌರಿ ನನ್ನ ಅಂಗಡಿಗೆ ಫೋನ್ ಮಾಡಿ "ಅಪ್ಪನಿಗೆ ಯಾವಾಗ ಸ್ಟ್ರೋಕ್ ಆಯಿತು. ನನಗ್ಯಾಕೆ ಅದರ ಬಗ್ಗೆ ಹೇಳಲಿಲ್ಲ" ಎಂದೆಲ್ಲ ಕಿರುಚಾಡಿದಳು.

"ಯಾರು ನಿನಗೆ ಹೇಳಿದ್ದು?" ಎಂದು ನಾನು ಕೇಳಿದೆ. ಆಗ ಗೌರಿ "ಅಪ್ಪನಿಗೆ ವಿಶ್ ಮಾಡೋಕೆ ಅಂತ ಫೋನ್ ಮಾಡಿದ್ದೆ. ಆಗ ಅಪ್ಪ ಹೇಳಿತು. ಏನಾಗುತ್ತಿದೆ ಅಲ್ಲಿ, ನನಗ್ಯಾಕೆ ಹೇಳಲಿಲ್ಲ" ಎಂದು ನನ್ನನ್ನು ಪ್ರಶ್ನಿಸಿದಳು. ಆಕೆಗೆ ಏನೆಂದು ಉತ್ತರ ಹೇಳುವುದೆಂದು ನನಗೂ ಗೊತ್ತಾಗದೆ ನಾನೂ ಫೋನ್ ಕಟ್ ಮಾಡಿದೆ. ಕೂಡಲೇ ನಾನು ಲಂಕೇಶರಿಗೆ ಫೋನ್ ಮಾಡಿ "ನೀವು ಗೌರುಗೆ ಏನಂತ ಹೇಳಿದಿರಿ?" ಎಂದು ಕೇಳಿದೆ.

ಅದಕ್ಕೆ ಲಂಕೇಶರು "ಅಲ್ಲಾ ಕಣೆ, ನನಗೆ ಸ್ಟ್ರೋಕ್ ಆಗಿದ್ದರ ಬಗ್ಗೆ ನೀನು ಇಷ್ಟು ದಿನ ಅವಳಿಗೆ ಹೇಳಿರಲಿಲ್ಲ ಅಂತ ನನಗೇನು ಗೊತ್ತು? ಈಗ ಸ್ಟ್ರೋಕ್‌ನಿಂದ ರಿಕವರ್ ಆಗಿದ್ದೇನೆ ಅಂದೆ. ಅದಕ್ಕೆ ಅವಳು ಏನು ಸ್ಟ್ರೋಕ್ ಅಂತೆಲ್ಲ ಕೇಳಿದಳು. ಏನು ಹೇಳೋದು ಅಂತ ಗೊತ್ತಾಗದೆ ಫೋನ್ ಕಟ್ ಮಾಡಿದೆ" ಎಂದರು. ನಾನು "ಅವಳು ಮತ್ತೆ ಫೋನ್ ಮಾಡಿದರೆ ನೀವು ಮಾತನಾಡ ಬೇಡಿ. ನನಗೆ ಅವಳು ಫೋನ್ ಮಾಡುತ್ತಾಳೆ. ಆಗ ನಾನೇ ಅವಳಿಗೆ ಹೇಳುತ್ತೇನೆ" ಎಂದೆ. ನಾನು ನಿರೀಕ್ಷಿಸಿದ್ದಂತೆ ಗೌರಿ ಮತ್ತೊಮ್ಮೆ ನನಗೆ ಫೋನ್ ಮಾಡಿದಳು. ಆಗ ನಾನು "ಅಪ್ಪನಿಗೆ ಸಣ್ಣದಾದ ಸ್ಟ್ರೋಕ್ ಆಗಿತ್ತು, ಈಗ ಅಪ್ಪ ಚೆನ್ನಾಗಿದೆ. ನೀನು ಯೋಚನೆ ಮಾಡಬೇಡ" ಎಂದೆಲ್ಲ ಹೇಳಿದೆ. ಆದರೂ ಆಕೆ "ನನ್ನಿಂದ ಇದನ್ನು ಯಾಕೆ ಬಚ್ಚಿಟ್ಟೆ. ನಾನು ನಿನ್ನನ್ನ ನಂಬೋದಿಲ್ಲ, ನಾನು ಈಗಲೇ ಬೆಂಗಳೂರಿಗೆ ವಾಪಸ್ ಬರ್ತೀನಿ" ಎಂದು ಹಠ ಹಿಡಿದಳು. "ನೋಡು, ನೀನು ಹೀಗೆ ಹೇಳ್ತೀಯಾ ಅಂತಾನೆ ನಿನಗೆ ಇದರ ಬಗ್ಗೆ ಹೇಳಿರಲಿಲ್ಲ, ನನ್ನನ್ನು ನಂಬು. ಅಪ್ಪ ಈಗ ಚೆನ್ನಾಗಿದೆ. ಅಪ್ಪಾನೇ ನಿನಗೆ ಹೇಳಿತಲ್ಲ. ಅಪ್ಪನ ಜೊತೆ ನೀನೇ ಮಾತನಾಡಿದೆಯಲ್ಲ. ಅಪ್ಪನ ಆರೋಗ್ಯ ಚೆನ್ನಾಗಿಲ್ಲ ಅಂದರೆ ನಿನ್ನ ಜೊತೆ ಮಾತನಾಡುವುದಕ್ಕೆ ಅಪ್ಪನಿಗೆ ಆಗುತ್ತಿತ್ತಾ? ಅಪ್ಪ ಈಗ ಚೆನ್ನಾಗಿದೆ. ನೀನು ಯೋಚನೆ ಮಾಡಬೇಡ" ಎಂದೆಲ್ಲ ಗೌರಿಗೆ ಸಮಾಧಾನ ಮಾಡಿದೆ.


ಮತ್ತೆ ತನ್ನ ಅಪ್ಪನೊಂದಿಗೆ ಮಾತನಾಡಿದ ನಂತರವೇ ಗೌರಿ ಸ್ವಲ್ಪ ನೆಮ್ಮದಿ ಪಡೆದಳು. ಆದರೂ ಆಕೆ ಸುಮ್ಮನಿರಲಿಲ್ಲ. ಅಪ್ಪ ತನ್ನ ರೂಮಿನಲ್ಲಿ ಒಬ್ಬರೇ ಮಲಗುತ್ತಾರೆ. ಅಕಸ್ಮಾತ್ ಮಧ್ಯರಾತ್ರಿ ಅವರಿಗೆ ಮತ್ತೆ ಎಂತಹದ್ದೋ ಆರೋಗ್ಯ ಸಮಸ್ಯೆ ಎದುರಾದರೆ, ಮತ್ತೊಂದು ಸ್ಟ್ರೋಕ್ ಸಂಭವಿಸಿದರೆ, ಹಾರ್ಟ್ ಅಟ್ಯಾಕ್ ಆದರೆ, ಅದರ ಬಗ್ಗೆ ಅಪ್ಪ ಮನೆಯಲ್ಲಿರುವವರಿಗೆ ಸೂಚಿಸುವುದು ಹೇಗೆ? ಆದ್ದರಿಂದ ಮನೆಯಲ್ಲಿರುವ ಅಪ್ಪನ ಬೆಡ್‌ರೂಮ್ ಮತ್ತು ಆಫೀನಲ್ಲಿರುವ ಅಪ್ಪನ ಖಾಸಗಿ ಚೇಂಬರ್‌ಗಳಲ್ಲಿ ಒಂದು ಅಲಾರಾಮ್ ಬೆಲ್‌ನ ಸ್ವಿಚ್ ಅಳವಡಿಸಿ ಎಂದು ಪ್ಯಾರಿಸ್‌ನಿಂದಲೇ ಸೂಚಿಸಿದಳು. ಅಕಸ್ಮಾತ್ ಲಂಕೇಶರಿಗೆ ಎದ್ದೇಳಲಾಗದಂತಹ ಪರಿಸ್ಥಿತಿ ನಿರ್ಮಾಣವಾದರೂ ಅವರು ಇತರರಿಗೆ ಅದರ ಬಗ್ಗೆ ಸೂಚಿಸಲು ಅದು ನೆರವಾಗುತ್ತದೆ ಎಂಬುದು ಗೌರಿಯ ಯೋಚನೆಯಾಗಿತ್ತು.

ಆದರೆ ಅದಕ್ಕೆ ಹಲವು ವಾರಗಳ ಹಿಂದೆಯ
ಆಸ್ಪತ್ರೆಯಿಂದ ಹಿಂದಿರುಗಿದ್ದ ಲಂಕೇಶರಿಗೆ ಇಂತಹ ಒ
ಬೆಲ್ ವ್ಯವಸ್ಥೆಯ ಬಗ್ಗೆ ಹೇಳುವುದಾದರೂ ಹೆ
ಯಾಕೆಂದರೆ ಅಂತಹ ವ್ಯವಸ್ಥೆ ಮಾಡಿಸುತ್ತಿದ್ದೇವೆ ಎ
ಹೇಳಿದ್ದರೆ ಲಂಕೇಶರು ತಮ್ಮ ಆರೋಗ್ಯದ ಸ್ಥಿತಿಯ
ಇನ್ನಷ್ಟು ಆತಂಕಗೊಳ್ಳುತ್ತಿದ್ದರಷ್ಟೆ. ಆದರೂ ಲಂಕೇ
ಆಫೀಸಿಗೆ ಹೋಗಿದ್ದಾಗ ಎಲೆಕ್ಟ್ರೀಶಿಯನ್ ಒಬ್ಬನನ್ನು
ಲಂಕೇಶರ ಬೆಡ್ ಪಕ್ಕ ಒಂದು ಸ್ವಿಚ್ ಅನ್ನು ಅಳವ
ಅದರ ಬೆಲ್ ಅನ್ನು ಹಾಲ್ ರೂಮಿನಲ್ಲಿ ಫಿಕ್ಸ್ ಮಾಡಿಸಿ

ಅವತ್ತು ರಾತ್ರಿ ಆಫೀಸಿನಿಂದ ಲಂಕೇಶರು ಹಿಂದಿ
ದಾಗ ಅವರ ಡ್ರೈವರ್ ರೇವಣ್ಣ ಲಂಕೇಶರ ಪುಸ್ತಕಗ
ಹೊತ್ತು ಲಂಕೇಶರಿಗಿಂತ ಮುನ್ನವೇ ಅವರ ಬೆಡ್‌ರೂ
ಅನ್ನು ಹೊಕ್ಕ. ರೇವಣ್ಣ ಬೆಡ್‌ರೂಮಿನ ಸ್ವಿಚ್‌ಗ
ತಡಕಾಡುತ್ತಿದ್ದಾಗ ಆತ ಆಕಸ್ಮಿಕವಾಗಿ ನಾವು ಹೊಸ
ಅಳವಡಿಸಿದ್ದ ಸ್ವಿಚ್ ಅನ್ನು ಒತ್ತಿದ. ಕೂಡಲೇ ಹಾಲ್
ದೊಡ್ಡದಾಗಿ ಬೆಲ್ ಹೊಡೆಯಲಾರಂಭಿಸಿತು. ಅ
ಕೇಳಿಸಿಕೊಂಡ ಲಂಕೇಶರು "ಏನಿದು?" ಎಂದು ಕೇಳಿ
ಆಗ ಬೇಬಿ "ಏನಿಲ್ಲ ಅಪ್ಪಾ, ನೀನು ಎಲ್ಲರಿಗಿಂತ ಮೊ
ಎದ್ದೇಳುತ್ತೀಯ. ಕಾಫೀ ಬೇಕು ಅಂತ ಕೆಲಸದವರಿಗೆ
ಸ್ಟಡಿ ರೂಮಿನಿಂದಲೇ ಬೆಳಗ್ಗೆ ಕಿರುಚುತ್ತಿರುತ್ತೀಯ
ಅದರಿಂದ ನಮಗೆಲ್ಲರಿಗೂ ಡಿಸ್ಟರ್ಬ್ ಆಗುತ್ತೆ. ಅದ
ಈ ಬೆಲ್ ಹಾಕಿಸಿದ್ದೇವೆ. ಅದಕ್ಕೆ ಒಂದು ಕೋ
ಇಟ್ಟುಕೊ. ಇನ್ನು ಮುಂದೆ ನೀನು ಆ ಬೆಲ್ ಅ
ಒಂದು ಸಾರಿ ಒತ್ತಿದರೆ ಕೆಲಸದವರು ಎದ್ದೇಳುತ್ತಾ
ನೀನು ವಾಕಿಂಗ್‌ಗೆ ರೆಡಿ ಆದ ಮೇಲೆ ಎರಡು ಸ
ಬೆಲ್ ಒತ್ತಿದರೆ ನಿನಗೆ ಕಾಫಿ ತಂದು ಕೊಡುತ್ತಾ
ಎಂದಳು.

ಆ ಬೆಲ್ ಹಿಂದಿದ್ದ ನಮ್ಮ ಉದ್ದೇಶದ ಬಗ್ಗೆ ಒಂದಿ
ಗೊತ್ತಿರದಿದ್ದ ಲಂಕೇಶರು ಈ ವ್ಯವಸ್ಥೆಯಿಂದ ತುಂ
ಸಂತೋಷಗೊಂಡರು. ಎಷ್ಟರ ಮಟ್ಟಿಗೆಂದರೆ ತಮ್ಮ ಆಫೀ
ಅಂಟಿ ಚೇಂಬರ್‌ನಿಂದಲೂ ಇಂತಹದ್ದೇ ವ್ಯವಸ್ಥೆಯ
ಮಾಡಿಸಿಕೊಂಡರು. ಇದಾದನಂತರ ಬೇಬಿ ಸೂಚಿಸಿದ
ಲಂಕೇಶರು ತಮ್ಮ ಎಂದಿನ ರೂಢಿಯಂತೆ ಸೂರ
ಮೂಡುವ ಮುನ್ನವೇ ಎಲ್ಲರಿಗಿಂತ ಮೊದಲೇ ಎ
ಕೆಲಸದವರನ್ನು ಎದ್ದೇಳಿಸಲು ಜೋರಾಗಿ ಬಡಿದುಕೊಳ್ಳು
ಆ ಬೆಲ್ ಅನ್ನು ಒತ್ತುತ್ತಿದ್ದರು. ಅಕಸ್ಮಾತ್ ಕೆಲಸದ
ತಕ್ಷಣ ಎದ್ದೇಳದಿದ್ದರೆ ಅವರು ಆ ಬೆಲ್‌ಅನ್ನು ಮತ್ತೆ ಮ
ಒತ್ತುತ್ತಿದ್ದರು. ಇದರಿಂದ ಕೆಲಸದವರು ಮಾತ್ರವ
ಮನೆಯಲ್ಲಿದ್ದ ಎಲ್ಲರೂ ಹಾಗು ಅಕ್ಕಪಕ್ಕದ ಮನೆಯವ
ಎದ್ದೇಳುವಂತಾಗುತ್ತಿತ್ತು!

ಲಂಕೇಶರು ಕೊನೆಗೂ ಹೊರಟುಹೋದಾಗ ಅ
ಎಡಗೈ ಅವರ ಹೃದಯದ ಮೇಲಿತ್ತು. ಅವರ ಬಲ
ಆ ಸ್ವಿಚ್ಚಿನ ದಿಕ್ಕಿನತ್ತ
ಚಾಚಿಕೊಂಡಿತ್ತು. ಲಂಕೇಶರು ತಮಗೆ ಏನೋ ಕೆಟ್ಟ
ಆಗುತ್ತಿದೆ ಎಂದು ಅರಿತು ಅದರ ಬಗ್ಗೆ ಮನೆಯಲ್ಲಿದ್ದವ
ಸೂಚಿಸಲು ಆ ಸ್ವಿಚ್ಚಿನತ್ತ ಅವರು ಕೈ ಚಾಚಿದ್ದರೆ ಎ
ಅನುಮಾನ ಇವತ್ತಿಗೂ ನನ್ನನ್ನು ಕಾಡುತ್ತಿದೆ...



(ಮುಂದುವರೆಯುವು

ಸೋನಿ ಸೂರಿ ಅಲ್ಲಿರುವವರೆಗೂ ನಮ್ಮ ಅಭಿವೃದ್ಧಿ ಸಾಧ್ಯವಿಲ್ಲ


ಅಭಿವೃದ್ಧಿ ನಮಗೆ ಬೇಕು
ಹೆಚ್ಚೆಚ್ಚು ಕಾರ್‌ಗಳು, ಶಾಪಿಂಗ್ ಮಾಲ್‌ಗಳು
ಕೊಳ್ಳುವ ಸರಕುಗಳು.
ಅದಕ್ಕೆಲ್ಲಬೇಕು ಕೈಗಾರಿಕೆಗಳು,
ಕೈಗಾರಿಕೆಗಳಿಗೆ ಬೇಕು ಅದಿರುಗಳು,
ಅದಿರುಗಳು ಬೇಕೆಂದರೆ ನಮಗೆ ಬೇಕು ಬಸ್ತರ್ ಭೂಮಿ.
ಆದರೆ ಸೋನಿ ಸೂರಿ ಅಲ್ಲಿರುವವರೆಗೂ
ನಮ್ಮ ಅಭಿವೃದ್ಧಿ ಅಸಾಧ್ಯ.

ಅದಕ್ಕೆ ನಾವು ಸೋನಿ ಸೂರಿಯನ್ನು ದಸ್ತಗಿರಿ ಮಾಡಿಸಿದೆವು
ಪೊಲೀಸ್ ಠಾಣೆಗೆ ಕರೆದುಕೊಂಡು ಹೋದೆವು
ಅಲ್ಲಾಕೆಯನ್ನು ಬೆತ್ತಲೆ ಮಾಡಿಸಿದೆವು
ಎಲೆಕ್ಟ್ರಿಕಲ್ ಶಾಕ್ ನೀಡಿ ಚಿತ್ರಹಿಂಸೆ ಕೊಡಿಸಿದೆವು.

ಸೋನಿ ಸೂರಿ ತೀವ್ರ ನೋವಿನಿಂದ ವಿಲಿವಿಲಿ ಒದ್ದಾಡಿದಳು
ಆಕೆಯ ಕಣ್ಣುಗಳು ತಮ್ಮ ಗುಡ್ಡೆಗಳಿಂದ ಹೊರಗುಬ್ಬಿದವು
ಆಕೆಯ ಇಡೀ ದೇಹ ಸೆಟೆದುಕೊಂಡಿತು.
ಆಕೆ ಚೀರಿಕೊಳ್ಳಬೇಕಿತ್ತು
ಆದರೆ ಆಕೆಯ ಗಂಟಲಿಗೂ ಕರುಣೆ ಎಂಬುದಿರಲಿಲ್ಲ,

ಆಕೆಯ ಬಾಯಿಂದ ಯಾವ ಸದ್ದೂ ಹೊರಬರದೆ
ಬರೀ ನೊರೆ ಮಾತ್ರ ಉಕ್ಕಿತು.
ಇದೆಲ್ಲ ಆದ ಮೇಲೆ ಆಕೆ ಕೂಡ ಬದಲಾದಳು.

ಈಗ ಅಭಿವೃದ್ಧಿಗೆ ಅಡ್ಡಿ ಮಾಡಲು ಸೋನಿಗೆ ಆಸೆ ಉಳಿದಿಲ್ಲ,
ನಮ್ಮ ದೇಶದ ಧೀರ ಪೊಲೀಸರು
ನಮ್ಮ ಸರ್ಕಾರ
ನಮ್ಮ ಅಭಿವೃದ್ಧಿ
ನಾಗರಿಕರಾದ, ಸುಸಂಸ್ಕೃತರಾದ, ಇಂಡಿಯಾದ
ನಗರಗಳ ನಿವಾಸಿಗಳಾದ ನಾವು
ಇನ್ನು ಮುಂದೆ ಎಂದೂ ಅನಾಗರಿಕ
ಆದಿವಾಸಿಯಾದ ಸೋನಿಯ ಬಗ್ಗೆ ಮಾತನಾಡುವ
ವಿಕೃತ ತಪ್ಪನೆಸಗುವುದಿಲ್ಲ,
ಅಷ್ಟೇ ಅಲ್ಲ, ಎಲ್ಲರೂ ತಮ್ಮ ಹೆಣ್ಣುಮಕ್ಕಳ ಮೇಲೆ
ಪ್ರಮಾಣ ಮಾಡಿ
ಮುಂದೆ ಯಾರೂ ಆಕೆಯ ಬಗ್ಗೆ ಮಾತನಾಡದಂತೆ
ನೋಡಿಕೊಳ್ಳುತ್ತೇವೆ.
ಎಷ್ಟೇ ಆದರೂ ನಮ್ಮ ದೇಶದ ಅಭಿವೃದ್ಧಿ ತುಂಬಾ
ಗಂಭೀರವಾದ ವಿಚಾರ.



ಸೋನಿ ಸೂರಿ ಸತ್ತ ನಂತರ
ನಾವು ಘನ ವಿಚಾರಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತೇವೆ
'ಬಸ್ತರ್‌ನಲ್ಲಿ ಹೇಗೆ ನಕ್ಸಲಿಸಂ ಅನ್ನು
ತಡೆಯಬಹುದು' ಎಂಬ ನಮ್ಮ ಪ್ರಬಂಧಗಳಲ್ಲಿ
ಅಭಿವೃದ್ಧಿಯ ಮೂಲಕವೇ ಸರ್ಕಾರ
ನಕ್ಸಲರನ್ನು ನಿಗ್ರಹಿಸಬಹುದೆಂದು ಪ್ರಬಲವಾಗಿ
ವಾದಿಸುತ್ತೇವೆ.

ಚಿಂತಿಸಬೇಡಿ, ನಾವು ಅಷ್ಟು
ಕಟುಕರಲ್ಲ.
ನಮ್ಮ ಇಂತಹ ವಿಚಾರಪೂರ್ಣ
ಪ್ರಬಂಧಗಳಲ್ಲಿ
ಪೊಲೀಸರ ನಡತೆಯ ಬಗ್ಗೆ ಒಂದೆರಡು
ಸಾಲುಗಳನ್ನು ಬರೆಯಲು
ನಾವು ಮರೆಯುವುದಿಲ್ಲ.

• ಹಿಮಾಂಶು ಕುಮಾರ್
(ಬಸ್ತರ್ ಪ್ರದೇಶದಲ್ಲಿ ಮಾನವ
ಹಕ್ಕುಗಳಿಗೆ ಹೋರಾಡುತ್ತಿರುವವರು
ಹಿಮಾಂಶು ಕುಮಾರ್)
ಕನ್ನಡಕ್ಕೆ: ಗೌರಿ ಲಂಕೇಶ್

...ಡಿ ಮಾಡಿಸಿದ್ರೆ ಸರಕಾರಕೆ ಒಳ್ಳೆ ಆದಾಯ ಬರದು

...ಪಾಪ ಎಡೂರಪ್ಪನ ಕಷ್ಟ ನೋಡಕ್ಯಾಯ್ತಾಯಿಲ್ಲ" ...ಮ್ಮಿ.

...ವ್ನುನಿಗೇನು ಕಷ್ಟವುಲ?" ಎಂದ ಕಾಳಮಾವ.

...ಕ್ಕೆ ಇಡೀ ಕರ್ನಾಟಕದಲ್ಲಿ ಅವುನಂತ ನಿರುದ್ಯೋಗಿನೇ ...ಮಾವ. ವತ್ತರೆ ಎದ್ದು ಏನು ಮಾಡ್ಬಿ, ಎಲ್ಲಿಗೋಗ್ಲಿ ...ಗ್ಯದೆ. ಅದ್ಕೆ ಯಾದಗಿರಿಗೋಗಿ ಮಾತೆ ಮಾಣಿಕೇಶ್ವರಿ ...ಬಿಡು ಬಂದವ್ರುನೆ."

...ಬಿ ಸೀ ಮೆ
...ಷ್ಟ ಪುರಾಣ
► ಬಿ. ಚಂದ್ರೇಗೌಡ

...ಮು ವಳ್ಳೆ ದೇವರೆ?"

...ದೇವರು ಅಂದ್ರೆ, ಜೀವಂತ ಇರೋ ದೇವರು ...ವ. ಎತ್ತರವಾದ ಗುಹೆವಳಗಡೆ ಇದ್ದಳಂತೆ. ...ಗಟ್ಟೆ ಈಚೆಗೇ ಬರದಿಲವಂತೆ. ಈ ಸತಿ ಬತ್ತಳೆ ..."ಗೊತ್ತಾಗಿ ಎಡೂರಪ್ಪ ಹೋಗಿ 'ತಿರಗ ...ಮಂತ್ರಿಯಾಗಬೇಕು' ಅಂದನಂತೆ. ಅದ್ಕೆ ಅಮ್ಮ ...ದ್ಧಿ ಅಂಕಾರ ಬುಡು ತಿರುಗ ಮುಖ್ಯಮಂತ್ರಿ ...ಅಂದಳಂತೆ."

...ಲ್ಲಾ, ಎಡೂರಪ್ಪ ಹುಟ್ಟಿದಾಗಲೇ ಬಂದಿರೋ ಅ... ...ಅದ್ಯಂಗ್ಲ ಬುಟ್ಟನೂ?"

...ಬಿಟ್ರು ಸ್ವಲುಪ ಹೊತ್ತು ಬುಡ್ತನೆ. ಅದು ಅಮೇಳಿರೊ ...ನ್ಯನಪಾದಾಗ ಬುಡಬಹುದು. ತಿರಗ ಮಾಮೂಲಿ ... ಆಯ್ತನೆ. ಹಿಂಗಾದ್ರೆ, ತಿರಗ ಮುಖ್ಯಮಂತ್ರಿ ...ನೂ?"

...ದೊಂತರ ಹಿಂಗಾಯ್ತು ಕಂಡ್ಯ" ಎಂದಳು ಜುಮ್ಮಿ.

...ಬಂಗೇ?"

...ಬಚ್ಚು ಬುಡದೆ ಮದಿವಾಗಂಗಿಲ್ಲ, ಮದಿವಾಗದೆ ...ಬುಡಂಗಿಲ್ಲ. ಅಂಗಾಯ್ತು ಎಡೂರಪ್ಪನ ಕತೆ."

...ದರವಾಗಿಲ್ಲ ಕಣೆ, ನೀನು ಎಡೂರಪ್ಪನ್ನ ...ಮಾಡಿಕಂಡಿದ್ದಿ."

..., ಅವುನು ಅರ್ಥವಾಗೋವತ್ತಿಗೆ ಅಲವೆ ಜನಗಳ್ಯಲ್ಲ ...ಮು."

...ಪಾಪ ಇವುನ ಸವಾಸ ಮಾಡಿ ಆ ಬನ್ನೂರಮಠ ... ಬಿದ್ದ ಅತ್ತಗೆ."

...ಬನ್ನೂರ ಮಠ ಯಾರ್ದ?"

"ಸಂತೋಷ್ಯಗಡೆ ಇದ್ರಲ್ಲ ಮಾವ, ಅವುರ ಜಾಗಕ್ಕೆ ಬನ್ನರು ಮಠ ಅನ್ನೋ ರಿಟೈರ್ ಜಡಜಿಯು ಎಡೂರಪ್ಪ ಸುತ್ತೂರು ಸ್ವಾಮಿ ಹೇಳಿದ ಅಂತ ಲೋಕಾಯುಕ್ತರು ಅಂತ ಆಡ್ರು ಮಾಡಿ ಕಳಿಸಿದ್ದ. ರಾಜ್ಯಪಾಲ ಈ ಬನ್ನೂರು ಮಠದ ಮ್ಯಾಲೆ ದೂರವೆ, ಬ್ಯಾರೆ ಹೆಸುರು ಕಳಿಸಿ ಅಂತ ಹಟವಮಾಡಿದ. ಸರಕಾರ ಅವುರೇ ಆಗಬೇಕು ಅಂತ ಹಟ ಹಿಡೀತು. ಕಡಿಗೆ ಬನ್ನೂರು ಮಠ ಯಂತೋರು ಅಂತ ಯಾರೋ ಸೀರೆಮಾವನಂಥೋನು ಅರ್ಜಿ ಬರದನಂತೆ. ಅದು ಗೊತ್ತಾಗಿ ಪಾಪ ಬನ್ನೂರು ಮಠ' ನನಿಗೆ ಲೋಕಾಯುಕ್ತವೂ ಬ್ಯಾಡ, ಈ ಲೋಕದ ಅಪವಾದನೂ ಬ್ಯಾಡ' ಅಂತ ಮನಿಗೋದ್ರು."

"ಮದ್ಲೆ ಹೋಗಕ್ಕೇನಾಗಿತ್ತು?"

"ಒಳ್ಳೆ ಜಡಜಾಗಿದ್ರೆ ಹೋಯ್ತಿದ್ರು ದೊಡಪ್ಪ, ಲೇಟಾಗಿ ಹೋಗಿರದ್ರಿಂದ ಅವುರ ವೇಲಿದ್ದ ಅನುವಮಾನಗಳಿಗೆ ಜೀವ ಬಂದಂಗಾಯ್ತು" ಎಂದುಕೊಂಡು ವಾಟಿಸ್ನೆ ಬಂದ.

ಅವನನ್ನ ನೋಡಿದಕೂಡಲೇ ಸೀರ ಕುಚೋದ್ಯದ ಕಣ್ಣು ಬಿಡುತ್ತಾ

ಎಲ್ಲೀ ಅಂದ್ರಲ್ಲಿ ಮನಿಕಂಡು ಮಾಡ್ತಯಿದ್ದರಂತೆ. ಅದ್ನಾರ ನೋಡಿಕಂಡು ಬರಿವಾ ಅಂತ ಅಂಗಂದೆ."

"ಯಾರು ಚಿಗಪ್ಪ ಹೇಳಿದೋರು ನಿನಿಗೆ?"

"ಯಾರೇಳದೇನು. ಪೇಪ್ರಲ್ಲೇ ಕೊಟ್ಟವುರಂತೆ, ಟೀವಿಲೂ ಬತ್ತಾಯಿದ್ದತಂತೆ."

"ಈ ತೀವಿ ನನಮಕ್ಕಳು ಬಂದು ಯಲ್ಲಾನು ಮನಿಗೇ ತಂದು ತೊರತ ಅವುರೆ ಕಂಡ್ಯ" ಎಂದ ಕಾಳಮಾವ.

"ಅವುರ ಕ್ಯಲಸ ಅವುರು ಮಾಡ್ತರೆ ದೊಡಪ್ಪ, ನೀನು ನೋಡದಂಗಿದ್ದಿಯಲ್ಲಾ, ಅಂಗಿದ್ರಾಯ್ತು."

"ಅಲ್ಲಾ ಕಂಡ್ಯಾ, ಈ ಸೀರ ಹೇಳದ ನೋಡಿದ್ರೆ ಅವಿನ್ನಂಥಾ ನಾಯಿ ನನ್ನ ಮಗನವು."

"ನಾಯಿಗೋಲಸಬ್ಯಾಡ ದೊಡಪ್ಪ, ನಾಯಿಗಳು ನನ್ನಂಗೆ ನಿಮ್ಮಂಗೆ ವಂಶಾಭಿವೃದ್ಧಿಗಾಗಿ ಅಂಗೆ ನ್ಯಡಕತ್ತವೆ. ಅದು ನಿಯಮ. ಅಂತ ಟೈಮಲ್ಲಿ ಪರಿಚಿತ ನಾಯಿಗಳು ನಾಚಿಗತ್ತವೆ. ಆದ್ರೆ ಸೈಂಟ್ ಮೆರಿಸ್ ದ್ವೀಪಕ್ಕೆ ಬಂದೋರಿಗೆ ಅದ್ಯಾವುದೂ ಇರಲಿಲ್ಲ."

"ಅದ್ಯಾರ್ಲ ಅವುರ ಕರಿಸಿದೋರು?"

"ಇನ್ನ್ಯಾರು ಕರುಸ್ತರಕ್ಕ, ಸದಾನಂದ ಗೌಡನೇ ಕರಿಸಿದ್ದು.



"ಉಡುಪಿ ಕಡಿಕಾರ ಹೋಗಿ ಬಾರ್ಲ" ಎಂದ.

"ಯಾಕೆ ಚಿಗಪ್ಪ? ಅಲ್ಲಿ ನನಿಗೇನು ಕೆಲಸ? ಪರ್‍ಯಾಯ ಮುಗದು ಭಾಳ ದಿನಾಯ್ತು."

"ಅದಕ್ಕಲ್ಲ ಕಂಡ್ಯ, ಅವುರ್‍ಯಾರೊ ಪಾರಿನ್ನೋರು ಬಂದು

ಅವುರು ಬಂದಿರೋದ್ರಿಂದ ಅವುರ ಸಂಸ್ಕೃತಿ ಏನೂ ಅಂತ ನಮಿಗೆ ಗೊತ್ತಾಯ್ತದೆ. ನಮದೇನೂ ಅಂತ ಅವುರು ತಿಳಕಂಡೋಯ್ತರೆ. ಇದರಿಂದ ಉಡುಪಿ ನಿರುದ್ಯೋಗದ ಸಮಸ್ಯೆ ನಿವಾರಣೆ ಆಯ್ತದೆ ಅಂತ ಹೇಳಿದ್ನಲ್ಲಾ."

"ನಿರುದ್ಯೋಗದ ಸಮಸ್ಯೆ ಅದ್ಯಂಗೆ ನಿವಾರಣೆ ಆಯ್ತದೊ? ಅವುಕೆ ಡ್ರಿಂಕ್ಸ್ ಸಪ್ಳೈ ಮಾಡದು, ಬೀಡಿ, ಸಿಗರೇಟು, ಗಾಂಜಾ ತಗೊಂಡೋಗಿ ಕೊಡದು ಒಂದು ಉದ್ಯೋಗನೇ? ಅದಿರ್‍ಲಿ ನಮ್ಮಲ್ಲೇನೋ ಹಾಡು, ನಾಟಕ, ಯಕ್ಷಗಾನ ಅನ್ನೋ ಸಂಸ್ಕೃತಿ ಅವೆ. ಅವುರದ್ಯಾವ ಸಂಸ್ಕೃತಿ?"

"ಅವುರ ಸಂಸ್ಕೃತಿ ತೋರಿದರಲ್ಲೊ, ಸಾರ್ವಜನಿಕವಾಗಿ ವೇದಿಕೆ ಮೇಲೆ ಎಂಜಾಯ್ ಮಾಡಿದರಲ್ಲಾ ಅದೇ ಅವುರ ಸಂಸ್ಕೃತಿ."

"ಅಲ್ಲಾ, ಜನ ನೋಡತಿದ್ದಂಗೆ, ಒಂದೆಂಗಸ ಮನಿಗಿಸಿಗಂಡು ಅವುಳ ಮ್ಯಾಲೆ ಮನಿಕಂಡನಂತಲ್ಲಾ, ಅವುನಿಗ್ಗಿನ್ನೆಷ್ಟು ಧೈರ್ಯ ಇರಬೇಕ್ಲ" ಎಂದ ಸೀರ.

"ಇಂತವುನ್ಯಲ್ಲಿ ಧೈರ್ಯ ಅಂತಿಯಲ್ಲ ಚಿಗಪ್ಪ, ಇದು ಧೈರ್ಯ ಅಲ್ಲ, ಮಿತಿಮೀರಿದ ಅಮುಲು. ಕುಡಕಂಡು, ಬಂಗಿಸೊಪ್ಪು ಸೇದಿಬುಟ್ರೆ ನೀನು ನಮ್ಮ ಚಿಗವ್ವನ ಮ್ಯಾಲೆ ಬೀಳದಿಲವೆ, ಅಂಗೆ ಇದುವೆ."

"ಮುಚಗಳ್ಳ ಕಂಡಿದ್ದಿನಿ. ಇವತ್ತಿಗೂ ನಾನು ನಿಮ್ಮ ಚಿಗವ್ವನ ಹತ್ಯದಲ್ಲೂ ಕುಂತಗಂಡಿಲ್ಲ, ಅವುಳ ಕೈ ಮುಟ್ಟಿದ್ದ ಯಾರೂ ನೋಡಿಲ್ಲ, ಗೊತ್ತೇ" ಎಂದ ಸೀರ.

"ಆದ್ರು ತೀರಿಕೊಂಡೋರೂ ಸೇರಿದ್ರೆ, ಒಂಬತ್ತು ಮಕ್ಕಳು, ಕತ್ತಲೆ ಮನೆಯಿಂದ ಕೊತ್ತಿಮರಿ ಬಂದಂಗೆ ಬಂದ್ರಪ್ಪ" ಎಂದು ವಾಟಿಸ್ನೆ ಹೇಳಿದಾಗ ನಗಾಡಿದ ಜುಮ್ಮಿ,

"ಸೀರಮಾವನ ಬಡ್ಡಿಗೇ ತಂದ ಮುಂಡೆ ಮಗ" ಎಂದಳು.

"ಎಲ್ಲಿಗೆ ಬಂತಯ್ಯ ದೇಶ?" ಎಂದ ಕಾಳಮಾವ.

"ಬಂದಿಲ್ಲ ದ್ವಡಪ್ಪ, ಸಂಸ್ಕೃತಿ ವಕ್ತಾರ್ರು ಬಿಜೆಪಿಗಳೇ ತಂದವುರೆ. ಅದೂ ಉಡುಪಿ ಅತ್ರಕೆ ತಂದವುರೆ. ಬಹಿರಂಗವಾದ ಬ್ಲೂಫಿಲಂ ನ್ಯಡಿವಾಗ ಉಡುಪಿ ಸ್ವಾಮಿನೂ ಇದ್ನಂತೆ."

"ಪೇಜಾವರನೆ?"

"ಅಲ್ಲ, ಅವುನ್ಯಾರೋ ಇನ್ನೊಬ್ಬ ಸ್ವಾಮಿ. ಅದನ್ಯಲ್ಲ ನೋಡಿ ಹೆದ್ರಿಕಂಡು ಮಠದೊಳಿಕೊದೋನು ಇನ್ನೂ ಈಚಿಗೆ ಬಂದಿಲ್ಲವಂತೆ. ಇಂತವೇನಾರ ನ್ಯಡದಾಗ ಪೇಜಾವರಶ್ರೀ ಬಾಯಿಗೆ ಪ್ಲಾಸ್ಟರ್ ಹಾಯ್ಕಂಡಿರತರೆ. ಈಗ್ಲು ಅಂಗೇ ಆಗ್ಯದೆ. ಆದ್ರು, ಸಿಡಿ ಮಾಡಿಸಿದ್ರೆ ಒಳ್ಳೆ ಸೇಲಾಗದು. ಪ್ರವಾಸೋದ್ಯಮಕ್ಕೆ ವಳ್ಳೆ ಆದಾಯ ಬರದು!" ✽

...ಮ್ಮನಗೌಡನ ರೋಮಾಂಚಕ ಕತೆ ▶▶▶


...ಹೊನ್ನೆ ನಮ್ಮೂರ ಕಡೆಯ ಇಬ್ಬರು ಹುಡುಗರು ಮೂರು ಕಂತುಗಳ ಒಂದು ಸಿನಿಮಾ ಸೀರಿಯಲ್ ...ಕೊಂಡು ಬಂದು ಕೊಟ್ಟರು. ಇವರು ನನ್ನ ಪೂರ್ವಜರ ಊರಾದ ಪಾಳ್ಯಕ್ಕೆ ಹತ್ತಿರದವರು; ಹೊನ್ನಾಳಿ ...ಕಿನವರು. ಪಾಳ್ಯ ಮತ್ತು ನಂದಿತೆವರು ಹರಿಹರ ತಾಲ್ಲೂಕಿನಲ್ಲಿವೆ. ಚಿತ್ರದುರ್ಗ, ಧಾರವಾಡ ಜಿಲ್ಲೆಗಳನ್ನು ...ರಿಗೆ ಇದನ್ನೆಲ್ಲ ವಿವರಿಸಬೇಕಿಲ್ಲ. ಈ ಸೀರಿಯಲ್ ಕೂಡ ಸಾಮಾನ್ಯವಾಗಿದೆ. ಆದರೆ ಈ ವಸ್ತು ಇವತ್ತಿನ ನಮ್ಮ ... ಬೇಕೆನ್ನಿಸುತ್ತದೆ.

...ಸ್ವಾತಂತ್ರ್ಯ ಸಂಗ್ರಾಮ ಈಗಿನ ಮಹಾ ಲೌಕಿಕರಾದ ಜನಕ್ಕೆ ... ದೂರದ ಘಟನೆ; ಅವರು ಕಿವಿ ಮೇಲೆ ...ಕೊಳ್ಳಲಾಗದ ಕತೆ. ಆದರೆ ಈ ಹೃದಯಸ್ಪರ್ಶಿ ಕತೆಗಳನ್ನು ...ವರ್ಷದ ಹಿಂದೆ ಕೆ.ಎಫ್. ಪಾಟೀಲರ 'ನೆನಪಿನ ಒರತೆ' ...ಪುಸ್ತಕದಲ್ಲಿ ಓದಿದ್ದೆ. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ...ವಹಿಸಿದವರು ಈ ಪಾಟೀಲ. ಗಾಂಧೀಜಿಯ ...ತ್ರಿಕತೆಯಿಂದ ಬದಲಾದವರು, ಅನೇಕರ ಸಾವುನೋವು ...ಸ್ನು ಕಣ್ಣಾರೆ ಕಂಡವರು. ಇವತ್ತು ಅಧಿಕಾರಕ್ಕೆ ಬರುವವರು, ...ಜನಿಕ ಸೇವೆ ಮಾಡಲೆಳಸುವವರು ಇದನ್ನು ಓದಬೇಕು. ...ತ್ರ್ಯ ಅಂದರೇನೆಂದು ಅರಿಯಬೇಕು. ಇಲ್ಲದಿದ್ದರೆ ಇಲ್ಲಿ ...ಸುಖ, ಸ್ವಾರ್ಥ ಮುಖ್ಯವಾಗುತ್ತಲೇ ಹೋಗಿ ನಾವು ...ತ್ರ್ಯ ಕಳೆದುಕೊಳ್ಳುತ್ತೇವೆ.



...ನೇಕ ಕತೆಗಳಲ್ಲಿ ಒಂದಾದ ಒಂದು ಪುಟ್ಟ ಕತೆ ಕೇಳಿ. ರಾಣೆಬೆನ್ನೂರು ತಾಲ್ಲೂಕಿನ ಮೆಣಸಿನಹಾಳ ಎಂಬ ...ಗ್ರಾಮದ ಜೊತೆಗೆ ತುಮ್ಮಿನಕಟ್ಟೆ ಗ್ರಾಮ ಕೂಡ ಬರುತ್ತದೆ. ಇದು ...ದವಸು ತಿಮ್ಮನಗೌಡ. ಈ ಮೆಣಸಿನಹಾಳ ಗ್ರಾಮದ ಜೊತೆಗೆ ತುಮ್ಮಿನಕಟ್ಟೆ ... ಈ ಊರಿನ ಹನುಮನಗೌಡರ ಕಿರಿಯ ಮಗ. ...ಸಹಾಳಕ್ಕೆ ಒಂದು ಕಿಲೋಮೀಟರ್ ದೂರದಲ್ಲಿದೆ. ತಿಮ್ಮನಗೌಡ ಈ ಊರಿನ ಹನುಮನಗೌಡರ ಕಿರಿಯ ಮಗ. ...ಮ್ಮ ಎಂಬ ಶ್ರೀಮಂತ ದಂಪತಿಗಳು ದತ್ತುಪುತ್ರನನ್ನಾಗಿ ...ಸ್ನು ಮುಂದೆ ದೊಡ್ಡ ಆಸ್ತಿಯ ಹಾಲನಗೌಡ, ಹಾಲಮ್ಮ ಎಂಬ ಶ್ರೀಮಂತ ದಂಪತಿಗಳು ದತ್ತುಪುತ್ರನನ್ನಾಗಿ ...ಕೊಂಡರು. ಕನ್ನಡ ಏಳನೆ ತರಗತಿಯವರೆಗೆ ಮಾತ್ರ ಓದಿದ ತಿಮ್ಮನಗೌಡ ಸರಳ ಹೃದಯದ, ತನ್ನ ಸುತ್ತ ...ದುಃಖಗಳನ್ನು ಬಡುಗಣ್ಣಿನಿಂದ ನೋಡುತ್ತಿದ್ದ ತರುಣ. 1932 ರ ಹೊತ್ತಿಗೆ ಗಾಂಧೀಜಿಯವರ ಮುಂದಾಳತ್ವದಲ್ಲಿ ತಿಮ್ಮನಗೌಡ ... ಅವನ ಗೆಳೆಯರು ಸಾಗುತ್ತಿದ್ದರೂ ಅವರು ಗಾಂಧೀಜಿಯನ್ನು ಖುದ್ದು ನೋಡಿರಲಿಲ್ಲ, ಗಾಂಧೀಜಿಯವರ ಕಟ್ಟಾ ...ಯಾಗಿದ್ದ ಇವರಿಗೆ ಅವರ ಸಿದ್ಧಾಂತ ತಿಳಿಯುವುದು ಕಷ್ಟವಾಗುತ್ತಿತ್ತು, ಬ್ರಿಟಿಷ್ ದಬ್ಬಾಳಿಕೆಯಿಂದ ಹಿಂಸೆ, ಅವಮಾನ ...ಅನುಭವಿಸುತ್ತಿದ್ದ ಜನರ ಕಷ್ಟಗಳನ್ನು ಕಂಡಿದ್ದ ತಿಮ್ಮನಗೌಡನಂಥವರಿಗೆ ಬಾಪೂ ಅವರ ಅಹಿಂಸೆ ವಿಚಿತ್ರವಾಗಿ ಕಾಣುತ್ತಿತ್ತು,

ಅಹಿಂಸಾತ್ಮಕವಾಗಿಯೇ ಸತ್ಯಾಗ್ರಹ ನಡೆಸಲು ಆರಂಭಿಸಿದ ಈ ದಿಟ್ಟರು ಕ್ರಮೇಣ ತಲೆರೋಸಿಹೋದರು. ತಿಮ್ಮನಗೌಡ ಆರಂಭದಲ್ಲಿ ತನ್ನ ಪ್ರದೇಶದ ಅಂಗಡಿ ಹೇಮಣ್ಣನ ಅನುಯಾಯಿಯಾಗಿದ್ದ. ಅವರಿಬ್ಬರೂ ನಡೆಸಿದ ಸತ್ಯಾಗ್ರಹದಲ್ಲಿ ಬಂಧಿತನಾಗಿ ಎರಡು ವರ್ಷ ಕಠಿಣ ಸಜ ಅನುಭವಿಸಿದ. ಆಮೇಲೆ ತಿಮ್ಮನಗೌಡ ಭೂಗತನಾಗಿ ಹೋರಾಡುವುದು ಅನಿವಾರ್ಯವಾಯಿತು. ಆತನನ್ನು ಹಿಡಿಯಲು ಬ್ರಿಟಿಷರು ವ್ಯೂಹ ರಚಿಸತೊಡಗಿದರು; ಪೋಲಿಸ್, ಸೈನ್ಯ ಎಲ್ಲವನ್ನೂ ಬಳಸಿದರು. ತಿಮ್ಮನಗೌಡನ ತಲೆಯನ್ನು ಕತ್ತರಿಸಿ ತಂದವರಿಗೆ ಒಂದು ಸಾವಿರ ರೂ. ಬಹುಮಾನ ಘೋಷಿಸಿದರು. ತಿಮ್ಮನಗೌಡನ ಜಮೀನು, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡರು. ತಿಮ್ಮನಗೌಡ ಊರಿಗೆ ಬಂದು ಬೆಳೆದಿದ್ದ ಪೈರನ್ನು ಕೊಯ್ದುಕೊಳ್ಳಲು ಬಡವರಿಗೆ ಹೇಳಿದ; ಅವರು ತನಗೆ ಕೊಡಬೇಕಾಗಿದ್ದ ಸಾಲವನ್ನೆಲ್ಲ ಮನ್ನಾ ಮಾಡಿ ಕಾಗದಪತ್ರಗಳನ್ನು ಹರಿದುಹಾಕಿದ. ಸರ್ಕಾರದ ಕಚೇರಿಗಳು, ರೈಲ್ವೆ ಸ್ಟೇಷನ್, ಟ್ರೆಶರಿಗಳ ಮೇಲೆಲ್ಲ ದಾಳಿ ಶುರುವಾಯಿತು. ಕೊನೆಗೆ 1943 ರಲ್ಲಿ ಕುಪ್ಪೆಲೂರು ಟ್ರೆಶರಿಯ ಮೇಲೆ ದಾಳಿ ನಡೆಸಲು ಹೋಗಿ ಕೈಯಲ್ಲಿದ್ದ ಬಾಂಬ್ ಸಿಡಿದು ಮಾರಕವಾಗಿ ಗಾಯಗೊಂಡ. ಆತ ತನ್ನ ಊರಲ್ಲೇ ಸಾಯುವ ಆಶೆ ವ್ಯಕ್ತಪಡಿಸಿದ್ದರಿಂದ ಅವನನ್ನು ಮೆಣಸಿನಹಾಳಕ್ಕೆ ಹೊತ್ತು ತರಲಾಯಿತು. ಅಲ್ಲಿ ಆತ ತೀರಿಕೊಂಡ.




ಮರೆಯುವ ಮುನ್ನ
► ಪಿ. ಲಂಕೇಶ್

ಪ್ರಾಣ ಒತ್ತೆ ಇಟ್ಟು, ಆಸ್ತಿ ತ್ಯಾಗ ಮಾಡಿ ಹೋರಾಡಿದ ಈ ತಿಮ್ಮನಗೌಡನಂಥವರು ನೂರಾರು ಜನ. ಇಡೀ ಭಾರತಕ್ಕೆ ಸ್ವಾಭಿಮಾನ, ಹೊಸ ಜೀವ ಮೂಡಿತ್ತು. ತಾಯಿಯರು ಮಕ್ಕಳನ್ನು ಕಳೆದುಕೊಂಡರು; ಯುವಕರು ತಮ್ಮ ಮನೆ, ನೆಲ, ಪ್ರಾಣ ಎಲ್ಲವನ್ನು ಕಳೆದುಕೊಂಡರು. ಸ್ವಾತಂತ್ರ್ಯವಿಲ್ಲದ ಸೌಖ್ಯ, ಸ್ವಾಭಿಮಾನ ಸಾಧ್ಯವಿಲ್ಲವೆಂದು ಎಲ್ಲರೂ ತಿಳಿದರು. ಇದು ಈ ಸಿನಿಮಾದ ವಸ್ತು.

ಇವತ್ತಿಗೂ ಇದು ಭಾರತದ, ನಮ್ಮ ಗ್ರಾಮಗಳ ರೋಮಾಂಚಕ ಅಧ್ಯಾಯ. ಇದೆಲ್ಲ ನಿಜಕ್ಕೂ ವ್ಯರ್ಥ ಅನ್ನಿಸದಿರಬೇಕಾದರೆ ಇಂದು ಜನಸಾಮಾನ್ಯ ಮತ್ತು ಜನನಾಯಕರು ಗಾಢವಾಗಿ ಚಿಂತಿಸಬೇಕಾಗಿದೆ. ಸ್ವಾತಂತ್ರ್ಯ ಎನ್ನುವುದು ಎಷ್ಟು ಮುಖ್ಯವಾದದ್ದು ಮತ್ತು ಹುಂಬರ ಬಳಿ ಇರಲಾರದಷ್ಟು ಕೋಮಲವಾದದ್ದು ಎನ್ನುವುದು ಆಗ ತಿಳಿಯುತ್ತದೆ. ಅದು ತಿಮ್ಮನಗೌಡರಂಥವರಿಗೆ ನಿಜಕ್ಕೂ ನಮ್ಮ ನಾವು ಕಳೆದುಕೊಂಡ ಕನಸುಗಳು ಆಗ ಮರುಕಳಿಸತೊಡಗುತ್ತವೆ. ಅದು ತಿಮ್ಮನಗೌಡರಂಥವರಿಗೆ ನಿಜಕ್ಕೂ ನಮ್ಮ ಕಣ್ಣೀರ ಕಾಣಿಕೆ.

–ಜನವರಿ 8, 1997

ಏನೋ ಗೊತ್ತಿಲ್ಲ ಸಾ



ಎಚ್.ಎಲ್. ಕೇಶವಮೂರ್ತಿ

ಅಣಕ

'ಆವಳು ಮನುಷ್ಯಳಲ್ಲ ಬುಡಿ ಸಾ' ಅಂದ ಕ್ಯಾತ.

'ಯಾರೋ' ಕೇಳಿದೆ.

ಪ್ರಶ್ನೆಗೆ ಉತ್ತರಿಸುವ ಜಾಯಮಾನ ಅವನದಲ್ಲ.

'ಅದೆಷ್ಟೋ ವರ್ಷದಿಂದ ಉಂಡೇ ಇಲ್ವಂತೆ ಸಾ' ಎಂದು ಆಶ್ಚರ್ಯ ವ್ಯಕ್ತಪಡಿಸಿದ.

'ಸನ್ಯಾಸಿನಿಯೆ' ಅಂದೆ.

'ಹೂಂ ಸಾ' ಅಂದ.

ನನಗೆ ಇದರಲ್ಲಿ ವಿಪರೀತ ಅನ್ನುವುದು ಏನೂ ಕಾಣಿಸಲಿಲ್ಲ. ಸನ್ಯಾಸಿಗಳೇ ಹೀಗೆ. ರಾತ್ರಿ ಊಟ ನಿಷಿದ್ಧ ಎನ್ನುತ್ತಾರೆ. ಹಾಲು ಹೊಟ್ಟೆಯಲ್ಲೇ ಮಲಗಿರುತ್ತಾರಾ ಎಂದರೆ ಛೇ ಹಾಗಲ್ಲ, ಒಣಗಿದ ಹಣ್ಣು ಹಂಪಲು ಮಾತ್ರ ಸೇವಿಸುತ್ತಾರೆ, ಅದೂ ಭಕ್ತರು ನೀಡಿದ್ದು ಅಂತ, ಅವರ ಮೇಲಿನ ಪ್ರೀತಿಗೆ! ಅದರ ಮೇಲೆ ಒಂದೆರಡು ಲೋಟ ಹಾಲು ಅಷ್ಟೆ, ಅದೂ ಭಕ್ತರು ತಂದು ಕೊಟ್ಟಿದ್ದೂ ಅಂತ! ಅದಕ್ಕೇ ಕಾಯಿಲೆ ಕಸಾಲೆ ಅವರ ಹತ್ತಿರಾನೂ ಸುಳಿಯೋಲ್ಲ. ಜಿಗುಟಿದರೆ ರಕ್ತ ಒಸರುವಂತೆ ಇರುತ್ತಾರೆ. ಅದನ್ನೇ ಅವನಿಗೆ ತಿಳಿಸಿದೆ.

'ಇದು ಅಂತ ಕೇಸಲ್ಲ ಸಾ... ಅದೆಷ್ಟೋ ವರ್ಷದಿಂದ ಏನೂ ತಿಂದೇ ಇಲ್ವಂತೆ. ನೀರು ಮುಟ್ಟೇ ಇಲ್ವಂತೆ.'

ಹಳೆಯ ಘಟನೆ ನೆನಪಾಯಿತು.

ಕಳೆದ ಅರವತ್ತನೆ ದಶಕದಲ್ಲಿ ಇರಬೇಕು. ಇಂತಹದ್ದೇ ಸುದ್ದಿ ಹರಡಿತ್ತು.

ಓರ್ವ ಹೆಣ್ಣುಮಗಳು. ಎಂಟುಹತ್ತು ವರ್ಷ ವಯಸ್ಸು ಇರಬಹುದು.

ಏನನ್ನೂ ತಿನ್ನುವುದಿಲ್ಲ. ಏನನ್ನೂ ಕುಡಿಯುವುದಿಲ್ಲ.

ಆರೋಗ್ಯ ಮಾತ್ರ ಸುಸ್ಥಿರವಾಗಿತ್ತು!

ಒಂದ ಎರಡ ಸಲೀಸಾಗಿ ಆಗುತ್ತಿತ್ತು!

ಇದೇನು ಸಾಮಾನ್ಯ ಸಂಗತಿಯೇ?

ಪವಾಡ ನಡೆದಿತ್ತು, ಬಾಲೆ ದೇವತೆಯೇ ಆದಳು!

ದೇವತೆಯ ದರ್ಶನ ಪಡೆಯಲು ಭಕ್ತರ ಪರದಾಟ, ನೂಕುನುಗ್ಗಲು, ಕಾಣಿಕೆಯ ಪೂರವೇ ಹರಿಯಿತು.

'ವಿಜ್ಞಾನ ವಿಸ್ಮಯ' ಅಂದರು ಡಿಗ್ರಿವಂತರು. ದೇವರ ಮಹಿಮೆಯನ್ನು ಕೊಂಡಾಡಿದರು.

'ಪರೀಕ್ಷಿಸಿ ನೋಡಬೇಕು' ಎಂದರು ಕೆಲವು ಹುಚ್ಚರು.

'ದೇವತೆಯನ್ನು ಪರೀಕ್ಷಿಸುವುದೇ!?' ಸಿಡಿದೆದ್ದಿತು ಭಕ್ತವೃಂದ.

ವಿರೋಧದ ನಡುವೆಯೇ ಕರೆತಂದರು ಹುಚ್ಚರು.

'ನಡೆಯಲಿ ಪರೀಕ್ಷೆ. ಭಗವಂತನ ಮಹಿಮೆ ತಿಳಿಯಲಿ ಜಗಕೆ' ಎಂದಿತು ಆಸ್ತಿಕ ವೃಂದ.

ವಿಕ್ಟೋರಿಯಾ ಆಸ್ಪತ್ರೆ ಸೇರಿತು ದೇವತೆ.

ಒಂದು ದಿನ ಕಳೆಯಿತು. ಎರಡು ದಿನ ಆಯಿತು.

ಬದಲಾವಣೆ ಇಲ್ಲ!

ದೇವರ ಮಹಿಮೆಗೆ ತಲೆದೂಗಿತು ಭಕ್ತಸಮೂಹ.

ಒಂದೇ ವ್ಯಥೆ. ರೋಗಿಗಳ ಕೊಠಡಿಯಲ್ಲಿ ದೇವತೆಯ ಪೂಜೆಗೆ ಅವಕಾಶ ಇಲ್ಲ! ಇನ್ನೊಂದೆರಡು ದಿವಸ ಕಾಯಬೇಕಾಗಬಹುದು. ನಂತರ ದೇವತೆಯ ಪೂಜೆ ನಿರ್ವಿಘ್ನವಾಗಿ ನೆರವೇರಿಸಬಹುದು ಎಂಬ ಸಮಾಧಾನ ತಂದುಕೊಂಡರು.

ಪರೀಕ್ಷಕರಿಗೆ ತಲೆನೋವಾಯಿತು.

ದೇವತೆಯನ್ನು ಪ್ರತ್ಯೇಕ ಕೊಠಡಿಯಲ್ಲಿಡಲು ಏರ್ಪಾಡು ಮಾಡಿದರು. ಇತರೆ ರೋಗಿಗಳ ನಡುವೆ ದೇವತೆ ಇರುವುದು ತರವಲ್ಲ ಎಂದಲ್ಲ, ಕಟ್ಟುನಿಟ್ಟಿನ ಕಣ್ಗಾವಲಿಗಾಗಿ!

ಒಂದು ದಿನ ಕಳೆಯುವಷ್ಟರಲ್ಲಿ ದೇವತೆ ಸೊರಗಿದಳು!

ಏನಾಗಿತ್ತು ಅಂದರೆ ಜನರ ಕಣ್ತಪ್ಪಿಸಿ ರಾತ್ರಿ ವೇಳೆ ಸೇವಿಸುತ್ತಿದ್ದ ಆಹಾರ ಬಂದ್ ಆಗಿತ್ತು!

ಈ ಘಟನೆಯನ್ನು ಕ್ಯಾತನಿಗೆ ವಿವರಿಸಿದೆ.

'ಒಂದಾ ಎರಡ ಆಯ್ತದಂತಾ' ಅಂದೆ.

'ಅದೂ ಇಲ್ವಂತೆ ಸಾ' ಅಂದ.

ಹಿಂದಿನ ಕಾಲದಲ್ಲಿ ಋಷಿಗಳು ತಪಸ್ಸಿಗೆ ಕೂಡುತ್ತಿದ್ದರಂತೆ. ಆಗ ಕೇವಲ ವಾಯು ಸೇವನೆಯಿಂದಲೇ ಬದುಕಿದ್ದರಂತೆ. ಅಂತಹ ವ್ಯಕ್ತಿ ಇದೂ ಆಗಿರಬಹುದಾ ಅನ್ನುವ ಸಂಶಯ ಸುಳಿಯಿತು.

ಹುಲುಮಾನವರು ಬಹಿರ್ದೆಸೆಗೆ ಹೋಗಲಾಗುತ್ತಿಲ್ಲ ಎಂದರೆ ಅದು ರೋಗ ಲಕ್ಷಣ. ಇವರಿಗೆ ಅದೇ ಒಂದು ಪವಾಡ! ಹೀಗೆ ಹೇಳುವ ಕಳ್ಳ ಸನ್ಯಾಸಿಗಳ ಕತೆ ಕೇಳಿದ್ದೆ. ಸ್ನಾನ ಮಾಡುವ ನೆಪದಲ್ಲಿ ಅಂತಹವರು ನೀರಿಗೆ ಇಳಿದು ಅಲ್ಲೇ ಎಲ್ಲವನ್ನೂ ಸಾಂಗವಾಗಿ ಪೂರೈಸಿಕೊಳ್ಳುತ್ತಿದ್ದುದು ಜನರಿಗೆ ಗೊತ್ತಾಗಿ ಗೂಸಾ ತಿಂದಿದ್ದರಂತೆ. ಇನ್ನು ಕೆಲವರು ಭಕ್ತರ ಮನೆಯಲ್ಲಿ ತಾವು ತಂಗಲು ಅನುಕೂಲಿಸಿದ್ದ ಪ್ರತ್ಯೇಕ ಕೊಠಡಿಯಲ್ಲಿದ್ದ ಅಲ್ಮೇರಾಗಳನ್ನೇ ಇದಕ್ಕಾಗಿ ಬಳಸುತ್ತಿದ್ದರಂತೆ. ತಮ್ಮ ಬಂಡವಾಳ ಬಯಲಾಗುವುದಕ್ಕೆ ಮುನ್ನವೇ ಅಲ್ಲಿಂದ ಕಾಲ್ತೆಗೆಯುತ್ತಿದ್ದರಂತೆ. ಈ ಮಾತೆಯ ಕೊಠಡಿಯನ್ನು ಪರೀಕ್ಷಿಸಿದರೆ ಒಳ್ಳೆಯದು ಎಂದುಕೊಂಡೆ.

'ಆಕೆ ಆಶ್ರಮ ಎಲ್ಲಿದೆ?' ಕೇಳಿದೆ.

'ಆಶ್ರಮ ಅಲ್ಲ ಸಾ ಗುಹೆ ಅಂತೆ. ಇನ್ನೊಂದು ಗೊತ್ತಾ ಸಾ.'

'ಏನು?'

'ಮಾತನಾಡೋ ದೇವರು ಅಂತಾರಂತೆ ಸಾ ಅವರ್ನ.'

ಅಂತಹವುಗಳಿಗೆ ಈ ದೇಶದಲ್ಲಿ ಕೊರತೆ ಇಲ್ಲ. ಮಾತನಾಡದೆ ಇದ್ದರೆ 'ಮೂಕ ಮಾತಾ', 'ಮೌನಿ ಮಾತಾ' ಅಂತಾರೆ!

'ಏನು ಅದರ ಹೆಸರು?'

'ಮಾತೆ ಮಣಿಕೇಶ್ವರಿ ಅಂತಾರಂತೆ ಸಾ.'

'ಇದೆಲ್ಲ ಹೆಂಗೆ ತಿಳೀತು?'

'ಯಡ್ಯೂರಪ್ನೋರು ಹೋಗಿದ್ರಂತೆ ಸಾ. ಮಾಧ್ಯಮಗಳ ಪ್ರಚಾರ ಕೊಟ್ಟವೆ.'

ಒಳ್ಳೆ ವ್ಯವಹಾರ ಕುಶಲಿಗಳು ಇರಬೇಕು!

ಇರಲಿ, ಯಡ್ಯೂರಪ್ಪನವರು ಅಲ್ಲಿಗೆ ಯಾಕಪ್ಪ ಹೋದರು ಅಂದರೆ ಅಧಿಕಾರದ ಅಮಲೇ ಅಂತಹದ್ದು. ಒಂದು ಸ ರುಚಿಕಂಡ ಮೇಲೆ ಮತ್ತೆ ಮತ್ತೆ ಬೇಕು ಅನ್ನಿಸುತ್ತೆ. 'ಅವರ ಹೇಳಿದ್ದು ನಿಜ ಆಗುತ್ತೆ', 'ಇವರು ಹೇಳಿದ್ದು ಸತ್ಯವಾಗು ಅನ್ನೋದು ಕೆಳಗೆ ಬಿದ್ದಾಗ ಅವರನ್ನು ಕಾಣಬೇಕು ಅಂ ಮನಸ್ಸು ಕಾಡುತ್ತದೆ. ಹಾಗೇ ಅಲ್ಲಿಗೂ ಹೋಗಿರಬೇಕು

'ಅಲ್ಲಿ ಏನು ನಡೀತಂತೆ?'

'ಆ ಮಾತೆ ನಾಲ್ಕು ಗಂಟೆ ಕಾಯಿಸ್ತಂತೆ ಸಾ. ಆಮೇ ದರ್ಶನ ನೀಡ್ತಂತೆ.'

ಒಂದು ಗುಡ್ಡಕ್ಕಿಂತ ಇನ್ನೊಂದು ಗುಡ್ಡ ಎತ್ತರ ಇರ್ತ ಮುಖ್ಯಮಂತ್ರಿ ಸದಾನಂದಗೌಡರನ್ನ ಗಂಟೆಗಟ್ಟಲೆ ಕಾಯಿಸಿದ್ರು ಯಡ್ಯೂರಪ್ನೋರು. ಈಗ ಈ ಮಾ ಕಾಯ್ಸದೆ. ಕಾಯುವ ಕಷ್ಟದ ಅರಿವು ಈಗಲಾದರ ಅವರಿಗೆ ಆಗಿರಬೇಕು!

'ಮಾತುಕತೆ ಗುಟ್ಟಾಗಿ ನಡೆದಿರಬೇಕಲ್ಲ.'

'ಇಲ್ಲವಂತೆ ಸಾ. ಮಾತೆ ಹತ್ತಿರಕ್ಕೂ ಸೇರಿಸಲಿಲ್ಲವಂತೆ ಹತ್ತಾರು ಮಾರು ದೂರಾನೆ ನಿಲ್ಲಿಸಿತ್ತಂತೆ.'

'ಮಾತೆಂಗೆ ಕೇಳುಸ್ತು? ಜನ ಇರಲಿಲ್ಲವಾ?'

'ಸಾವಿರಾರು ಜನ ಇದ್ರಂತೆ ಸಾ. ಮೈಕಲಿ ಇಬ್ಬರೂ ಮಾತಾಡಿದ್ರಂತೆ.'

'ಏನು ಮಾತಾಡಿದರಂತೆ?'

'ನಾನು ಮಾಜಿ ಮುಖ್ಯಮಂತ್ರಿ ಯಡ್ಯೂರಪ್ಪ ಬಂದಿದ್ದೀನ ಅಂದ್ರಂತೆ ಸಾ.'

'ಹಂಗಾರೆ ಹಿಂದಿನ ಕಾಲ್ದಲ್ಲಿ ಹೊಲೇರು ಬೀದಿ

ಇದೇನಾ ಬಿಜೆಪಿಯ ಸಂಸ್ಕೃತಿ... ಇದೇನಾ ಅವರ ಸಭ್ಯತೆ..?

ಸಂಸ್ಕೃತಿಯ ವಕ್ತಾರರಂತೆ ಪೋಸು ನೀಡುತ್ತಾ ರಾಜ್ಯದ ಗದ್ದುಗೆಗೆ ಏರಿರುವ ಬಿ.ಜೆ.ಪಿಯು ರೇಣುಕಾಚಾರ್ಯ ಕಿಸ್ ಪ್ರಕರಣ, ಪದ್ಮಪ್ರಿಯಾ ಆತ್ಮಹತ್ಯೆ (?) ಪ್ರಕರಣದಿಂದ ಹಿಡಿದು ಮೊನ್ನೆ ಸದನದಲ್ಲಿ ನಡೆದ ಬ್ಲೂಫಿಲಂ ವೀಕ್ಷಣೆಯಂತಹ ಪ್ರಕರಣದವರೆಗೆ ತಮ್ಮ ಸಂಸ್ಕೃತಿಯ ವಿರಾಟ್ ದರ್ಶನವನ್ನು ರಾಜ್ಯದ ಜನತೆಗೆ ತೋರಿಸುತ್ತಾ ಬಂದಿದೆ.

ಪ್ರಜಾಪ್ರಭುತ್ವ ರಾಷ್ಟ್ರದ ಅತ್ಯುನ್ನತ ಸ್ಥಾನದಲ್ಲಿರುವ ಸದನದಲ್ಲಿ ಬ್ಲೂಫಿಲಂ ವೀಕ್ಷಣೆಯಂತಹ ಅಸಹ್ಯ ಸಂಸ್ಕೃತಿಗೆ ನಾಂದಿ ಹಾಡಿದ ಕೀರ್ತಿ (ಅ)ಶಿಸ್ತಿನ ಪಕ್ಷವಾದ ಬಿ.ಜೆ.ಪಿ ನೇತೃತ್ವದ ರಾಜ್ಯ ಸರಕಾರಕ್ಕೆ ಸಲ್ಲುತ್ತದೆ. ರೇಣುಕಾಚಾರ್ಯ ಕಿಸ್ ಪುರಾಣ, ಶಾಸಕ ರಘುಪತಿ ಭಟ್ ಪತ್ನಿ ಪದ್ಮಪ್ರಿಯಾ ಸಾವು, ಹಾಲಪ್ಪನ ರೇಪ್ ಕಾಂಡ, ಯಡ್ಡಿ-ರೆಡ್ಡಿಯಾದಿಗಳ ಭೂ-ಅದಿರು ಹಗರಣ, ಸೈಂಟ್ ಮೇರೀಸ್ ದ್ವೀಪದಲ್ಲಾದ ನಂಗಾನಾಚ್— ಹೀಗೆ ಸಂಸ್ಕೃತಿಯ ಹರಿಕಾರರ ಸಾಧನೆಯ ಪಟ್ಟಿ ಬೆಳೆಯುತ್ತಾ ಹೋಗುತ್ತದೆ! ಮಾತೆತ್ತಿದರೆ ಸಂಸ್ಕೃತಿ, ದೇಶ ಪ್ರೇಮಗಳ ಮಾತನ್ನೇ ಉದುರಿಸುವ ಇವರು ಇತರರ ತಪ್ಪು(?)ಗಳನ್ನು ತಿದ್ದಲು ಹೊರಟಿದ್ದಾರೆ. ಮೂರು ಬಿಟ್ಟವರು ಊರಿಗೆ ಅರಸರು ಎಂಬಂತೆ, ತಾವು ರಾಜ್ಯದ ಆರು ಕೋಟಿ ಜನರ ಮುಂದೆ ಬೆತ್ತಲೆಯಾಗಿದ್ದರೂ ಇತರರ ಮಾನ ಮುಚ್ಚಲು ಹೊರಟಿದ್ದಾರೆ.



ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಮನೆಹಾಳು ಬಿ.ಜೆ.ಪಿ ಸರ್ಕಾರ ತಾವು ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆಯಿಂದಲೇ ಎಲ್ಲಾ ಅನೈತಿಕತೆ, ಅನಾಚಾರಗಳನ್ನು ಗುಡ್ಡೆ ಹಾಕುತ್ತಾ ಬಂದಿದೆ. ಪ್ರಜಾಪ್ರಭುತ್ವದ ದೇಗುಲವೆಂದೇ ಪರಿಗಣಿಸಲ್ಪಡುವ ಸದನದ ಒಳಗೆ ಅದೂ ರಾಜ್ಯದ ಅಭಿವೃದ್ಧಿಯ ಕುರಿತು ಗಂಭೀರ ಚರ್ಚೆ ನಡೆಯುವಾಗ ಸಹಕಾರಿ ಸಚಿವ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಜೊತೆಗೂಡಿ ಬ್ಲೂಫಿಲಂ ವೀಕ್ಷಿಸಬೇಕಾದರೆ ನಮ್ಮನ್ನಾಳುವವರ ಯೋಗ್ಯತೆಯನ್ನು ಅಳೆಯಲು ಬೇರೆ ಮಾನದಂಡಗಳು ಬೇಕೇ? ಈ ಸಚಿವದ್ವಯರ ಕಾಮ ವಾಂಛೆಯ ಕುರಿತು ಎಳ್ಳಷ್ಟೂ ನಾಚಿಕೆಯಿಲ್ಲದೆ ಪತ್ರಿಕಾಗೋಷ್ಠಿಯಲ್ಲಿ "ನಾನೇನೂ ಅಂತಹ ದೊಡ್ಡ ತಪ್ಪು ಮಾಡಿಲ್ಲ, ಕೊಲೆ ಅಥವಾ ಅತ್ಯಾಚಾರ ಮಾಡಿಲ್ಲ" ಎಂದು ಉಡಾಫೆಯಿಂದ ಹೇಳುತ್ತಾರೆಂದರೆ ಇವರು ನಿಜವಾಗಲೂ ನೀತಿಗೆಟ್ಟವರು.

ಸದನದಲ್ಲಿ ಬ್ಲೂಫಿಲಂ ವೀಕ್ಷಣೆ ಮಾಡಿದ ಮೂವರು ಸಚಿವರ ಕೇವಲ ರಾಜೀನಾಮೆ ಪಡೆದರೆ ಸಾಲದು. ಬದಲಾಗಿ ಸೈಬರ್ ಕ್ರೈಂ, ಅನೈತಿಕತೆಗೆ ಪ್ರಚೋದನೆ ಹಾಗೂ ಸದನದ ಗೌರವಕ್ಕೆ ಚ್ಯುತಿ ತಂದಿರುವ ಕುರಿತು ಪ್ರಕರಣಗಳನ್ನು ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ.

- ನವಾಜ್ ಅಹ್ಮದ್, ಮಂಗಳೂರು

ಯುವಕನೊಬ್ಬ ಡ್ರಗ್ ಬಳಸಿ ಸಿಕ್ಕಿಹಾಕಿಕೊಂಡರೆ ಪೊಲೀಸರು ಆತನನ್ನು ಮಾತ್ರ ಬಂಧಿಸುವುದಿಲ್ಲ, ಬದಲಾಗಿ ಆತನಿಗೆ ಡ್ರಗ್ಸ್ ಅನ್ನು ನೀಡಿದ ಅಕ್ರಮ ಮಾರಾಟಗಾರನನ್ನೂ ಬಂಧಿಸುತ್ತಾರೆ. ಅದೇ ರೀತಿ ಈಗ ಸದನದಲ್ಲಿ ಸೆಕ್ಸ್ ಫ್ಲಿಂ ನೋಡಿ ಸಿಕ್ಕಿಹಾಕಿಕೊಂಡ ಲಕ್ಷ್ಮಣ್ ಸವದಿ ಮತ್ತು ಸಿ.ಸಿ.ಪಾಟೀಲನಿಗೆ ಅದನ್ನು ನೀಡಿದ ಪಾಲೇಮಾರ್ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕಿದೆ.

- ಪ್ರತೀಶ್ ಕುಮಾರ್, ಮಂಗಳೂರು

ಮುಕ್ಕೋಟಿ ದೇವಾನುದೇವತೆಗಳ ಮೇಲಾಣೆ, ಪರಮಶಕ್ತ ಅಲ್ಲಾಹುವಿನ ಮೇಲಾಣೆ, ಶಾಂತಿದೂತ ಯೇಸುವಿನ ಮೇಲಾಣೆ ನಮ್ಮ ಉಪ್ಪಿನಂಗಡಿಯಲ್ಲಿ ಹಾದರಕ್ಕೆ ಹುಟ್ಟಿದವರಿಲ್ಲ. ಒಂದು ವೇಳೆ ಅಂಥವರು ಇದ್ದಿದ್ದರೆ ನನ್ನೂರಿನಲ್ಲಿ ಎಲ್ಲಾ ಮತದವರೂ ಅನಾದಿ ಕಾಲದಿಂದಲೂ ಒಂದೇ ತಾಯಿಯ ಮಕ್ಕಳ ಹಾಗೆ ಶಾಂತಿಯಿಂದ ಸಹಬಾಳ್ವೆ ನಡೆಸಲು ಸಾಧ್ಯವಿರಲಿಲ್ಲ. ನಮ್ಮ ದೇಶದ ಯಾವುದೇ ಮೂಲೆಯಲ್ಲಿ ಕೋಮುಗಲಭೆ, ದೊಂಬಿ, ಲೂಟಿ, ಅತ್ಯಾಚಾರ ನಡೆದಿರಬಹುದು. ಆದರೆ ನನ್ನ ಉಪ್ಪಿನಂಗಡಿಯಲ್ಲಿ ಅಂಥ ಯಾವ ಘಟನೆಯೂ ನಡೆದಿದ್ದನ್ನು ನಾನು ಕಂಡಿಲ್ಲ, ಕೇಳಿಯೂ ಇಲ್ಲ.


ಅಂಥ ಶಾಂತಿಪ್ರಿಯ ಉಪ್ಪಿನಂಗಡಿಯಲ್ಲಿ ಈ ವರುಷದ ಮೊದಲ ತಿಂಗಳಲ್ಲೇ ಭಯಾನಕ ಕೋಮುಗಲಭೆ ನಡೆಯುವಂಥ ಎಲ್ಲಾ ಸಾಧ್ಯತೆಗಳೂ ಇದ್ದವು. ಆದರೆ ಕೆಲವು ಪ್ರಜ್ಞಾವಂತ ನಾಗರಿಕರಿಂದಾಗಿ ಧಗಧಗನೇ ಉರಿಯಬೇಕಾಗಿದ್ದ ಗಲಭೆ ತಣ್ಣಗಾಯ್ತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಗಲಭೆಗೆ ಹೇತುವಾದವರು ಉಪ್ಪಿನಂಗಡಿ ನಾಗರಿಕರಲ್ಲ! ಅವರುಗಳೆಲ್ಲ ಹೊರಊರಿನಿಂದ ಬಂದ ಹಾದರಕ್ಕೆ ಹುಟ್ಟಿದವರು.

ಕಲ್ಲಡ್ಕ ಪ್ರಭಾಕರ ಭಟ್ ಎಂಬ ಹೆಸರನ್ನು ನನಗೆ ಬುದ್ಧಿ ತಿಳಿದಾಗಿನಿಂದ ಕೇಳುತ್ತಿದ್ದೇನೆ ಮತ್ತು ಆ ಹೆಸರಿನ ವ್ಯಕ್ತಿಯನ್ನು ಗಮನಿಸುತ್ತಾ ಬಂದಿದ್ದೇನೆ. ಅಪ್ಪಟ ಹಿಂದೂವಾದಿಯಾದ ಭಟ್ಟರಿಗಿರುವ ರಾಜಕೀಯ ಚತುರತೆಯನ್ನು ಸರಿಯಾಗಿ ಬಳಸಿದ್ದರೆ ಅವರು ಇವತ್ತು ಕರ್ನಾಟಕ ರಾಜ್ಯದಲ್ಲಿ ಹಿರಿಯ ನಾಯಕರಾಗಿ ಬೆಳೆಯುತ್ತಿದ್ದರು. ಆದರೆ ಪ್ರಭಾಕರ ಭಟ್ಟರು ತಮ್ಮ ಹರೆಯದಲ್ಲಿ ತನ್ನ ಬುದ್ಧಿಯನ್ನೆಲ್ಲ ಬಳಸಿದ್ದು ಹಿಂದುತ್ವವಾದಿ ಚಿಂತನೆಗಳಿಗೆ. ಈಗ ಪ್ರಭಾಕರ್‌ಗೆ ವಯಸ್ಸಾಗಿದೆ. ತನ್ನನ್ನು ಯಾರೂ ಕೇರ್ ಮಾಡುತ್ತಿಲ್ಲವೆಂಬ ಸತ್ಯ ಅವರ ಹತ್ತಿರಕ್ಕೆ ನಿದ್ದೆಯನ್ನೂ ಸುಳಿಯಲು ಬಿಡುತ್ತಿಲ್ಲ. ಹಾಗಾಗಿ ಅವರು ಈಗ ಹೊಸ ಅವತಾರವೆತ್ತಿ ತಮ್ಮ ನಾಲಗೆಯನ್ನು ಚಪ್ಪಲಿ ಮಾಡಿಕೊಂಡಿದ್ದಾರೆ...!

ಇತ್ತೀಚೆಗೆ ಪ್ರಭಾಕರ ಭಟ್ಟರು ಉಪ್ಪಿನಂಗಡಿಯಲ್ಲಿ ನಡೆದ ಹಿಂದೂ ಸಮಾವೇಶದ ವೇದಿಕೆಯಲ್ಲಿ ಅವರು ಕೀಳಾಗಿ ಮಾತಾಡಿದರು ಮತ್ತು ಉಪ್ಪಿನಂಗಡಿಯ ಸಮಾನ ಮನಸ್ಕ ನಾಗರಿಕರ ಮಧ್ಯೆ ವಿಷ ಬೀಜ ಬಿತ್ತುವ ಪ್ರಯತ್ನ ಮಾಡಿದರು. ಪ್ರಭಾಕರ ಭಟ್ಟ ಹೀಗೆ ಮಾಡುತ್ತಾರೆ, ಉಪ್ಪಿನಂಗಡಿಯಲ್ಲಿ ಕೋಮುಗಲಭೆಗೆ ನಾಂದಿ ಹಾಡುತ್ತಾರೆ ಎಂದು ಮೊದಲೇ ಊಹಿಸಿದ್ದ ಇನ್ನೊಂದು ಕೋಮಿನ ಯುವಕರು ಬೇರೆ ಬೇರೆ ಕಡೆಗಳಿಂದ ಅದೇ ದಿನ ಸುಮಾರು ಎರಡು ಸಾವಿರ ಯುವಕರನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಜಮಾವಣೆಗೊಳಿಸಿದ್ದರು. ಪೇಟೆಯಲ್ಲಿ ಮೆರವಣಿಗೆ ನಡೆಯುವಾಗ ಮುಸ್ಲಿಂ ವ್ಯಕ್ತಿಯ ಅಂಗಡಿಗೆ ಕಲ್ಲು ಹಾಕಿದರೆಂಬ ಸುದ್ದಿ ತಲುಪುತ್ತಿದ್ದ ಹಾಗೇ ಆ ಯುವಕರೆಲ್ಲ ಕೈಗಳಲ್ಲಿ ಆಯುಧಗಳನ್ನು ಹೊತ್ತು ಹೊರಟಿದ್ದರು ಮೆರವಣಿಗೆ ನಿರತರ ಮೇಲೆ ಮುಗಿಬೀಳಲು!!

ಒಂದುಕ್ಷಣ ಯೋಚಿಸಿ ನೋಡಿ: ಒಂದು ವೇಳೆ ಅಷ್ಟೂ ಜನ ಎದುರಾಗಿದ್ದರೆ ಮೆರವಣಿಗೆ ನಿರತರ ಸ್ಥಿತಿ ಏನಾಗುತ್ತಿತ್ತು? ನಾವಿವತ್ತು ನಮ್ಮ ಸಹೋದರ ಸಹೋದರಿಯಂಥವರನ್ನು ಕಳಕೊಂಡ ಶೋಕದಲ್ಲಿ ಮುಳುಗಿರಬೇಕಿತ್ತು. ಅಂಥ ಘಟನೆ ನಡೆಯುವುದನ್ನು ತಡೆದ ಒಬ್ಬನೇ ಒಬ್ಬ ವ್ಯಕ್ತಿಯಿದ್ದರೆ ಅದು ಕೆಂಪಿ ಮುಸ್ತಫಾ ಹಾಜಿ. ಎರಡು ಸಾವಿರದಷ್ಟಿದ್ದ ಬಿಸಿ ರಕ್ತದ ಯುವಕರ ಎದುರು ಏಕಾಂಗಿಯಾಗಿ ನಿಂತ ಮುಸ್ತಫಾ ಹಾಜಿ "ಇದು ನಮ್ಮ ಊರು. ನೀವಿವತ್ತು ಗಲಾಟೆ ಮಾಡಿ ಹೋಗಬಹುದು ಗಲಾಟೆಯಲ್ಲಿ ಸಾವುನೋವು ಮತ್ತು ನಷ್ಟ ಅನುಭವಿಸುವುದು ಬೇರೆ ಕೋಮಿನ ನಮ್ಮ ಅಣ್ಣ ತಮ್ಮ ಅಕ್ಕ ತಂಗಿಯಂತವರು. ಪ್ರತಿ ದಿನ ಬೆಳಗ್ಗೆ ಎದ್ದು ಆ ಅಣ್ಣ ತಮ್ಮಂದಿರ ಮುಖ ನೋಡಿ ಬೆಳೆದವನು ನಾನು. ನಾವು ನಮ್ಮ ಊರಿನ ಸಮಸ್ಯೆ ಬಗೆಹರಿಸಿ ಕೇಳಿಕೊಳ್ಳುತ್ತೇವೆ. ದಯವಿಟ್ಟು ನೀವೆಲ್ಲಾ ನಿಮ್ಮ ನಿಮ್ಮ ಊರಿಗೆ ಹಿಂತಿರುಗಿ. ನೀವು ಹಾಗೊಂದು ವೇಳೆ ಗಲಾಟೆ ಮಾಡಲೇ ಬೇಕೂಂತಿದ್ರೆ ಮೊದ್ಲು ನನ್ನನ್ನು ಕೊಂದು ಮುಂದೆ ಹೋಗಿ" ಎಂದ ಮುಸ್ತಫಾ ಹಾಜಿಯ ಮಾತಿಗೆ ಕಟ್ಟುಬಿದ್ದು ಯಾರೂ ಮುಂದುವರಿದಿರಲಿಲ್ಲ. ಇದೆಲ್ಲಾ ಪ್ರಭಾಕರ ಭಟ್ಟರಿಗೆ ಅರ್ಥವಾದೀತೆ?

ಭಟ್ರೇ...... ಈ ಪತ್ರವನ್ನು ನೀವು ಓದುತ್ತಿರಬಹುದಲ್ಲಾ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಿಮಗೆ ಬಿ.ಜೆ.ಪಿ. ಪಕ್ಷದಿಂದ ಟಿಕೆಟ್ ಬೇಕೆಂಬ ಆಸೆಯಿದ್ದರೆ ಪಕ್ಷದ ಸಿದ್ಧಾಂತಕ್ಕೆ ತಕ್ಕ ಹಾಗೆ ಕೆಲಸ ಮಾಡಿ ಟಿಕೆಟ್ ಗಿಟ್ಟಿಸಿಕೊಳ್ಳಿ. ಅದು ಬಿಟ್ಟು ಸಹೋದರರುಗಳಂಥವರ ನಡುವೆ ಕೋಮುಗಲಬೆಯಂಥ ವಿಷ ಬೀಜ ಬಿತ್ತಿ ನಿಮ್ಮ ಬೇಳೆ ಬೇಯಿಸಿಕೊಳ್ಳಬೇಡಿ.





ವಾಗ ಬರುವಾಗ ಸಂಭೋಳಿ, ಸಂಭೋಳಿ ಅಂತ ತ್ತಿದ್ದರಂತೆ. ಅದು ಕೇಳಿಸಿಕೊಂಡೋರು ಹೊಲೆಯ ಅಷ್ಟೆ ಅಂತ ತಿಳಿದು ದೂರ ಹೋಗಿ ಮೈಲಿಗೆ ಗೆ ನೋಡಿಕೊಳ್ಳುತ್ತಿಲ್ಲದ್ದರಂತೆ ಹಂಗೆ ಅನ್ನು.'

ದೇನೋ ಗೊತ್ತಿಲ್ಲ ಸಾ. ನಾನು ಮತ್ತೆ ಮುಖ್ಯಮಂತ್ರಿ ಕು ಅಂತ ಆಶೀರ್ವಾದ ಮಾಡಿ ಅಂದ್ರಂತೆ ಸಾ.'

ಶೀರ್ವಾದ ಸಿಕ್ತಂತ?"

ನು ಕೆಟ್ಟಬುದ್ಧಿ ಬುಡು ಅಂತಂತೆ ಸಾ.'

ದನ್ನೇ ಬುಟ್ಬು ಬುಟ್ಟರೆ ರಾಜಕೀಯ ಹೆಂಗೆ ರಂತೆ?"

ದೇನೋ ಗೊತ್ತಿಲ್ಲ ಸಾ. ಬುದ್ದಿನಿ ಅಂದ್ರಂತೆ ಸಾ. ಕೆ ಪ್ರಾಣಿಹಿಂಸೆ ತಡಿ ಅಂದ್ರಂತೆ ಸಾ. ಅದ್ಕೆ ಗೋಹತ್ಯೆ ಕಾನೂನು ಜಾರಿಗೆ ತಂದೋನೆ ನಾನು ಅಂದ್ರಂತೆ ಲ್ಲಾ ಪ್ರಾಣಿ ಹಿಂಸೆನೂ ನಿಲ್ಸು ಅಂತ ಆಡ್ರು ದ್ರಂತೆ ಸಾ.'

ವರೇನಂದ್ರಂತೆ?"

ನ್ನೇನಂದಾರು ಮಾಡ್ತೀನಿ ಮಾತೆ ಅಂದಿರ್ತಾರೆ!'

ಲ್ಲಾ ಜನವಾರು, ಜನ ಎಲ್ಲ ಪೌಷ್ಟಿಕ ಆಹಾರದ ಯಿಂದ ನರಳುತ್ತಾ ಬಿದ್ದದೆ. ಅಂತಹದ್ದರಲ್ಲಿ ಇಂತಹ ಕೊಟ್ಟವಳಲ್ಲ ಅವಳೆಂತಹ ದೇವತೆ ಅಂತೀನಿ. ಈ ಬಸ್ತೀದು 'ಮಾತನಾಡುವ ದೇವರು' ಆಗುವ 'ಮಾತನಾಡದ ದೇವರು' ಆಗಿದ್ದರೆ ಚೆನ್ನಾಗಿತ್ತು. ಪ್ರದೋ ಮಠದ ಸ್ವಾಮಿ ಮಧ್ಯಾಹ್ನದ ಬಿಸಿ ಊಟದ ಮಕ್ಕಳಿಗೆ ಮೊಟ್ಟೆ ನೀಡಬೇಡಿ ಅಂತ ತಡೆದ. ಅದರ ತಾಯಿತಂದೆಯರನ್ನೂ ರಕ್ಷಿಸಲು ಈಕೆ ಬಿರುವಂತಿದೆ!

ಮೇಲೆ ಏನಾಯಿತಂತೆ?"

ದೇವರ ಮೇಲೆ ಭಾರಹಾಕು. ನೀನು ಮತ್ತೆ ಮಂತ್ರಿ ಆಗ್ತಿಯಾ ಅಂತಂತೆ ಸಾ.'

ದೆಂಗಾಗ್ತಾರಂತೆ?"

ಜನರ ಮನಸ್ಸ ದೇವರೇ ಬದಲಾಯಿಸುತ್ತಾನಂತೆ

ಗ ಪ್ರಶ್ನೆ ಏನು ಅಂದರೆ ಯಡ್ಡಿ ಮತ್ತೆ ಮುಖ್ಯಮಂತ್ರಿ ರೇ? ಖಂಡಿತ ಆಗಿಯೇ ಆಗುತ್ತಾರೆ. ಮಾತೆ ಸುಳ್ಳಾಗುವುದಿಲ್ಲ!

ದರೆ ಒಂದು. ದೇವರು ಜನರ ಮನಸ್ಸನ್ನು ಯಿಸಬೇಕು ಅಷ್ಟೇ! ❖

ಶೃಂಗೇರಿ ಮಠ ವರ್ಸಸ್ ಜೀ ಕನ್ನಡ!

ಆರು ತಿಂಗಳ ಹಿಂದಷ್ಟೇ ಬೇರೆ ಭಾಷೆಯಿಂದ ಡಬ್ ಆದ ಸೀರಿಯಲ್‌ಅನ್ನು ಪ್ರಸಾರ ಮಾಡಿ, ಟಿವಿ ಅಸೋಸಿಯೇಷನ್ನಿನ ಕೆಂಗಣ್ಣಿಗೆ ಗುರಿಯಾಗಿದ್ದ ಜೀ ಕನ್ನಡವಾಹಿನಿ ಈಗ ಇನ್ನೊಂದು ಸೀರಿಯಲ್ ವಿವಾದದಲ್ಲಿ ಸಿಲುಕಿಕೊಂಡಿದೆ!


ರಮೇಶ್ ಇಂದಿರಾ ನಿರ್ದೇಶನದ 'ದೇವಿ' ಸೀರಿಯಲ್ ವಿರುದ್ಧ ಶೃಂಗೇರಿಯ ಮಠದ ಭಕ್ತರು ಕೆಂಡಾಮಂಡಲವಾಗಿದ್ದಾರೆ. ಇದೊಂದು ಭಕ್ತಿಪ್ರಧಾನ ಧಾರಾವಾಹಿಯಾಗಿದ್ದು, ಕಥೆಯಲ್ಲಿ ಶೃಂಗೇರಿಯ ಪೋರ್ಷನ್ ಬರುತ್ತದೆ. ಧಾರಾವಾಹಿಯ ಆ ಭಾಗದಲ್ಲಿ ಶೃಂಗೇರಿ ಮಠದ ಅರ್ಚಕರೊಬ್ಬರು ಡಕಾಯಿತರ ಗುಂಪಿನ ಜೊತೆ ಸೇರಿಕೊಂಡು, ತಮ್ಮ ವೃತ್ತಿಗೆ ಮೋಸ ಮಾಡುತ್ತಾರೆ. ಕಿರೀಟ ಅಪಹರಿಸಿದವರಿಗೆ ರಕ್ಷಣೆ ನೀಡುವಲ್ಲಿ ನೆರವಾಗುತ್ತಾರೆ ಎಂಬಂತೆ ತೋರಿಸಿ ಪ್ರಸಾರ ಮಾಡಲಾಗಿದೆ. ಜೊತೆಗೆ ಶೃಂಗೇರಿ ಮಠದ ಸುತ್ತಮುತ್ತ ಒಂದಷ್ಟು ನಕಲಿ ಭಿಕ್ಷುಕರನ್ನು ಕೂರಿಸಿ ಧಾರಾವಾಹಿಯಲ್ಲಿ ತೋರಿಸಲಾಗಿದೆ. ಅಷ್ಟೇ ಅಲ್ಲದೆ, ಅಲ್ಲಿನ ಕಾಡಿನಲ್ಲಿ ಅಯ್ಯಪ್ಪನ ಭಕ್ತರ ರೂಪದಲ್ಲಿ ದರೋಡೆಕೋರರು ನೆಲೆಸಿರುತ್ತಾರೆ ಎಂಬಂತೆ ಬಿಂಬಿಸಲಾಗಿದೆ.

ಇದೆಲ್ಲ ಶೃಂಗೇರಿಯ ಒಂದಷ್ಟು ಭಕ್ತರನ್ನು ಸಿಕ್ಕಾಪಟ್ಟೆ ಕೆರಳಿಸಿದೆ. "ಅತ್ಯಂತ ಪವಿತ್ರ ಕ್ಷೇತ್ರವಾಗಿರುವ ಶೃಂಗೇರಿ ಪೀಠವನ್ನು 'ದೇವಿ' ಧಾರಾವಾಹಿಯಲ್ಲಿ ಅವಹೇಳನಕಾರಿಯಾಗಿ ತೋರಿಸಲಾಗಿದೆ" ಎಂದು ನಿರ್ದೇಶಕ ರಮೇಶ್ ಇಂದಿರಾ ವಿರುದ್ಧ ಅಲ್ಲಿನ ಮಂದಿ ತಿರುಗಿಬಿದ್ದಿದ್ದಾರೆ. ಕೂಡಲೇ ಧಾರಾವಾಹಿಯಲ್ಲಿ ತೋರಿಸಲಾಗುತ್ತಿರುವ ಅನಗತ್ಯ ದೃಶ್ಯಗಳಿಗೆ ಕತ್ತರಿ ಹಾಕದಿದ್ದರೆ ಜೀ ಟೀವಿ ವಿರುದ್ಧ ಶೃಂಗೇರಿಯ ಕರ್ಮಟರು ಪ್ರತಿಭಟನೆ ಮಾಡುವ ಬೆದರಿಕೆ ಒಡ್ಡಿದ್ದಾರೆ.


ಗೀತಪ್ರಿಯರ ಗಂಟಲು ಸದ್ದು ಮಾಡುತ್ತಿಲ್ಲ...

ರೆಸ್ಟೋರೆಂಟ್ ಒಂದರಲ್ಲಿ ಲೆಕ್ಕ ಬರೆದುಕೊಂಡಿದ್ದು, ನಂತರ ಸಿನಿಮಾ ಸೆಳೆತದಿಂದ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಲಕ್ಷ್ಮಣ್ ಮೋಹಿತ್ ಎಂಬ ಪ್ರತಿಭೆ ಗೀತಪ್ರಿಯ ಎಂಬ ಹೆಸರಿನಲ್ಲಿ ಕನ್ನಡ ಸಿನಿಮಾಲೋಕಕ್ಕೆ ಮಾಡಿದ ಸೇವೆ ಅಪಾರ.

ಇಪ್ಪತ್ತಮೂರು ಕನ್ನಡ ಸಿನಿಮಾಗಳು, ಮೂರು ತುಳು, ಒಂದು ಹಿಂದಿ ಸೇರಿದಂತೆ ಒಟ್ಟು 27 ಸಿನಿಮಾಗಳನ್ನು ನಿರ್ದೇಶಿಸಿದವರು ಗೀತಪ್ರಿಯ. ಮಾತ್ರವಲ್ಲ ಗೀತಪ್ರಿಯ ಬರೆದ ಹಾಡುಗಳು ಇನ್ನೂರೆಪ್ಪತ್ತಕ್ಕೂ ಅಧಿಕ. ಮಣ್ಣಿನ ಮಗ, ಮದುವೆ ಮದುವೆ ಮದುವೆ, ಬೆಸುಗೆ, ಹೊಂಬಿಸಿಲು, ಭೂಪತಿ ರಂಗ, ಕಾಡಿನ ರಹಸ್ಯ, ಕಲ್ಯಾಣಿ, ನಾರಿ ಮುನಿದರೆ ಮಾರಿ, ಯಾವ ಜನ್ಮದ ಮೈತ್ರಿ, ಜೀವನ ಜೋಕಾಲಿ, ಬೆಳುವಳದ ಮಡಿಲಲ್ಲಿ, ಅನುರಾಗ ಬಂಧನ, ಪುಟಾಣಿ ಏಜೆಂಟ್ 123, ಪ್ರಚಂಡ ಪುಟಾಣಿಗಳು... ಹೀಗೆ ಗೀತಪ್ರಿಯ ನಿರ್ದೇಶಿಸಿದ ಬಹಳಷ್ಟು ಸಿನಿಮಾಗಳು ಆ ಕಾಲಕ್ಕೆ ಯಶಸ್ವಿಯಾಗಿದ್ದವು ಮತ್ತು ಬಹುತೇಕ ನಟರಿಗೆ ಸ್ಟಾರ್‌ಗಿರಿ ತಂದುಕೊಟ್ಟಿದ್ದವು.



ಗೀತಪ್ರಿಯ ಬರೆದ ಹಾಡುಗಳು ಇವತ್ತಿಗೂ ಗುನುಗುವಂಥವು. ಇಂಥ ಮೇರು ಪ್ರತಿಭೆ ಈಗ ಗಂಟಲು ಕ್ಯಾನ್ಸರ್‌ನಿಂದ ತತ್ತರಿಸಿಹೋಗಿದ್ದಾರೆ. ತಮ್ಮಿಡೀ ಬದುಕನ್ನು ಸಿನಿಮಾಕ್ಕಾಗಿಯೇ ಮೀಸಲಿಟ್ಟ ಗೀತಪ್ರಿಯ ಆರ್ಥಿಕವಾಗಿ ತೀರ ಸಂಕಷ್ಟದಲ್ಲಿದ್ದಾರೆ. ಜೊತೆಗೆ ಪ್ರಾಣ ತಿನ್ನುವ ಕಾಯಿಲೆ ಬಾಧಿಸುತ್ತಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಐವತ್ತು ಸಾವಿರ ನೀಡಿದೆ. ನಟ ರಮೇಶ್ ಅರವಿಂದ್, ಎಂ.ಎಸ್. ರಮೇಶ್ ಮುಂತಾದವರು ಗೀತಪ್ರಿಯರ ಖರ್ಚುವೆಚ್ಚಗಳನ್ನು ಭರಿಸುವುದಾಗಿ ಹೇಳಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಕೂಡಾ ಗೀತಪ್ರಿಯರ ನೆರವಿಗೆ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಚಿತ್ರರಂಗದವರು ಮಾತ್ರವಲ್ಲದೆ ಚಿತ್ರಾಸಕ್ತರೂ ಗೀತಪ್ರಿಯರಿಗೆ ಸಹಕಾರಿಯಾಗಬೇಕಿದೆ...



ರಾಕ್‌ಲೈನ್ ಮಾಲಾಮಾಲ್

'ಡಕೋಟ ಎಕ್ಸ್‌ಪ್ರೆಸ್' ಎಂಬ ಹಾಸ್ಯಚಿತ್ರದ ಮುಖಾಂತರ ನಿರ್ದೇಶಕ ಓಂ ಪ್ರಕಾಶ್ ಅವರ ನಟನಾ ಪ್ರತಿಭೆ ಹೊರಹೊಮ್ಮಿದ್ದು ನಿಮಗೆಲ್ಲ ಗೊತ್ತಿದೆ. ಸುಮಾರು ಎಂಟು ವರ್ಷಗಳ ಹಿಂದೆ ಎಂ.ಎಸ್.ರಾಜಶೇಖರ್ ನಿರ್ದೇಶನದ ಈ ಚಿತ್ರದಲ್ಲಿ ಓಂ ಪ್ರಕಾಶ್ ಮತ್ತು ರಾಕ್‌ಲೈನ್ ವೆಂಕಟೇಶ್ ನಾಯಕ ನಟನಾಗಿ ನಟಿಸಿದ್ದರು. ಆ ದಿನದಲ್ಲಿ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಸಿಕ್ಕಾಪಟ್ಟೆ ಯಶಸ್ಸನ್ನು ಗಳಿಸಿತ್ತು ಮಾತ್ರವಲ್ಲ, ಇತರೆ ದೊಡ್ಡದೊಡ್ಡ ನಾಯಕ ನಟರೆಲ್ಲ ಇವರತ್ತ ಆಶ್ಚರ್ಯದಿಂದ ತಿರುಗಿ ನೋಡುವಂತೆ ಮಾಡಿತ್ತು. ಈಗ ಎಂಟು ವರ್ಷಗಳ ನಂತರ ರಾಕ್‌ಲೈನ್ ವೆಂಕಟೇಶ್ ಮತ್ತು ಓಂ ಪ್ರಕಾಶ್ ಮತ್ತೆ ನಾಯಕರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇವರುಗಳ ಜೊತೆಗೆ ದೊಡ್ಡಣ್ಣ ಮತ್ತು ಮುಖ್ಯಮಂತ್ರಿ ಚಂದ್ರು ಕೂಡ ನಟಿಸುತ್ತಿದ್ದಾರೆ. ಚಿತ್ರದ ಹೆಸರು 'ಮಾಲಾಮಾಲ್'.

ಇತ್ತೀಚೆಗೆ ರಾಕ್‌ಲೈನ್ ವೆಂಕಟೇಶ್ ಪೀಣ್ಯದಲ್ಲಿ ಮಾಲ್ ಕಟ್ಟಿಸಿರುವುದಕ್ಕೂ ಈಗ ಈ 'ಮಾಲಾಮಾಲ್' ಚಿತ್ರವನ್ನು ಕೈಗೆತ್ತಿಕೊಂಡಿರುವುದಕ್ಕೂ ಸಂಬಂಧವೇ ಇಲ್ಲ. ಇದು 1988 ಮತ್ತು 1998 ರಲ್ಲಿ ಹಿಂದಿಯಲ್ಲಿ ಭಾರಿ ಯಶಸ್ಸನ್ನು ಕಂಡಿದ್ದ 'ಮಾಲಾಮಾಲ್' ಚಿತ್ರದ ರೀಮೇಕು. ಸ್ವತಃ ರಾಕ್‌ಲೈನ್ ವೆಂಕಟೇಶ್ ತನ್ನ ರಾಕ್‌ಲೈನ್ ಪ್ರೊಡಕ್ಷನ್‌ನಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈಗ ಲಾಂಗು-ಮಚ್ಚು ಹಿರೋಗಳ ಅಬ್ಬರದಿಂದ ಬೇಸರಗೊಂಡಿರುವ ಪ್ರೇಕ್ಷಕರಿಗೆ ರಾಕ್‌ಲೈನ್, ಓಂ ಪ್ರಕಾಶ್ ಮತ್ತು ಚಂದ್ರು ಅವರ ಹಾಸ್ಯ ರಿಲೀಫ್ ಕೊಡಬಹುದೇನೋ?

ವತ್ತು ಉಪ್ಪಿನಂಗಡಿ ವೇಗವಾಗಿ ಬೆಳೆಯುತ್ತಿರುವ ಊರುಗಳಲ್ಲೊಂದು. ಜನರಿಗೆ ನೆಮ್ಮದಿಯ ಜೀವನ ಬೇಕೇ ಹೊರತು ಗಲಭೆಯಲ್ಲಿ ಯಾಗಿ ಜೈಲುಕಂಬಿ ಎಣಿಸುವುದಲ್ಲ.

ಕ್ಷಿಣದ ಕಾಶಿಯೆಂದೇ ಹೆಸರುವಾಸಿಯಾದ ನಮ್ಮ ಉಪ್ಪಿನಂಗಡಿಯಲ್ಲಿ ಶಾಂತಿ ನೆಲೆಸಲಿ. ಪ್ರಭಾಕರ ಭಟ್ಟನಂತಹವರ ಮರಣ ಮೃದಂಗಕ್ಕೆ ಉಪ್ಪಿನಂಗಡಿ ವೇದಿಕೆ ಆಗದಿರಲಿ. ನಾವೆಲ್ಲರೂ ಸದಾಕಾಲ ದರರಂತೆ ಬಾಳುವಂತಾಗಲಿ.

- ಅಮೀನ್, ಉಪ್ಪಿನಂಗಡಿ

ಸಹಕಾರಿ ಸಚಿವ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ದರಾದ ಸಿ.ಸಿ ಪಾಟೀಲ್ ವಿಧಾನಸಭೆಯ ಕಲಾಪ ನಡೆಯುವ ರ್ಭದಲ್ಲಿ ಮೊಬೈಲ್ ಮೂಲಕ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿ ದ ಗೌರವಕ್ಕೆ ಧಕ್ಕೆ ತಂದಿರುವುದನ್ನು ಕ್ಯಾಂಪಸ್ ಫ್ರಂಟ್ ಆಫ್ ಯಾ ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಜನರು ಮತ ಹಾಕಿ ಇವರನ್ನು ಆಯ್ಕೆ ಮಾಡಿದ್ದು ಸದನದಲ್ಲಿ ತು ಬ್ಲೂಫಿಲಂ ನೋಡಲು ಅಲ್ಲ. ಆ ಇಬ್ಬರಿಗೆ ಜನರ ಹಿತಕ್ಕಿಂತ ಲ ಚಿತ್ರಗಳೇ ಮುಖ್ಯವೆನಿಸಿದರೆ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಲಿ. ಅದು ಬಿಟ್ಟು ಜನತೆಯ ತಾಳ್ಮೆ ಪರೀಕ್ಷಿಸುವ ಸಾಹಸಕ್ಕೆ ಅವರು ಾಕಕೂಡದು.

- ಮೊಹಮ್ಮದ್ ಶಕೀರ್, ಅಧ್ಯಕ್ಷ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಕರ್ನಾಟಕ ಘಟಕ

ಈಗ ಅದು ಬಿಜೆಪಿ (ಭಾರತೀಯ ಜನತಾ ಪಕ್ಷ) ಅಲ್ಲ, ಬದಲಾಗಿ ಫ್‌ಪಿ (ಬ್ಲೂ ಫಿಲಂ ಪಕ್ಷ)!

- ಡಾ. ಶರತ್, ತರೀಕೆರೆ

ದೇಶದ್ರೋಹಿ ಪ್ರಭಾಕರ ಕಲ್ಲಡ್ಕ ಭಟ್ಟನ ನೇತೃತ್ವದಲ್ಲಿ ಪ್ರತಿ ಮಂಗಳವಾರ ನಸೌಧದಲ್ಲಿ ಬಿಜೆಪಿ ಶಿಖಾಮಣಿ ಸಚಿವರುಗಳಿಗೆ ಸೆಕ್ಸ್ ಫಿಲಂ ಡುವ ವ್ಯವಸ್ಥೆಯನ್ನು ಮುಖ್ಯಮಂತ್ರಿ ಸದಾನಂದ ಗೌಡರು ಅತಿ ಶೀಘ್ರದಲ್ಲೇ ಕೊಡಬೇಕೆಂದು ವಿನಂತಿ. ಅತ್ಯಾಚಾರ, ಲೂಟಿ, ಕೋಮುಗಲಭೆ ಈ ಸ್ಸ್ ನಿರ್ಮಿತ ಬಿಜೆಪಿಗಳು ರಾಜ್ಯದಲ್ಲಿ ಮಾಡುತ್ತಿರುವ ಉತ್ತಮ ನೆಗಳು. ಇಂತಹ ಸಚಿವರುಗಳನ್ನು ಆರಿಸಿ ಕಳುಹಿಸಿದ ನಾಡಿನ ಜನತೆಗೆ ನಂದನೆಗಳು.

- ರವಿ ಶೆಟ್ಟಿ, ಮಂಗಳೂರು

ರೇವ್ ಪಾರ್ಟಿಯು ಭಾರತೀಯ ಸಂಸ್ಕೃತಿಯನ್ನು ನಾಶಮಾಡುತ್ತದೆ. ಆದರೆ ಸದಲ್ಲಿ ಬ್ಲೂಫಿಲಂ ನೋಡುವ ಸಂಸ್ಕೃತಿಯು ಯಾವುದನ್ನು ರಕ್ಷಿಸುತ್ತದೆ?


- ಎ.ಜೆ.ಸೂರ್ಯವಂಶಿ

ಶಾಲಾ ವಿದ್ಯಾರ್ಥಿಯೊಬ್ಬ ಪ್ರಾಥಮಿಕ ಶಿಕ್ಷಣ ಸಚಿವ ಕಾಗೇರಿಗೆ ಒಂದು ವನ್ನು ಬರೆದ. ಆ ಪತ್ರದಲ್ಲಿ ಆ ಬಾಲಕ ಹೀಗೊಂದು ಚಟಾಕಿ ಹಾರಿಸಿದ: ರ್, ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಅಸಾಧ್ಯ, ಯಾಕೆಂದರೆ ಶೇ ಹಷ್ಟು ಶಾಲೆಗಳಿಗೆ ಬಾಗಿಲುಗಳೇ ಇಲ್ಲ!!"

- ಎ.ಬಿ.ಉಂದಿ, ಖಾನಾಪುರ, ಬೆಳಗಾವಿ

ಆರೆಸ್ಸೆಸ್ ನೇತೃತ್ವದ ಸಂಘಪರಿವಾರವು ಅನೈತಿಕ ಕ್ರಿಯೆಗಳ ಪರಂಪರೆಯನ್ನೇ ಹುಟ್ಟುಹಾಕುತ್ತಿದೆ.

2007ರ ಏಪ್ರಿಲ್ ತಿಂಗಳಲ್ಲಿ ಗುಜರಾತಿನಿಂದ ಚುನಾಯಿತನಾಗಿದ್ದ ಸಂಸದ ಬಾಬುಭಾಯ್ ಖಟಾರ ಎಂಬಾತ ಓರ್ವ ಮಹಿಳೆಯನ್ನು ತನ್ನ ಪತ್ನಿ ಎಂದು ವಿದೇಶಕ್ಕೆ ಕರೆದುಕೊಂಡು ಹೊರಟಿದ್ದಾಗ ಸಿಕ್ಕಿಬಿದ್ದಿದ್ದ. ವಾಸ್ತವವಾಗಿ ಆತ ಆಕೆಯನ್ನು ವಿದೇಶದಲ್ಲಿ ಮಾರಿ ಹಣ ಸಂಪಾದಿಸುವ ಯೋಜನೆ ಹಾಕಿಕೊಂಡಿದ್ದ.



2006ರ ಆಗಸ್ಟ್‌ನಲ್ಲಿ ಸಂಘಪರಿವಾರದ ಅಂಗವಾಗಿರುವ ಎಬಿವಿಪಿಯ ಗೂಂಡಾಗಳು ಪ್ರೊ. ಎಚ್.ಎಸ್. ಸಬರ್‌ವಾಲ್ ಎಂಬುವವರನ್ನು ಕೊಂದು ಹಾಕಿದ್ದರು.

2000ದಿಂದ 2007ರ ತನಕ ಸ್ವಾಮಿ ಅಸೀಮಾನಂದ, ಕರ್ನಲ್ ಪುರೋಹಿತ್, ಸಾಧ್ವಿ ಪ್ರಜ್ಞಾಸಿಂಗ್ ಎಂಬುವವರು ಸೇರಿಕೊಂಡು ಅಭಿನವ ಭಾರತ ಎಂಬ ಮತ್ತೊಂದು ಸಂಘಪರಿವಾರದ ಗುಂಪನ್ನು ಸ್ಥಾಪಿಸಿ ದೇಶದ ವಿವಿಧ ಕಡೆ ಬಾಂಬ್‌ಗಳನ್ನು ಸ್ಫೋಟಿಸಿ ಹಲವಾರು ಅಮಾಯಕ ಜನರನ್ನು ಕೊಂದುಹಾಕಿದ್ದರು.


2005ರಲ್ಲಿ ಸಂಜಯ್ ಜೋಷಿ ಎಂಬ ಮತ್ತೊಬ್ಬ ಆರೆಸ್ಸೆಸ್ ಮುಖಂಡ (ಈಗ ಮಧ್ಯ ಪ್ರದೇಶದಿಂದ ಚುನಾಯಿತನಾದ ಸಂಸದ ಕೂಡ ಆಗಿದ್ದ) ಓರ್ವ ಮಹಿಳೆಯೊಂದಿಗೆ ಸೆಕ್ಸ್ ಸೀಡಿಯಲ್ಲಿ ಸಿಕ್ಕಿಬಿದ್ದಿದ್ದ.

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಸುಷ್ಮಾ ಸ್ವರಾಜ್ ಎಂಬ ಬಿಜೆಪಿ ನಾಯಕಿ ರಾಜಘಟ್‌ನಲ್ಲಿ ಕುಣಿದು ಸುದ್ದಿ ಮಾಡಿದ್ದಳು.

ಈಗ ಇಂತಹದ್ದೇ ಇತಿಹಾಸ ಸೃಷ್ಟಿಸುವ ಸರದಿ ಮಾನ್ಯ ಪಾಲೇಮಾರ್, ಸವದಿ ಮತ್ತು ಪಾಟೀಲನದ್ದು.

ಆರೆಸ್ಸೆಸ್ಸಿನ 'ಸಂಸ್ಕೃತಿ' ಮತ್ತು ಬಿಜೆಪಿಯ 'ಶಿಸ್ತು' - ಇವೆರಡನ್ನೂ ಮೆಚ್ಚಬೇಕು!!

- ರವಿಕುಮಾರ್, ಹಾಸನ



ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಮೂಲಭೂತವಾದವು ತಿರುಗುಬಾಣವಾಗಿ, ಪರೋಕ್ಷವಾಗಿ ಬಹುಸಂಖ್ಯಾತ ಸಮುದಾಯಗಳಲ್ಲಿನ ಮೂಲಭೂತವಾದವನ್ನು ಹೆಚ್ಚಿಸಿದೆ ಎಂದು ತಮ್ಮ ಸಂಪಾದಕೀಯದಲ್ಲಿ (ಲಂಕೇಶ್ 8.2.12 ಕಂಡಹಾಗೆ) ಹೇಳಿದ್ದು ಸರಿ.

ಆದರೆ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯಲ್ಲಿ ಮುಸ್ಲಿಮರಷ್ಟೇ ದೊಡ್ಡ ಸಂಖ್ಯೆಯಲ್ಲಿರುವ ಕ್ರೈಸ್ತರ ಬಗ್ಗೆ ಹೇಳಬೇಕೆಂದರೆ, ಅವರೆಂದೂ ಮೂಲಭೂತವಾದ ತೋರಿಸಿಲ್ಲವಾದರೂ ಹಿಂದೂತ್ವವಾದಿಗಳು ಅವರನ್ನು ವಿನಾಕಾರಣ ಟಾರ್ಗೆಟ್ ಮಾಡುತ್ತಾ ಕಿರುಕುಳ ಕೊಡುತ್ತಾ ಇರುತ್ತಾರೆ. ಇಲ್ಲಿಯ ಕ್ರೈಸ್ತರಲ್ಲಿ 90% ಕೆಥೋಲಿಕ್ ಪಂಗಡದವರು. ಅವರೆಂದೂ ಮತಾಂತರಕ್ಕೆ ಕೈಹಾಕಿಲ್ಲ, ಅಷ್ಟೇ ಅಲ್ಲ, ಕ್ರೈಸ್ತ ಹುಡುಗಿಯರು ಹಿಂದೂ ಹುಡುಗರನ್ನು ಮದುವೆಯಾಗಿ ಹಿಂದೂ ಧರ್ಮ ಸ್ವೀಕರಿಸಿದ ಹಲವು ಉದಾಹರಣೆಗಳಿವೆ, (ಇದಕ್ಕೆ ರಿವರ್ಸ್ ಲವ್-ಜೆಹಾದ್ ಎನ್ನಬಹುದೇ!?) ಇಂದು ಕರ್ನಾಟಕದಲ್ಲಿ ಸಾಕ್ಷರತೆ ಹಾಗೂ ಉನ್ನತ ವ್ಯಾಸಂಗದಲ್ಲಿ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯು 'ನಂಬರ್-ಒನ್' ಸ್ಥಾನದಲ್ಲಿದ್ದರೆ ಅದಕ್ಕೆ ಮೂಲಕಾರಣ ಹಳ್ಳಿ-ಹಳ್ಳಿಗಳಲ್ಲಿರುವ ಕ್ರೈಸ್ತರ ಅಚ್ಚ ಕನ್ನಡ-ಮಾಧ್ಯಮ ಶಾಲೆಗಳು. ಇಲ್ಲಿ ಕ್ರೈಸ್ತರ ಮಾತೃಭಾಷೆ ಕೊಂಕಣಿಯಾದರೂ ಅವರು ತಮ್ಮ ಮನೆಯ ಹೊರಗೆ ಸ್ವಚ್ಛ ತುಳು ಅಥವಾ ಕನ್ನಡದಲ್ಲೇ ವ್ಯವಹರಿಸುತ್ತಾರೆ. ಕೊಂಕಣಿ-ಗೌಡಸಾರಸ್ವತ ಬ್ರಾಹ್ಮಣರಂತೆ ಕ್ರೈಸ್ತರು ತಮ್ಮ ಸುತ್ತ ಭಾಷೆ ಅಥವಾ ಜಾತಿಯ ಗೋಡೆ ಕಟ್ಟಿಕೊಂಡಿಲ್ಲ. ಕ್ರೈಸ್ತ ಹೆಂಗಸರು ಹಿಂದೂ ದೇವಸ್ಥಾನಗಳಲ್ಲಿ ಹರಕೆಯ ಉರುಳುಸೇವೆಯನ್ನು ಮಾಡುವುದನ್ನೂ ನಾನು ನೋಡಿದ್ದೇನೆ.

ಇಷ್ಟೆಲ್ಲವಿದ್ದರೂ, ಯಾವುದೇ ಪ್ರಚೋದನೆಯಿಲ್ಲದೇ ಕೇಸರಿಪಡೆಗಳು ಹಿಂದಿನ 10-15 ವರ್ಷಗಳಿಂದ ನಿರಂತರವಾಗೇ ಕ್ರೈಸ್ತರನ್ನು ಟಾರ್ಗೆಟ್ ಮಾಡುತ್ತಿವೆ ಹಾಗೂ ಈ ನಿರುಪದ್ರವಿಗಳ ವಿರುದ್ಧ ಅಪ್ರಬುದ್ಧ ಹೀಯಾಳಿಕೆಯ ಹೇಳಿಕೆ ಕೊಟ್ಟು (ಇತ್ತೀಚಿನ ಉದಾಹರಣೆ-ಕಲ್ಲಡ್ಕನ ಉಪ್ಪಿನಂಗಡಿ ಪ್ರಲಾಪ), ಪದೇ-ಪದೇ ಕ್ರೈಸ್ತರನ್ನು provoke ಮಾಡಲು ಹಿಂದೂತ್ವವಾದಿಗಳು ಶತಪ್ರಯತ್ನ ಮಾಡಿದರೂ ಕ್ರೈಸ್ತರು ಸಹನೆ ಹಾಗೂ ಶಾಂತಿಯಿಂದ ಇರುವುದು ಮೂಲಭೂತವಾದ ಯಾವಾಗಲೂ ಪ್ರತಿ-ಮೂಲಭೂತವಾದವನ್ನು ಹುಟ್ಟು ಹಾಕುವುದಿಲ್ಲ ಎಂಬುದಕ್ಕೆ ಸಾಕ್ಷಿ.

ಭಾಷೆಯ ವಿಷಯದಲ್ಲಿ ದುರಭಿಮಾನವು ಪ್ರತಿಯಾಗಿ ನಿರಭಿಮಾನಿಗಳಲ್ಲೂ ಅಭಿಮಾನ ಕೆರಳಿಸುತ್ತದೆ ಎಂಬುದು ನಿಜ. ಬೆಂಗಳೂರಿನಲ್ಲಿ ತಮಿಳರ ಭಾಷಾ ದುರಭಿಮಾನವು ನಿರಭಿಮಾನಿ ಕನ್ನಡಿಗರಲ್ಲೂ ಸ್ವಲ್ಪ ಅಭಿಮಾನವನ್ನು ಕೆರಳಿಸಿದ್ದು ನಿಜ. ಅದರಂತೆ ಬೆಳಗಾವಿಯಲ್ಲೂ ದಶಕಗಳಿಂದ ಮರಾಠಿಗರ ಕಿಡಿಗೇಡಿ ಬುದ್ಧಿ ನೋಡಿ-ನೋಡಿ, ಹೇಡಿಗಳಂತಿದ್ದ ಅಲ್ಲಿಯ ಕನ್ನಡಿಗರಲ್ಲೂ ಸ್ವಲ್ಪ ಕನ್ನಡದ ಅಭಿಮಾನ ಹುಟ್ಟಿಸಿದೆ. ಬೆಳೆದಿದ್ದು (ನಾನು ಬೆಳಗಾವಿಯಲ್ಲಿ ಹುಟ್ಟಿ ಬೆಳೆದಿದ್ದು ಈಗಲೂ ಬೆಳಗಾವಿಯ ಸಂಪರ್ಕವಿದೆ.)

-ಪ್ರವೀಣ್ ಶೆಟ್ಟಿ, ಮಂಗಳೂರು

ಸಚಿನ್ ಭಾರತ ರತ್ನ ಬೇಡ. ಪೆಪ್ಸಿ, ಕೋಕಕೋಲಾದಂತಹ ವಿದೇಶಿ ಕಂಪನಿಗಳ ಪೋಸ್ಟರ್‌ಗೆ ದೇಶದ ಘನತೆಯನ್ನು ಬಿಕರಿ ಮಾಡಿದ ಸಚಿನ್‌ಗೆ ಭಾರತ ರತ್ನ ಕೊಟ್ಟರೆ ಅದು ಅಂಬೇಡ್ಕರ್ ಅಂತಹ ವ್ಯಕ್ತಿತ್ವಕ್ಕೆ ಮಾಡಿದ ಅವಮಾನವೇ ಸರಿ.

-ಎಸ್‌ಎಂಎಸ್ ಮೂಲಕ

ಹಿಂದೂ ಧರ್ಮಕ್ಕೆ ಮೊದಲನೆ ಹಾಗೂ ಕಡೆಯ ಶತ್ರು ಅಂತಿದ್ದರೆ ಅದು ಆರೆಸ್ಸೆಸ್ ಮಾತ್ರ. ಹಿಂದೆ ಚಿಕ್ಕಮಗಳೂರಿನಲ್ಲಿ ಹನುಮಂತನ ವಿಗ್ರಹಕ್ಕೆ ಈ ಆರೆಸ್ಸೆಸ್ ಖೂಳರೇ ಚಪ್ಪಲಿಹಾರ ಹಾಕಿ ದೊಡ್ಡ ಕೋಮು ಗಲಭೆ ಎಬ್ಬಿಸಲು ಪ್ರಯತ್ನ ಮಾಡಿದ್ದರು.

ಅಮೇಧ್ಯ ತಿನ್ನಲಿಕ್ಕೂ ಲಾಯಕ್ಕಾಗಿಲ್ಲದ ಮಂದಿ ಇವರು. ಪತ್ರಿಕೆಯನ್ನು ಮೆಚ್ಚಬೇಕು. ಈ ಖೂಳರ ಚಿದ್ದಿ ಬಿಚ್ಚಿದ್ದಕ್ಕಾಗಿ.

-ರವಿ, ಹಾಸನ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/-



ಮಹೇಂದರ್ ಮತ್ತೊಂದು ಮದುವೆ!



ಇತ್ತೀಚೆಗಷ್ಟೇ ನ್ಯಾಯಾಲಯ ನಿರ್ದೇಶಕ ಮಹೇಂದರ್ ಮತ್ತು ನಟಿ ಶೃತಿಗೆ ವಿಚ್ಛೇದನ ನೀಡಿತ್ತು, ಈಗ ಶೃತಿಯ ಮಾಜಿ ಪತಿ ಎಸ್. ಮಹೇಂದರ್ ಹೊಸ ಬದುಕು ಆರಂಭಿಸಿದ್ದಾರೆ. ಯಾವ ಸದ್ದುಗದ್ದಲವಿಲ್ಲದೆ ಮೊನ್ನೆ ಫೆಬ್ರವರಿ 3ನೇ ತಾರೀಖು ಮೈಸೂರಿನಲ್ಲಿ ಯಶೋಧ ಎಂಬಾಕೆಯೊಂದಿಗೆ ಮದುವೆಯಾಗಿದ್ದಾರೆ.

ಮಹೇಂದರ್ ಕೈ ಹಿಡಿದಿರುವ ಯಶೋಧ ಯಾರು? ಚಿತ್ರರಂಗಕ್ಕೆ ಸಂಬಂಧಿಸಿದವರಾ? ಬಹುಕಾಲದ ಪರಿಚಿತರಾ? ಎಂಬಿತ್ಯಾದಿ ಯಾವ ಮಾಹಿತಿಯೂ ಸದ್ಯಕ್ಕೆ ಹೊರಬಿದ್ದಿಲ್ಲ. ಮಹೇಂದರ್‌ಗೆ ಗಳಸ್ಯ ಕಂಠಸ್ಯರಾಗಿರುವ ನಿರ್ಮಾಪಕ ರಮೇಶ್ ಯಾದವ್‌ರನ್ನು ಈ ಬಗ್ಗೆ ಕೇಳಿದರೆ "ಮನೇಲಿ ಹೆಣ್ಣು ನೋಡ್ತಿದ್ರು, ಮದುವೆಯಾಗ್ತೀನಿ ಅಂತ ಹೇಳಿದ್ರು. ಆದರೆ ಮದುವೆಗೆ ನನ್ನನ್ನೇ ಕರೆದಿಲ್ಲ, ನಮ್ ತಾಳ್ಮೆಗೆ ನಾನು ಹೇಳ್ತಿರೋದನ್ನ ನಂಬಿ" ಎಂದು ಭಯಂಕರ ಗಾಬರಿಯಿಂದ ಮಾತಾಡುತ್ತಿದ್ದಾರೆ.

ಕನ್ನಡ ವಿರೋಧಿ ನಿರ್ಮಾಪಕರು!



ಸದನದಲ್ಲಿ ಪೋಲಿ ದೃಶ್ಯಾವಳಿಗಳನ್ನು ನೋಡುತ್ತಿದ್ದ ಸಚಿವರ ವಿಡಿಯೋಗಳು ಹೊರಬೀಳುವ ಹೊತ್ತಿಗೇ ಚಿತ್ರರಂಗದಲ್ಲೂ ಒಂದಿಷ್ಟು ವಿವಾದ ಹುಟ್ಟಿಸುವ ಫೋಟೋಗಳು ಗದ್ದಲವೆಬ್ಬಿಸಿವೆ!

ದಿನೇಶ್ ಗಾಂಧಿ, ಉಮೇಶ್ ಬಣಕಾರ್ ಮತ್ತು ಎ. ಗಣೇಶ್‌ರಂಥ ನಿರ್ಮಾಪಕರು ಮತ್ತು ವಾಣಿಜ್ಯ ಮಂಡಳಿಯ ಕೆಲವು ಪದಾಧಿಕಾರಿಗಳು ಇತ್ತೀಚೆಗೆ ನಡೆದ ಚೆನ್ನೈ ವರ್ಸಸ್ ಬೆಂಗಳೂರು ಸಿಸಿಎಲ್ ಕ್ರಿಕೆಟ್ ಪಂದ್ಯಾವಳಿಯ ಸಂದರ್ಭದಲ್ಲಿ ಚೆನ್ನೈ ವಾರಿಯರ್ಸ್ ತಂಡವನ್ನು ಬೆಂಬಲಿಸಿ, ಅವರ ಧ್ವಜವನ್ನು ಹಿಡಿದು ನಿಂತಿರುವ ಫೋಟೋಗಳವು. ಇದಕ್ಕೆ ಕಾರಣ ಸುದೀಪ್ ಮೇಲಿನ ಪರ್ಸನಲ್ ಕಿರಿಕ್ಕುಗಳ ಒಂದೆಡೆಯಾದರೆ, ತಮ್ಮನ್ನು ವಿಐಪಿ ಸೀಟಿನಲ್ಲಿ ಕೂರಿಸದೇ 250 ರುಪಾಯಿಯ ಟಿಕೇಟು ನೀಡಿದರು ಮತ್ತು ಕಾರು ನಿಲುಗಡೆಗೆ ಅವಕಾಶ ಕೊಡಲಿಲ್ಲ ಎಂಬ ಕಾರಣ ಮತ್ತೊಂದೆಡೆ, ಇದಕ್ಕೇ ಇವರು ಚೆನ್ನೈ ತಂಡವನ್ನು ಬೆಂಬಲಿಸಿದ್ದಾರೆ. ಈ ನಿರ್ಮಾಪಕರು ಹೀಗೆ ಉದ್ದೇಶಪೂರ್ವಕವಾಗಿ ಮಾಡಿದ್ದರ ಫೋಟೋವನ್ನು ಸುದೀಪ್ ಖುದ್ದಾಗಿ ಮೀಡಿಯಾಗಳಿಗೆ ತಲುಪಿಸಿದ್ದಾರೆ.

ಈ ಫೋಟೋಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದಂತೇ ರಾಕ್‌ಲೈನ್ ವೆಂಕಟೇಶ್, ಜಯಮಾಲಾ, ಸಾರಾ ಗೋವಿಂದು ಮತ್ತು ಇತರರು ಗರಂ ಆಗಿ ಬಣಕಾರ್ ಮತ್ತು ಗಾಂಧಿ ವಿರುದ್ಧ ಬಾಂಬು ಸಿಡಿಸುತ್ತಿದ್ದಾರೆ.

ಚೆನ್ನೈ ತಂಡವನ್ನು ಬೆಂಬಲಿಸಿ ಸಿಕ್ಕುಬಿದ್ದಿರುವ ನಿರ್ಮಾಪಕರು ಈಗ ತಲೆದಂಡದಿಂದ ತಪ್ಪಿಸಿಕೊಳ್ಳಲು ಒದ್ದಾಡುತ್ತಿದ್ದಾರೆ.

'ಸುನಾಮಿ'ಯ ರುದ್ರನರ್ತನ



"ಎರಡುಸಾವಿರದ ಹನ್ನೆರಡರ ಆರಂಭದಲ್ಲಿ ಪ್ರಳಯ ಗ್ಯಾರಂಟಿ!"

ತಿಂಗಳ ಹಿಂದಷ್ಟೇ ಜಗತ್ತಿನ ವಿವಿಧೆಡೆ ಕೆಲವು ಹುಚ್ಚರು ಹೀಗೆಲ್ಲ ಬೊಬ್ಬೆ ಇಟ್ಟಿದ್ದರೂ ಅದರ ಬಗ್ಗೆ ಜನ ತಲೆಕೆಡಿಸಿಕೊಂಡಿರಲಿಲ್ಲ. ಆದರೆ ನಮ್ಮ ಗಾಂಧಿನಗರದ ಕೆಲವು ಜನ ಮಾತ್ರ ಈಗಲೂ ಅದರ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದಾರೆ! ಆದರೆ, ಇಲ್ಲಿ ಪ್ರಳಯವಾಗುವ ಬದಲು 'ಸುನಾಮಿ' ಎದುರಾಗಿದೆ. ಹೌದು, ಇತ್ತೀಚೆಗೆ 'ಸುನಾಮಿ' ಎಂಬ ಚಿತ್ರ ಬಿಡುಗಡೆಯಾಗಿ ಅದರ ನಿರ್ಮಾಪಕ ಕಮ್ ನಾಯಕ ನಟ ರಾಜೂ ಪಾಟೀಲ್ ಬೀದಿಗೆ ಬಂದು ನಿಂತಿದ್ದಾರೆ.

ಮೂರೂವರೆ ವರ್ಷಗಳ ಹಿಂದೆ ಸೆಟ್ಟೇರಿದ 'ಸುನಾಮಿ' ಚಿತ್ರ ಬಿಡುಗಡೆಯಾಗಿದ್ದು ಕಳೆದ ವಾರ. ದುರಂತವೆಂದರೆ, ಈ ಚಿತ್ರ ಶುರುವಾದಾಗ ಇದರ ನಿರ್ಮಾಪಕ ರಾಜೂ ಅವರ ಬೆರಳು-ಕೈ-ಕುತ್ತಿಗೆ ಮೊದಲಾದ ಕಡೆ ಚಿನ್ನದ ವಸ್ತುಗಳು ತುಂಬಿತುಳುಕುತ್ತಿದ್ದವು. ಆತ ರಸ್ತೆಯಲ್ಲಿ ಬರುತ್ತಿದ್ದರೆ ಆತನ ಹಿಂದೆ-ಮುಂದೆ ಕಾರುಗಳು, ಬೈಕುಗಳು ತಾಮುಂದು, ನಾಮುಂದು ಎಂದು ಬರುತ್ತಿದ್ದವು. ಅದೇ ರಾಜೂ ಪಾಟೀಲ್ ಈಗ ಕೇರ್‌ಆಫ್ ಫುಟಪಾತ್ ಆಗಿದ್ದಾರೆ. ಕೈ-ಕಿಸೆ ಎರಡೂ ಖಾಲಿ ದೋಸೆಗೆ ಸೀಮಿತವಾಗಿದೆ.

ಮಜಾ ಎಂದರೆ, ಇದೇ 'ಸುನಾಮಿ' ಚಿತ್ರದ ಮುಹೂರ್ತದ ಹೊತ್ತಿನಲ್ಲಿ ಖಾಲಿ ಕೈಯಲ್ಲಿದ್ದ ಆ ಚಿತ್ರದ ನಿರ್ದೇಶಕ ಮಾಕಂ ಮನೋಹರ್ ಇಂದು 'ಬಂಗಾರದ ಮನುಷ್ಯ' ಆಗಿದ್ದಾರೆ. ಅಂದು ಕಾಲಲ್ಲೇ ಓಡಾಡುತ್ತಿದ್ದ ಮನೋಹರ್ ಇಂದು ಕಾರು-ಬಾರು ಎಂದುಕೊಂಡು ಸಿಕ್ಕಸಿಕ್ಕಲ್ಲಿ ಸುತ್ತಾಡುತ್ತಿದ್ದಾರೆ.

ಇತ್ತ ರಾಜು ಪಾಟೀಲ್ ಮೈತುಂಬ ಸಾಲ ಮಾಡಿಕೊಂಡು, ಬಡ್ಡಿ ಕಟ್ಟಲಾಗದೇ ಕದ್ದು ಮುಚ್ಚಿ ಆಟೋ-ಬಸ್ಸಲ್ಲಿ ಓಡಾಡುತ್ತಿದ್ದರೆ ಅತ್ತ ಮನೋಹರ್ ಎರಡು ಚಿತ್ರಗಳಿಗೆ ಫೈನಾನ್ಸ್ ಮಾಡುವ ಮಟ್ಟಕ್ಕೆ ಬೆಳೆದಿದ್ದಾರೆ!

ಈಗ ಹೇಳಿ, 2012ರಲ್ಲಿ ಪ್ರಳಯ ಆಗದಿದ್ದರೂ ರಾಜೂ ಪಾಟೀಲ್ ಪಾಲಿಗೆ 'ಸುನಾಮಿ' ಸಂಭವಿಸಿದ್ದು ಸುಳ್ಳಾ?!

ಓಂಪ್ರಕಾಶ್ ಮಾತು ಕೇಳುವವರು ಯಾರು?



ಓಂ ಪ್ರಕಾಶ್ ನಿರ್ದೇಶಿಸಿರುವ 25ನೇ ಚಿತ್ರ 'ಎ.ಕೆ 56' ಸದ್ಯದಲ್ಲೇ ತೆರೆಕಾಣಲಿದೆ. ಅಪಘಾತಕ್ಕೆ ಒಳಗಾದ ನಂತರ ಕಳೆದ ಎರಡು ವರ್ಷಗಳಿಂದ ಅಜ್ಞಾತವಾಸದಲ್ಲಿದ್ದ ಓಂ ಪ್ರಕಾಶ್ ಬದುಕುಳಿದು ಬಂದದ್ದೇ ಅವರ ಪುಣ್ಯ. ಈ ಎರಡು ವರ್ಷಗಳ ಅವಧಿಯಲ್ಲಿ ಉದ್ಯಮದಲ್ಲಿ ಯಾರು ಸ್ನೇಹಿತರು? ಯಾರು ಹಿತೈಷಿಗಳು? ಯಾರು ಬಂಧುಗಳು? ಎಂದು ಅವರಿಗೆ ಅರಿವಾಗಿದೆಯಂತೆ.

ಅದಿರಲಿ, ಆಘಾತದಿಂದ ಚೇತರಿಸಿಕೊಂಡಿರುವ ಓಂ ಪ್ರಕಾಶ್ ತನ್ನ ವೃತ್ತಿ ಜೀವನದ ಅತ್ಯಂತ ಅದ್ದೂರಿ ಚಿತ್ರವನ್ನು ತೆರೆಗೆ ನೀಡಲು ಸಿದ್ಧರಾಗಿದ್ದಾರೆ. "ನನ್ನ ಚಿತ್ರವನ್ನು ನೋಡಲು ತಮಿಳು ಮತ್ತು ತೆಲುಗು ಚಿತ್ರರಂಗದ ನಿರ್ದೇಶಕರು ಕಾದು ಕುಳಿತಿದ್ದಾರೆ, ಫೋನ್ ಮಾಡಿ ಕೇಳುತ್ತಿದ್ದಾರೆ. ಆದರೆ ಕನ್ನಡದಲ್ಲಿ ಮಾತ್ರ ಒಬ್ಬನೇ ಒಬ್ಬ ನಿರ್ದೇಶಕನೂ ಈತನಕ ನನಗೆ ಫೋನ್ ಮಾಡಿಲ್ಲ" ಎಂದು ಅವರು ವಿಷಾದವನ್ನು ವ್ಯಕ್ತಪಡಿಸಿದರು.

"ನಾನು ಹಿರಿಯ ನಟ ಎನ್.ಎಸ್.ರಾವ್ ಅವರ ಪುತ್ರನಾಗಿದ್ದೇ ನನ್ನ ಸೌಭಾಗ್ಯ. ಆ ನಂತರ ನಾನು ಉದ್ಯಮದಲ್ಲಿ ಕಮರ್ಷಿಯಲ್ ನಿರ್ದೇಶಕನಾಗಿ ಗುರುತಿಸಿಕೊಂಡಿದ್ದು ನನ್ನ ಮತ್ತೊಂದು ಅದೃಷ್ಟ" ಎಂದು ತಮ್ಮ ವೃತ್ತಿಜೀವನದ ಬಗ್ಗೆ ಸಂತೋಷ ವ್ಯಕ್ತಪಡಿಸಿದ ಓಂ ಪ್ರಕಾಶ್ "ಈ 25 ವರ್ಷಗಳಲ್ಲಿ ನಾನು ಸಂಪಾದಿಸಿರುವುದು ಈ ತರಹದ ಪ್ರೀತಿಯನ್ನು ಮಾತ್ರ ವಿನಃ ಬೇರೇನನ್ನೂ ಅಲ್ಲ" ಎಂದು ಭಾವುಕರಾದರು. ಅವರು 25 ಚಿತ್ರಗಳನ್ನು ನಿರ್ದೇಶಿಸಿದ್ದರೂ ಯಾವೊಬ್ಬ ನಿರ್ಮಾಪಕನೂ ಅವರಿಗೆ ಈತನಕ ಮೊದಲೇ ನಿಗದಿಪಡಿಸಿದ್ದಷ್ಟು ಸಂಭಾವನೆಯನ್ನು ನೀಡೇ ಇಲ್ಲವಂತೆ. ಅವರೇ ಹೇಳುವ ಪ್ರಕಾರ ಸುಮಾರು ಎರಡು ಕೋಟಿ ರೂಪಾಯಿಗಳು ಅವರಿಗೆ ಉದ್ಯಮದವರಿಂದ ಬಾಕಿ ಬರಬೇಕಾಗಿದೆ. "ಈಗಲೂ ಸಹ ಬಡ್ಡಿ ಹಣದಲ್ಲೇ ನಾನು ಜೀವನ ನಡೆಸುತ್ತಿದ್ದೇನೆ" ಎಂದು ಓಂ ಪ್ರಕಾಶ್ ತನ್ನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿದರು. "ನಾನು ಒಳ್ಳೆಯ ಚಿತ್ರಕ್ಕಾಗಿ ಏನು ಬೇಕಾದರೂ ತ್ಯಾಗ ಮಾಡುತ್ತೇನೆ, ಒಳ್ಳೆಯ ಕೆಲಸ ಸಿಕ್ಕಿತೆಂದರೆ ನಾನು ಹಣದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ಅದನ್ನೇ ಉದ್ಯಮದವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ" ಎಂದೂ ಅವರು ವಿಷಾದಪಟ್ಟರು.

ಅದೆಲ್ಲ ಏನೇ ಇರಲಿ, ಈಗಲೂ ಸಹ ಓಂ ಪ್ರಕಾಶ್ ಹಿಂದಿನಂತೆ ಮಾತು ಮಾತಿಗೂ 'ಸುಸಂಸ್ಕೃತ ಪದಗಳನ್ನು' ಯಥೇಚ್ಛವಾಗಿ ಬಳಸುವುದನ್ನು ನಿಲ್ಲಿಸಿಲ್ಲ, ಈ ವಿಷಯದಲ್ಲಿ ಮಾತ್ರ ಅವರು ಬದಲಾಗಿಲ್ಲ ಎಂದರೆ ತಪ್ಪಾಗದು!!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com